ಎಚ್. ಎಸ್. ಭೀಮನಗೌಡರ ಅವರ
ಸಮಗ್ರ ಸಾಹಿತ್ಯ

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ
ಸಂಪ್ರಬಂಧ)

ಸಂಶೋಧಕ
ಕೆಂಪಣ್ಣ. ಶಿ. ಪರಪ್ಪಗೋಳ

ಮಾರ್ಗದರ್ಶಕರು
ಡಾ. ಜಿ.ಎಲ್.ಹೆಗಡೆ

ಕನ್ನಡ ವಿಭಾಗ
ಶ್ರೀ ಬಿ.ಆರ್. ದರೂರ ಸಂಶೋಧನಾ ಕೇಂದ್ರ,
ಹಾರೂಗೇರಿ. ತಾ:ರಾಯಬಾಗ

ಸಂಯೋಜನೆ : ಕನ್ನಡ ವಿಶ್ವವಿದ್ಯಾಲಯ, ಹಂಪಿ.
ವಿದ್ಯಾರಣ್ಯ - ೫೮೩೨೭೬

೨೦೦೮

433

ಪರಾಮರ್ಶೆಗೆ ಮಾತ್ರ

"ಸಿರಿಗನ್ನಡ" ಗ್ರಂಥಾಲಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

433

AKSHARA GRANTHALAYA
ACC.NO. 130070

433

433

ಎಚ್. ಎಸ್. ಭೀಮನಗೌಡರ ಅವರ ಸಮಗ್ರ ಸಾಹಿತ್ಯ

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧಕ
ಕೆಂಪಣ್ಣ. ಶಿ. ಪರವ್ವಗೋಳ

ಮಾರ್ಗದರ್ಶಕರು
ಡಾ. ಜಿ.ಎಲ್.ಹೆಗಡೆ

ಕನ್ನಡ ವಿಭಾಗ
ಶ್ರೀ ಬಿ.ಆರ್. ದರೂರ ಸಂಶೋಧನಾ ಕೇಂದ್ರ,
ಹಾರೂಗೇರಿ. ತಾ:ರಾಯಬಾಗ

ಸಂಯೋಜನೆ : ಕನ್ನಡ ವಿಶ್ವವಿದ್ಯಾಲಯ, ಹಂಪಿ.
ವಿದ್ಯಾರಣ್ಯ – ೫೮೩೨೭೬

೨೦೦೮

8KO

130070

ದೃಢೀಕರಣ ಪತ್ರ

ಕೆಂಪಣ್ಣ. ಶಿವಲಿಂಗಪ್ಪ. ಪರವ್ವಗೋಳ ಇವರು **ಎಚ್.ಎಸ್.ಭೀಮನಗೌಡರ ಅವರ ಸಮಗ್ರ ಸಾಹಿತ್ಯ** ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಹಾರೂಗೇರಿಯ ಶ್ರೀ ಬಿ.ಆರ್. ದರೂರ ಸಂಶೋಧನಾ ಕೇಂದ್ರದ ಮೂಲಕ **ಹಂಪಿ ಕನ್ನಡ ವಿಶ್ವವಿದ್ಯಾಲಯದ** ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಎಂ.ಫಿಲ್.ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧವನ್ನು ಇವರು ಈ ಮೊದಲು ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವದಿಲ್ಲ ಮತ್ತು ಈ ಮೊದಲು ಎಲ್ಲಿಯೂ ಇಡಿಯಾಗಲಿ, ಬಿಡಿಯಾಗಲಿ ಪ್ರಕಟವಾಗಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ:ಹಾರೂಗೇರಿ
ದಿನಾಂಕ: 8/10/08

ಡಾ.ಜಿ.ಎಲ್.ಹೆಗಡೆ
ಮಾರ್ಗದರ್ಶಕರು
ಡಾ. ಎ.ವ್ಹಿ. ಬಾಳಿಗಾ ಕಲಾ ಮತ್ತು ವಿಜ್ಞಾನ
ಮಹಾವಿದ್ಯಾಲಯ,
ಕುಮಟಾ (ಉ.ಕ.)

ಪ್ರಮಾಣ ಪತ್ರ

ಎಚ್.ಎಸ್.ಭೀಮನಗೌಡರ ಅವರ ಸಮಗ್ರ ಸಾಹಿತ್ಯ ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಡಾ.ಜಿ.ಎಲ್.ಹೆಗಡೆ ಅವರ ಮಾರ್ಗದರ್ಶನದಲ್ಲಿ ನಾನು ಸಿದ್ಧಪಡಿಸದ್ದೇನೆ. ಹಾರೂಗೇರಿಯ, ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯದ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧವನ್ನು ಈ ಮೊದಲು ನಾನು ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವದಿಲ್ಲ ಮತ್ತು ಈ ಮೊದಲು ಇದನ್ನು ಇಡಿಯಾಗಿ ಇಲ್ಲವೆ ಬಿಡಿಯಾಗಿ ಪ್ರಕಟಿಸಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ:ಹಾರೂಗೇರಿ
ದಿನಾಂಕ: 8/10/08

ಕೆಂಪಣ್ಣ. ಶಿ. ಪರವ್ವಗೋಳ
ಸಂಶೋಧಕ
ಶ್ರೀ ಬಿ.ಆರ್.ದರೂರ ಸಂಶೋಧನಾ ಕೇಂದ್ರ
ಹಾರೂಗೇರಿ.

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್. ಅಧ್ಯಯನ ಮಾಡಲು ಅವಕಾಶ ಮಾಡಿಕೊಟ್ಟ ಮಾನ್ಯ ಕುಲಪತಿಗಳಾದ ಡಾ. ಎ.ಮುರಿಗೆಪ್ಪ ಅವರಿಗೆ, ಪ್ರಸ್ತುತ ಕುಲಸಚಿವರಾದ ಡಾ.ಹಿ.ಚಿ.ಬೋರಲಿಂಗಯ್ಯ ಅವರಿಗೆ, ಅಧ್ಯಯನಾಂಗದ ನಿರ್ದೇಶಕರಾದ ಡಾ. ಪಾಂಡುರಂಗ ಬಾಬು ಅವರಿಗೆ, ಅಧ್ಯಯನದ ಕ್ರಮವನ್ನು ಬೋಧಿಸಿ ಪ್ರೀತಿಯಿಂದ ಕಾಳಜಿವಹಿಸಿ ಮಾರ್ಗದರ್ಶನ ಮಾಡಿದ ಡಾ.ಜಿ.ಎಲ್.ಹೆಗಡೆ ಅವರಿಗೆ, ಅಧ್ಯಯನದ ಅವಧಿಯಲ್ಲಿ ಪೂರಕ ಮಾಹಿತಿಯನ್ನು ನೀಡಿದ ನನ್ನ ವಿದ್ಯಾ ಗುರುಗಳಾದ ಹಾರೂಗೇರಿಯ ಸಂಶೋಧನಾ ಸಂಸ್ಥೆಯ ನಿರ್ದೇಶಕರಾದ, ಡಾ.ವ್ಹಿ.ಎಸ್.ಮಾಳಿ ಮತ್ತು ಡಾ.ಬಿ.ಆರ್.ಚಿಲುಮಿ ಹಾಗೂ ಹಾರೂಗೇರಿ ಮಹಾವಿದ್ಯಾಲಯದ ಪ್ರಾಚಾರ್ಯರು ಮತ್ತು ಸಿಬ್ಬಂದಿ ವರ್ಗ ಅವರಿಗೆ,

ಸದಾ ನನ್ನ ಏಳ್ಗೆಯನ್ನು ಬಯಸುತ್ತಿರುವ ತಂದೆ ಶಿವಲಿಂಗಪ್ಪಾ, ತಾಯಿ ಬಸಮ್ಮ, ಸಹೋದರ ಶ್ರೀ ಬಸವರಾಜ ಮತ್ತು ಶ್ರೀಮತಿ ಜಯಶ್ರೀ, ಸೊಸೆಯಂದಿರಾದ ದಾನೇಶ್ವರಿ, ಅಕ್ಷತಾ, ಮಾವನಾದ ಶ್ರೀ ಶೇಖರ ಮತ್ತು ಶ್ರೀಮತಿ ಶೋಭಾ, ನನ್ನ ಧರ್ಮ ಪತ್ನಿಯಾದ ಶ್ರೀದೇವಿ ಹಾಗೂ ಕಳ್ಳು-ಬಳ್ಳಿಯ ಸಂಬಂಧಿಕರಿಗೆ, ನನ್ನ ಅಧ್ಯಯನದ ಸಂದರ್ಭದಲ್ಲಿ ಸೂಕ್ತ ಸಲಹೆಗಳನ್ನು ನೀಡಿದ ಪ್ರೊ.ಸಿ.ಡಿ.ಅಕ್ಕಿ, ಪ್ರೊ.ಜಿ.ವ್ಹಿ.ಮಳಗಿ, ಡಾ.ಸಿ.ಕೆ.ನಾವಲಗಿ, ಗೋಕಾಕ ಶಿಕ್ಷಣ ಸಂಸ್ಥೆಯ ಪ್ರಾಚಾರ್ಯರು ಸಹಪ್ರಾಧ್ಯಾಪಕರು, ಅಧ್ಯಕ್ಷರಿಗೆ, ಆಡಳಿತ ಮಂಡಳಿಯ ಸದಸ್ಯರಿಗೆ,

ನನ್ನ ಆತ್ಮೀಯ ಮಿತ್ರರಾದ ಸುರೇಶ ಹಣಗಂಡಿ, ಎಂ.ಜಿ.ತವಗಮಠ, ರಾಜು ಕಂಬಾರ, ಸತ್ಯೆಪ್ಪಾ ಪಂಗಣ್ಣವರ, ಡಿ.ಎಸ್.ಹುಗ್ಗಿ, ಆರ್.ಎಸ್.ಬಡಿಗೇರ, ಟಿ.ಎಸ್.ವಂಟಗುಡಿ, ಧರ್ಮಣ್ಣ ನಡಟ್ಟಿ ಅವರುಗಳಿಗೆ, ಅಚ್ಚುಕಟ್ಟಾಗಿ ಅಕ್ಷರ ಸಂಯೋಜಿಸಿ ಕೊಟ್ಟ ನನ್ನ ಮಿತ್ರನಾದ ಎಂ.ವ್ಹಿ.ಕರಡಿಗುದ್ದಿ ಅವರಿಗೆ,

ಕೃತಜ್ಞತೆಗಳು

ಕೆಂಪಣ್ಣ ಶಿವಲಿಂಗಪ್ಪ. ಪರವ್ವಗೋಳ

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ಸ್ವರೂಪ

ಅಧ್ಯಾಯ ೧
ಅಧ್ಯಯನದ ಉದ್ದೇಶ ಮತ್ತು ಸ್ವರೂಪ

ಆಧುನಿಕ ಘಟ್ಟ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿಯೇ ಅತ್ಯಂತ ಮಹತ್ವಪೂರ್ಣವಾದದ್ದು. ಏಕೆಂದರೆ ಸಾಹಿತ್ಯ ಒಂದು ನಿರಂತರ ಪ್ರವಾಹ. ಹಳೆಯ ನೀರನ್ನು ಹೊಸ ನೀರು ಕೊಚ್ಚಿಕೊಂಡೊಯ್ಯುವಂತೆ ಸಾಹಿತ್ಯವು ಸಹಿತ ಕಾಲಕಾಲಕ್ಕೆ ಸೃಷ್ಟಿಯಾಗುತ್ತ ಅಂದಂದಿನ ಸಾಮಾಜಿಕ ಚಿತ್ರಣವನ್ನು ಸಂಸ್ಕೃತಿಯ ಮಟ್ಟವನ್ನು ಮಾನವನ ಜೀವನವನ್ನು ಪ್ರತಿಬಿಂಬಿಸುವ ಕೆಲಸ ಮಾಡುತ್ತದೆ. ಹತ್ತನೆಯ ಶತಮಾನದಿಂದ ಇಪ್ಪತ್ತೊಂದನೆಯ ಶತಮಾನದವರೆಗೂ ಕನ್ನಡ ಸಾಹಿತ್ಯ ವಿಶ್ವ ಸಾಹಿತ್ಯಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದೆ.

ನವೋದಯ, ಪ್ರಗತಿಶೀಲ, ನವ್ಯ, ದಲಿತ, ಬಂಡಾಯ ಈ ನಾಲ್ಕು ಘಟ್ಟಗಳು ವೈವಿಧ್ಯಮಯವಾಗಿ ಹುಲುಸಾಗಿ ಚೆಳೆದಿವೆ. ಹೀಗೆ ಸಮೃದ್ಧವಾಗಿ ಬೆಳೆಯಲು ಹಲವಾರು ಸಾಹಿತ್ಯ ಪ್ರಕಾರಗಳು ಹಾಗೂ ಹಲವು ಸಾಹಿತಿಗಳು ತಮ್ಮದೇ ಆದ ಕಾಣಿಕೆಯನ್ನು ನೀಡಿದ್ದಾರೆ. ಅವುಗಳಲ್ಲಿ ಪ್ರಮುಖವಾಗಿ ಕಾವ್ಯ ಸಾಹಿತ್ಯ ಒಂದು ಹೊಸ ಹೆದ್ದಾರಿಯನ್ನು ನಿರ್ಮಿಸಿದೆ.

ಕಾವ್ಯದ ಮಾತು ಬಂದಾಗ ಪ್ರಾಚೀನ ಕಾಲದಿಂದಲೇ ಅದಕ್ಕೆ ಪ್ರಥಮ ಮನ್ನಣೆ, ಹೆಚ್ಚಿನ ಗೌರವಾದರಗಳು ಪುರಸ್ಕೃತಗೊಂಡಿದ್ದು ಜನಜನಿತ ವಿಷಯ. ಗದ್ಯ-ಪದ್ಯ ಎರಡೂ ಪ್ರಕಾರಗಳು ಜೊತೆ ಜೊತೆಯಾಗಿಯೇ ತಮ್ಮ ಹುಟ್ಟು ವಿಧಿ ನಿಯಮಗಳನ್ನು ಪಡೆದುಕೊಂಡರೂ ಪದ್ಯದ ಸ್ಥಾನ ಹಿರಿಯದಾಗಿ 'ಜನವಾಣಿ ಬೇರಾಗಿ ಕವಿವಾಣಿ ಹೂವಾಗಿ' ಅರಳುತ್ತ ಬಂದಿರುವುದು ವಾಸ್ತವ ಸತ್ಯ.

ಕನ್ನಡ ಸಾಹಿತ್ಯ ರೂಪಗಳಲ್ಲಿಯೇ ಕಾವ್ಯರೂಪವಿಶೇಷ, ಕುತೂಹಲ ಪೂರ್ಣವಾದ ಒಂದು ಸಂಕೀರ್ಣ ಮಾಧ್ಯಮ ಎನ್ನಬಹುದು. ಗಾಢವಾಗಿ ರಹಸ್ಯವನ್ನು ಭೇದಿಸಿ, ಸ್ವಕೀಯ-ಪರಕೀಯ ಅನುಭವಗಳನ್ನು ಜೀವನ ಪ್ರೀತಿಯಿಂದ ದಾಖಲಿಸಿಕೊಡುವ ಸೂಕ್ಷ್ಮ ಅಂತರ್ಯಾಣದ ಉತ್ಪನ್ನವಿದ್ದು, ಈ ಕಾವ್ಯ ಪ್ರಕ್ರಿಯೆ ಅನ್ನುವುದು ಬಲು ವಿಚಿತ್ರ-ಅದ್ಭುತವಾದುದು; ಅಷ್ಟೇ ಸುಂದರ ರಸಗ್ರಹಣಕ್ಕೆ ಸಂಕೇತವಾದುದು.

ಕವಿ ತಾನು ಆರಿಸಿಕೊಂಡ ವಸ್ತು ಪರಂಪರೆಗೆ ಸಂಬಂಧಿಸಿದಂತೆ, ತನ್ನ ಕಾವ್ಯೋದ್ದೇಶವನ್ನು ಕುರಿತು, ತನ್ನ ಕೃತಿಯ ಭಾಷೆಯನ್ನು ತನ್ನ ವೈಯಕ್ತಿಕ ಸಂಗತಿಗಳನ್ನು ಕುರಿತು, ಸತ್ಕಾವ್ಯ ಲಕ್ಷಣವನ್ನು ಕುರಿತು, ಅಸತ್ಕಾವ್ಯವನ್ನು ತನ್ನ ಕಾವ್ಯ ಕಲ್ಪನೆಯನ್ನೂ ತನ್ನ ವಿಚಾರಗಳನ್ನು ಈ ಕಾವ್ಯ ಚರ್ಚೆ ಒಳಗೊಂಡಿದ್ದಾಗಿರುತ್ತಿತ್ತು. ಆದರೆ ಹೊಸಗನ್ನಡ ಕವಿಗಳಲ್ಲಾದರೂ, ಹಿಂದಿನ ಕಥನ ಸಂಪ್ರದಾಯದಿಂದ ಭಿನ್ನವಾದ, ಬಿಡಿಬಿಡಿಯಾದ

ವ್ಯಕ್ತಿನಿಷ್ಠ ಕವನಾಭಿವ್ಯಕ್ತಿಗಳಲ್ಲಿ ಈ ಕಾವ್ಯ ಚಿಂತನೆ ಕೂಡಾ ಪ್ರಾಸಂಗಿಕವಾಗಿ ಕಾವ್ಯವಸ್ತುವಾಗಿ ನಿರ್ವಹಣೆಗೊಂಡಿದೆ ಎನ್ನುವದು ವಿಶೇಷದ ಸಂಗತಿಯಾಗಿದೆ.

ಕವಿಗಳು ಅಂದಂದಿನ ನೆಲೆಗಳಲ್ಲಿ ನಿಂತು ಕಾವ್ಯವನ್ನು ಕುರಿತು ನಡೆಯಿಸಿದ ಚಿಂತನೆಗಳು ಆಯಾ ಮಾರ್ಗದ ದಿಕ್ಕು-ದೆಸೆ ಧೋರಣೆಗಳನ್ನು ನಿರೂಪಿಸುವ ಮತ್ತು ತಮಗೆ ಹಿನ್ನಲೆಯಾದ ಸಾಹಿತ್ಯ ಸಂಪ್ರದಾಯಕ್ಕೆ ಪ್ರತಿಕ್ರಿಯಿಸಿದ ರೀತಿಯನ್ನು ಸ್ವಾರಸ್ಯವಾಗಿ ನಿರೂಪಿಸುತ್ತವೆ ಇದಕ್ಕೆ ಭೀಮನಗೌಡರ ಅವರು ಹೊರತಾಗಿಲ್ಲ.

ಅದಕ್ಕಾಗಿ ಭೀಮನಗೌಡರ ಕಾವ್ಯದಲ್ಲಿ ಸ್ಪಷ್ಟತೆ, ಕೆಲವು ಧೊರಣೆಗಳು ತಟ್ಟನೆ ಗೋಚರಿಸುವದಿಲ್ಲ ಎಂದು ಕೆಲವರ ಅನಿಸಿಕೆಯಾಗಿದೆ. ಅದಕ್ಕೆ ಅವರ ಸ್ವತಃ ಅಭಿಪ್ರಾಯ ಹೀಗಿದೆ. 'ಕಾವ್ಯವೇ ಒಂದು ಅಸ್ಪಷ್ಟ ಮಾಧ್ಯಮ ಅದನ್ನು ಸ್ಪಷ್ಟಗೊಳಿಸಲು ಹೋದರೆ ಕಾವ್ಯದ ಅಂಶವೇ ಇಲ್ಲದಾಗುವದು. ನಿಗೂಢತೆ ಕಾವ್ಯದಲ್ಲಿದ್ದರೆ ಅದು ಧ್ವನಿ ಪೂರ್ಣವೆನಿಸುತ್ತದೆ'

ನವ್ಯದಲ್ಲಿ ಒಂದು ನಿರ್ದಿಷ್ಟ ಧೋರಣೆ ಇತ್ತು. ನವ್ಯೋತ್ತರದಲ್ಲಿ ಅದು ಅಷ್ಟು ಸ್ಪಷ್ಟವಾಗಿ ಕಾಣುವದಿಲ್ಲ. ಇದಕ್ಕೆ ನವ್ಯೋತ್ತರದ ಗುಣ ಲಕ್ಷಣಗಳನ್ನು ಕಂಡು ಹಿಡಿಯುವ ವಿಮರ್ಶಕರ ಕೊರತೆಯೇ ಕಾರಣವೆಂಬುದು ಅವರ ಇನ್ನೊಂದು ಅಭಿಪ್ರಾಯ.

ಕಾವ್ಯ ರಚಿಸುವದು ಕವಿಗೆ ಅಂತರಂಗದ ಖುಷಿಯಾದರೆ, ಓದುಗನ ನಿಲುವಿಗೆ ಅದೊಂದು ಮಾನಸಿಕ ರುಚಿಯಾಗಿ ಪಾಲ್ಗೊಳ್ಳುತ್ತದೆ, ಜೀವನ ವಿವೇಚನೆಯ ಪಾತಳಿಯಾಗಿ ಎದುರಾಗುತ್ತದೆ. ಹೀಗೆ ಇನ್ನು ಹಲವು ಕಾರಣಗಳು ಈ ಕಲೆಗೆ ಇರಬಹುದು. ವಿದ್ಯಾರ್ಥಿ ಸಮಯದಿಂದಲೂ ಕಾವ್ಯ ಕುತೂಹಲಗಳನ್ನು ನಿಬ್ಬೆರಗಾಗಿ ನೋಡುತ್ತಾ ಅಧ್ಯಯನಿಸುತ್ತಾ, ರಚಿಸುವ ಆಸಕ್ತಿ ತೋರಿಸುತ್ತ ಬಂದ ನನಗೆ ಕಾವ್ಯ ಮಾಧ್ಯಮದ ಬಗ್ಗೆಯೇ ಸಂಶೋಧನೆ ಮಾಡುವ ಹಸಿಯಾದ ಕನಸುಗಳಿದ್ದವು.

ಈ ರೂಪದ ಬಗ್ಗೆ ಅಗಾಧವಾದ ಪ್ರೀತಿ ಇತ್ತು. ಈ ಒಂದು ಮಾನಸಿಕವಾದ ಹಿನ್ನಲೆಯೇ ಇಡಿಯಾದ ಕಾವ್ಯಾಭ್ಯಾಸಿಯಸ್ನಾಗಿ ಕ್ರಮಬದ್ಧವಾದ ಅಧ್ಯಯನದ ಕಡೆಗೆ ನನ್ನನ್ನು ನೂಕಿತು ಎಂದು ಭಾವಿಸಿರುವೆ. ಸಂಪ್ರಬಂಧದ ವಸ್ತುವಾಗಿ, ಸಂಶೋಧನೆಯ ಅಧ್ಯಯನವನ್ನಾಗಿ, ಹೊಸಗನ್ನಡ ಕಾವ್ಯದಲ್ಲಿ ನವ್ಯ-ನವ್ಯೋತ್ತರ ಕಾಲಘಟ್ಟದಲ್ಲಿ ಕಾವ್ಯ ಕೃಷಿ ಮಾಡಲು ಆರಂಭಿಸಿದ, ತಮ್ಮದೆ ಆದ ವ್ಯಕ್ತಿತ್ವವನ್ನು ರೂಪಿಸಿಕೊಂಡ. ನವ್ಯ ಕವಿ ಎಚ್.ಎಸ್.ಭೀಮನಗೌಡರ ಅವರ ಸಮಗ್ರ ಸಾಹಿತ್ಯವನ್ನು ಆಯ್ಕೆಮಾಡಿಕೊಂಡೆ. ಏಕೆಂದರೆ ಈ ಮೊದಲೇ ಹೊಸಗನ್ನಡ ಸಾಹಿತ್ಯದ ಬಗ್ಗೆ ನನಗೊಂದು ಬಗೆಯ ಒಲವು ಇರುವುದನ್ನು ಗುರುತಿಸಿಕೊಂಡೆ.

ನವ್ಯ ಸಾಹಿತ್ಯದ ಬಗ್ಗೆ ನನಗೆ ತುಂಬ ಆಸಕ್ತಿಯೂ ಆಗಾಗ ಮೂಡುತ್ತಿತ್ತು. ಓೀಗಾಗಿ ಅಡಿಗೋತ್ತರ ಹೊಸ ಜನಾಂಗದ ಕವಿಯಾಗಿರುವ ಮತ್ತು ಅವರ ಪ್ರಭಾವದಲ್ಲಿ ಉತ್ತೇಜಿತರಾಗಿರುವ, ಭೀಮನಗೌಡರ ಅವರ ಕವನಗಳನ್ನು ಓದುವಾಗ ನಮಗೆ ಚಕ್ಕನೆ

ಮೆಚ್ಚುಗೆಯಾಗುವ ಮಾತೆಂದರೆ ಅವರ ವೈಶಿಷ್ಟ್ಯಪೂರ್ಣವಾದ ಭಾಷೆ, ಭಾಷೆಯಲ್ಲಿ ನೈಜತೆಯಿದೆ, ಸರಳತೆಯಿದೆ. ಆದರೂ ಅದು ವ್ಯಂಜಕತೆಯಿಂದ ತುಂಬಿತುಳುಕುತ್ತದೆ. ರೂಪಕಗಳು, ನಿರಾಯಾಸವಾಗಿ ಒಂದೊಂದೇ ಶಬ್ದದಲ್ಲಿ ಅರಳಿ ನಿಲ್ಲುತ್ತವೆ. ಹೀಗಾಗಿ ಅವರ ಕವನ ಸಂಕಲನಗಳು ಗಮನಾರ್ಹವಾಗಿವೆ.

ಅವರ ಕಾವ್ಯ ದೊಡ್ಡದು, ಅವರ ವ್ಯಕ್ತಿತ್ವ ಅದಕ್ಕಿಂತ ದೊಡ್ಡದು, ಕಾವ್ಯದಲ್ಲಿ ಎತ್ತರದ ವ್ಯಕ್ತಿತ್ವವನ್ನು ಹೊಂದಿದಂಥ ಭೀಮನಗೌಡರ ಅವರ ಕಾವ್ಯಾಧ್ಯಯನ, ವಿಮರ್ಶೆ ಲೇಖನಗಳ ಅಧ್ಯಯನ ಮಾಡುವುದು ಹೊಸಗನ್ನಡ ಕಾವ್ಯದ ಹಿನ್ನಲೆಯಲ್ಲಿ ಪ್ರಸ್ತುತ ಸ್ತುತ್ಯಕಾರ್ಯವೆನಿಸಿತು. ಅದಕ್ಕಾಗಿ ಸಂಶೋಧನೆಯ ತಾತ್ವಿಕ ಗುಣಗಳಲ್ಲಿಯೇ ಬದುಕಿನ ಸತ್ವಪೂರ್ಣ ಅಂಶಗಳನ್ನು ಅರಸುವ, ಗುರುತಿಸುವ ಪ್ರಯತ್ನಕ್ಕೆ ಗಮನಹರಿಸಿದ್ದೇನೆ. ನವ್ಯ ನವ್ಯೋತ್ತರದ ಪಂಥದಲ್ಲಿ ಬೆಳೆಯುತ್ತ ಬಂದ ಈ ಕವಿಯ ಕಾವ್ಯವನ್ನು ಮುಂಚೆಯೇ ಗಮನಿಸಿದ ನನಗೆ, ಎಚ್.ಎಸ್.ಭೀಮನಗೌಡರ ಅವರ ಸಮಗ್ರ ಸಾಹಿತ್ಯ ಎಂಬ ಶೀರ್ಷಿಕೆಯನ್ನು ಸಂಪ್ರಬಂದಕ್ಕೆ ಇಟ್ಟುಕೊಂಡು ಅದರಲ್ಲಿ ಆರು ಅಧ್ಯಾಯಗಳನ್ನಾಗಿ ವಿಂಗಡಿಸಿಕೊಂಡಿದ್ದೇನೆ.

ಮೊದಲನೆಯ ಅಧ್ಯಾಯದಲ್ಲಿ ಭೀಮನಗೌಡರ ಸಮಗ್ರ ಸಾಹಿತ್ಯವನ್ನು ಅಧ್ಯಯನಕ್ಕೆ ಒಳಪಡಿಸಿಕೊಂಡಿದ್ದರ ಉದ್ದೇಶ-ಸ್ವರೂಪವನ್ನು ಕಾವ್ಯದ ಹಿನ್ನಲೆಯಲ್ಲಿ ಸ್ಪಷ್ಟಪಡಿಸುಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಭೀಮನಗೌಡರ ಅವರ ಒಟ್ಟು ಕಾವ್ಯದ ಅಧ್ಯಯನಕ್ಕೆ ಪೂರಕವಾಗುವದರ ಹಿನ್ನಲೆಯಲ್ಲಿ; ಆಧುನಿಕ ಕನ್ನಡ ಕಾವ್ಯ, ನವ್ಯ ಮತ್ತು ನವ್ಯೋತ್ತರ ಸಂದರ್ಭದಲ್ಲಿ ಆಧುನಿಕ ಕನ್ನಡ ಕಾವ್ಯದ ಹಿನ್ನಲೆ ಮತ್ತು ಚಾರಿತ್ರಿಕ ಸಂದರ್ಭ, ನವ್ಯ ಸಾಹಿತ್ಯದ ಲಕ್ಷಣ ಮತ್ತು ಪ್ರಮುಖ ಕವಿಗಳು, ನವ್ಯ ಕಾವ್ಯದ ಭಾಷೆ-ರೀತಿ, ನವ್ಯ ಕಾವ್ಯದಲ್ಲಿ ಗೋಕಾಕರ ಮಾರ್ಗ, ಅಡಿಗರು ಮತ್ತು ಪ್ರಮುಖ ಕವಿಗಳ ಕೊಡುಗೆ, ನವ್ಯೋತ್ತರ ಸಂದರ್ಭ, ಈ ಪರಂಪರೆಯ ಜಾಡಿನಲ್ಲಿ ಬೆಳೆದು ಬಂದಿರುವ ಬಗೆಯನ್ನು ವಿಶ್ಲೇಷಣೆ ಮಾಡಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಭೀಮನಗೌಡರ ಅವರ ಕಾವ್ಯದ ಧೋರಣೆ ಮತ್ತು ಆಶಯವನ್ನು ಸ್ಪಷ್ಟಪಡಿಸುವದರ ಮೂಲಕ ವ್ಯಕ್ತಿನೆಲೆ ಮತ್ತು ವಾಸ್ತವ ಪ್ರಜ್ಞೆ, ಸಾಮಾಜಿಕ ಹಾಗೂ ರಾಜಕೀಯ ಪ್ರಜ್ಞೆ, ನಿಸರ್ಗ ಪ್ರಜ್ಞೆ, ಪ್ರೇಮ-ಕಾಮ, ಹೀಗೆ ಕೆಲವು ಗಮನಾರ್ಹವಾದ ಅಂಶಗಳನ್ನು ಕುರಿತು ವಿವರಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಭೀಮನಗೌಡರ ಅವರ ಇತರ ಸಾಹಿತ್ಯ ಸಮೀಕ್ಷೆಯ ವಿಚಾರವನ್ನು ನಿರೂಪಿಸಲಾಗಿದೆ. ವಿಮರ್ಶಾ ಲೇಖನಗಳು, ಸಂಪಾದನಾ ಲೇಖನಗಳು, ಮುನ್ನುಡಿಗಳು ಮತ್ತು ಬೆನ್ನುಡಿಗಳು ಮತ್ತು ಪ್ರವಾಸ ಲೇಖನ ಹೀಗೆ ಅವರ ಬಿಡಿ ಬಿಡಿಯಾದ ವಿಮರ್ಶೆ ಲೇಖನ ಹಾಗೂ ಪ್ರವಾಸ ಲೇಖನಗಳನ್ನು ಸಂಕ್ಷಿಪ್ತ ರೂಪದಲ್ಲಿ

ಪರಿಶೀಲನೆಗೆ ಒಳಪಡಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಭಾಷೆಯ ರೀತಿ ಮತ್ತು ಶೈಲಿಯನ್ನು ಸೂಕ್ಷ್ಮದೃಷ್ಟಿಯಿಂದ ವಿವರಿಸಲಾಗಿದೆ, ಆಡುನುಡಿ–ಜಾನಪದ–ಶಿಷ್ಟಭಾಷೆ, ಮತ್ತು ಸಹಜಧಾಟಿ–ನಾಟಕೀಯ ಶೈಲಿ, ಪ್ರತಿಮೆ–ಸಂಕೇತಗಳನ್ನು ಪ್ರಯೋಗ ಮಾಡಿರುವ ವಿಚಾರವನ್ನು ವಿಶ್ಲೇಷಣೆ ಮಾಡಲಾಗಿದೆ.

ಆರನೆಯ ಅಧ್ಯಾಯ ಸಮಾರೋಪವಾಗಿದ್ದು, ಒಟ್ಟು ಅಧ್ಯಯನದ ಫಲಿತವನ್ನು ಕುರಿತು ವಿವೇಚಿಸಲಾಗಿದೆ. ಭೀಮನಗೌಡರ ಸಮಗ್ರ ಸಾಹಿತ್ಯದ ಬಗ್ಗೆ ಮುಂದೆ ಕೈಕೊಳ್ಳಬೇಕಾದ ಅಧ್ಯಯನವನ್ನು ಸೂಚಿಸಲಾಗಿದೆ. ಕೊನೆಯ ಅನುಬಂಧ ಭಾಗದಲ್ಲಿ ಭೀಮನಗೌಡರ ಕೃತಿಸೂಚಿ ಮತ್ತು ಗ್ರಂಥಋಣವನ್ನು ಕೊಡಲಾಗಿದೆ.

ಇಂದು ನವ್ಯೋತ್ತರದ ಕಾವು ಆರುತ್ತ ಬಂದರೂ ಭೀಮನಗೌಡರು ಅದಕ್ಕೆ ಬದ್ದವಾಗಿ ಕಾವ್ಯ ರಚನೆ ಮಾಡಿರದಿದ್ದರೂ ಕೂಡಾ ಅವರ ಸೃಜನಶೀಲತೆ ಮಾತ್ರ ನಿಂತು ಬಿಟ್ಟಿಲ್ಲ. ಸದ್ಯ ಅವರ ಕಾವ್ಯ ಮತ್ತೊಂದು ಹೊಸ ಪರಂಪರೆಯ ಹೊಳಹುಗಳನ್ನು ಬಯಸುತ್ತ ನಿಂತಿದೆ. ಆದ್ದರಿಂದಲೇ ಭೀಮನಗೌಡರ ಅವರ ಕಾವ್ಯ ಕುರಿತು ಎಲ್ಲವನ್ನು ಈಗಾಗಲೇ ಹೇಳಿ ಮುಗಿಸಲು ಬರುವದಿಲ್ಲ ಆಗ ಮತ್ತೆ ಅವರ ಕಾವ್ಯ ಕುರಿತು ಚರ್ಚಿಸುವ ಅಗತ್ಯ ಪ್ರಾಪ್ತವಾಗಬಹುದು.

ಅಧ್ಯಾಯ ೨

ಆಧುನಿಕ ಕನ್ನಡ ಕಾವ್ಯ: ನವ್ಯ ಮತ್ತು ನವ್ಯೋತ್ತರ ಸಂದರ್ಭ

ಅಧ್ಯಾಯ–೨

ಆಧುನಿಕ ಕನ್ನಡ ಕಾವ್ಯ: ನವ್ಯ ಮತ್ತು ನವ್ಯೋತ್ತರ ಸಂದರ್ಭ

೨.೧ ಆಧುನಿಕ ಕನ್ನಡ ಕಾವ್ಯದ ಹಿನ್ನಲೆ ಮತ್ತು ಚಾರಿತ್ರಿಕ ಸಂದರ್ಭ

ಹತ್ತೊಂಬತ್ತನೆಯ ಶತಮಾನದ ಕೊನೆಯ ಕಾಲಘಟ್ಟ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಸಂದರ್ಭದಲ್ಲಿ ಅತ್ಯಂತ ಮಹತ್ವವಾದದ್ದು. ಹಳತು ಮತ್ತು ಹೊಸತುಗಳ ನಡುವೆ ತೀವ್ರವಾದ ಸಂಘರ್ಷ ಜರುಗುವಂಥದ್ದು ಕೂಡ. ಆಗಲೇ ಇಂಗ್ಲಿಷ್ ಸಂಸ್ಕೃತ, ಕನ್ನಡ ಪ್ರಾಚೀನ ಛಂದಸ್ಸಿನ ಮಟ್ಟುಗಳ ಮಾದರಿಗಳನ್ನು ಅನುಕರಿಸುವದರಲ್ಲಿಯೋ ಅನುವಾದ ಮಾಡುವದರಲ್ಲಿಯೋ ತೊಡಗಿ ಬೇಸತ್ತುಗೊಂಡ ಸಂದರ್ಭವೆಂದು ಈ ಸಂದಿಗ್ಧ ಪರಿಸ್ಥಿತಿಯನ್ನು ವರ್ಗಿಸಬಹುದು. ಈ ಸಂದಿಗ್ಧ ಪರಿಸ್ಥಿತಿಯ ಪರಿಣಾಮವಾಗಿ ಇಪ್ಪತ್ತನೆಯ ಶತಮಾನದ ಆರಂಭದ ಹೊತ್ತಿನಲ್ಲಿ ಹೊಸ ಸಂವೇದನೆಗಳಿಗಾಗಿ ತುಡಿಯುವ ಮನಸ್ಥಿತಿಯನ್ನು ಕಾಣುತ್ತೇವೆ. ಈ ಮನಸ್ಥಿತಿಗೆ ಪ್ರತಿಕ್ರಿಯಾತ್ಮಕವಾಗಿ ೧೯೨೧ ರಲ್ಲಿ 'ಇಂಗ್ಲಿಷ್ ಗೀತೆಗಳು' ಕೃತಿ ಪ್ರಕಟವಾಯಿತು. ಇಲ್ಲಿ ಬಿ.ಎಂ.ಶ್ರೀ. ಅವರು ಇಂಗ್ಲಿಷ್ ಗೀತೆಗಳನ್ನು ಅನುವಾದ ಮಾಡಿದರೂ ಹೊಸ ಸಂವೇದನೆ, ಹೊಸ ಸವಾಲುಗಳಿಗೆ ತಮ್ಮ ಮನಸ್ಥಿತಿಯನ್ನು ಒಡ್ಡಿಕೊಂಡಿದ್ದು ಮುಖ್ಯವಾಗುತ್ತದೆ. ಈ ಕವಿತೆಗಳಲ್ಲಿ ಆಧುನಿಕ ಶೈಲಿ, ಸ್ವರೂಪ, ವಿನ್ಯಾಸಗಳೊಂದಿಗೆ ತಮ್ಮ ಒಂದಿಷ್ಟು ಸ್ವಂತ ರಚನೆಗಳನ್ನು ಸೇರಿಸಿದ್ದು ವಿಶೇಷ. ಅತ್ಯಂತ ಆಧುನಿಕ ಮಾದರಿಗಳನ್ನು ನೀಡಿದ 'ಇಂಗ್ಲಿಷ್ ಗೀತೆಗಳು' ಹೊಸಗನ್ನಡ ಸಾಹಿತ್ಯಿಕ ಸಂದರ್ಭದಲ್ಲಿ ಚಾರಿತ್ರಿಕ ಕಾಲ ಘಟ್ಟವೆಂದು ಹೆಸರಾಯಿತು.

ಆದ್ದರಿಂದ ಮುಂದೆ ಕನ್ನಡ ಸಾಹಿತ್ಯಕ್ಕೆ ಪಾಶ್ಚಾತ್ಯ ಪ್ರೇರಣೆಯಿಂದ ಹೊಸದೊಂದು ಆಯಾಮ ಪ್ರಾಪ್ತವಾಯಿತು. ಅವರ ಪರಿಚಯದಿಂದ ಹೊಸದೊಂದು ಲೋಕವೇ ತೆರೆದಂತಾಯಿತು. ಸಾಹಿತ್ಯಭಿವ್ಯಕ್ತಿಯ ಮಹತ್ವ ಮತ್ತು ವೈವಿಧ್ಯತೆಗಳನ್ನು ಕಂಡು ದಂಗು ಬಡಿದ ಕನ್ನಡದ ಪ್ರಬುದ್ಧ ಚೇತನರಾದ ಸಾಹಿತಿಗಳಿಗೆ ಕನ್ನಡದಲ್ಲಿಯೂ ಪಾಶ್ಚಾತ್ಯ ಸಾಹಿತ್ಯಕ್ಕೆ ಸರಿದೂಗುವ ಕೃತಿಗಳನ್ನು ತರಲಾರವೇ? ಎಂಬ ವಿಚಾರ ಕಾಡಿತು ಹೇಗಾದರೂ ಮಾಡಿ ತರಬೇಕೆಂಬ ಕುತೂಹಲ ಹಾಗೆ ಕನ್ನಡದಲ್ಲಿ ಅವುಗಳ ಸತ್ವವನ್ನು ಹಿಡಿದಿರಿಸುವ ಛಲವೂ ಏಕ ಕಾಲದಲ್ಲಿ ಮೂಡಿದ್ದರಿಂದ ಕನ್ನಡದಲ್ಲಿ ನವೋದಯ ಸಾಹಿತ್ಯ ರೂಪುಗೊಂಡಿತು. ಮೊದ ಮೊದಲು ಅನುವಾದ ರೂಪಾಂತರ ಪ್ರಯತ್ನದಿಂದ ಹೊರಟ ಸಮರ್ಥ ಸಾಹಿತಿಗಳು ಕ್ರಮೇಣ ಸ್ವಅಭಿವ್ಯಕ್ತಿಯ ಹೊಸ ರೂಪಗಳನ್ನು ಅವಿಷ್ಕಾರ ಮಾಡಿ ಕನ್ನಡದ ಅಭಿವ್ಯಕ್ತಿಯ

ದಿಕ್ಕನ್ನೇ ಬದಲಾಯಿಸಿದರು.

ಸೃಜನಾತ್ಮಕ ಶಕ್ತಿಯುಳ್ಳ ಬಿ.ಎಂ. ಶ್ರೀ ಯವರ ಇಂಗ್ಲಿಷ್ ಕವಿಗಳ ಪ್ರೇರಣೆಯಿಂದ ಭಾರತೀಯ ಪರಿಸರದ ಅನುಭವಕ್ಕೆ ಹೊಸ ರೂಪುಗಳನ್ನು ಸಿದ್ದಪಡಿಸುವ ಕೆಲಸದಲ್ಲಿ ತಮ್ಮನು ತೊಡಗಿಸಿಕೊಂಡರು. ಹೊಸ ಮಾರ್ಗದ ಸಾಧ್ಯತೆಗಳನ್ನು ಹುಡುಕುತ್ತ ತಮ್ಮ ಸೃಜನಶೀಲ ಕೃತಿಗಳನ್ನು ರೂಪಿಸಿಕೊಳ್ಳುತ್ತಾ ಹೋಗುತ್ತಾರೆ. ಹೀಗೆ ಹೊಸಗನ್ನಡ ಸಾಹಿತ್ಯ ವಿವಿಧ ಪ್ರೇರಣೆ ಪ್ರಭಾವ ಪಡೆದು ತನ್ನ ಪರಿ ಬಿಚ್ಚಿಕೊಳ್ಳುತ್ತಲಿದ್ದ ಸಮಯದಲ್ಲಿ ಅತ್ತ ಒಂದು ಕಡೆಗೆ ಅಂದರೆ, ಮೈಸೂರು-ಬೆಂಗಳೂರು ಕಡೆಗೆ, ಬಿ.ಎಂ. ಶ್ರೀಕಂಠಯ್ಯನವರು, ಇತ್ತ ಮಂಗಳೂರು ಕಡೆಗೆ ಎಸ್.ಜಿ. ನರಸಿಂಹಚಾರ್ಯರು, ಹಟ್ಟಿಯಂಗಡಿ ನಾರಾಯಣರಾಯರು, ಧಾರವಾಡದ ಕಡೆಗೆ ಶಾಂತರಸ ಕವಿಗಳು, ಬೇಂದ್ರೆಯವರು ಹೊಸಗನ್ನಡ ಕಾವ್ಯ ರಚನೆಗೆ ಕೈ ಹಾಕಿದರು. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕವಿ ಕುವೆಂಪು ಅವರ ಸಾಧನೆ ತುಂಬಾ ದೊಡ್ಡದು. ಹೊಸಗನ್ನಡ ಕಾವ್ಯದ ನವೋದಯ ಪರಂಪರೆಯಲ್ಲಿ ಗಮನಾರ್ಹ ಮತ್ತು ಸಮರ್ಥ ಕೃತಿರಚನೆಗಳನ್ನು ನೀಡಿದವರೆಂದರೆ ಕುವೆಂಪು ಮತ್ತು ಬೇಂದ್ರೆ ಯವರೆನ್ನುವುದು ನಿರ್ವಿವಾದ ಸಂಗತಿ. ನಂತರ ಹಲವಾರು ಕವಿಗಳು ನವೋದಯ ಸಾಹಿತ್ಯದಲ್ಲಿ ಕಾವ್ಯ ಕೃಷಿಗೈಯಲು ತೊಡಗಿದರು. ಒಟ್ಟಾರೆಯಾಗಿ ಸಮಕಾಲೀನ ಪ್ರಜ್ಞೆ, ಆಶೋತ್ತರಗಳನ್ನು ಹೊತ್ತುಕೊಂಡು ಹುಟ್ಟಿಬಂದ ನವೋದಯ ಸಾಹಿತ್ಯ ಮಾನವ ಪ್ರೀತಿ, ನಿಸರ್ಗ ಪ್ರಿಯತೆ, ಆದರ್ಶಗಳ, ಮಾನವೀಯ ಮೌಲ್ಯ, ಸಂಸ್ಕೃತಿ, ಪರಂಪರೆ, ಸಂಪ್ರದಾಯ, ಸರಿಯಾದ ದೃಷ್ಟಿಕೋನ, ಸೌಂದರ್ಯ ಆರಾಧನೆ ಇಂಥ ಜೀವನದಲ್ಲಿ ಬರುವ ಮುಖ್ಯವಾಗಿರುವ ಕುತೂಹಲಗಳನ್ನು ವಸ್ತುವಾಗಿ ಎತ್ತಿಕೊಂಡಿರುವದು ತುಂಬಾ ಅರ್ಥಪೂರ್ಣವಾಗಿದೆ ಎಂದು ಹೇಳಲೇಬೇಕು.

ನವೋದಯ ಸಾಹಿತ್ಯದಲ್ಲಿ ಮನುಷ್ಯನಲ್ಲಿ ಆಸಕ್ತಿ ತಳೆಯುವುದರಿಂದ ಮೂರು ಬಗೆಯ ಪರಿಣಾಮ ಆಗುತ್ತವೆ ಎಂದು ಹೇಳುತ್ತಾರೆ. 'ಮೊದಲನೆಯದಾಗಿ ಮನುಷ್ಯ-ದೇವರು ಸಂಬಂಧವಲ್ಲದೆ ಮನುಷ್ಯನ ಇತರ ಸಂಬಂಧಗಳು, ಮನುಷ್ಯನ ಭಾವನೆಗಳು, ಆಸೆಗಳು, ಕನಸುಗಳು, ಎಲ್ಲ ಇದರ ವಸ್ತುವಾಗುತ್ತವೆ. ಈ ಲೋಕದಲ್ಲಿ ಇದಕ್ಕೆ ಕೂತೂಹಲ, ಆಸಕ್ತಿ, ಸೃಷ್ಟಿಯಲ್ಲಿ ಮನುಷ್ಯನ ಸಂಗಾತಿಯಾಗಿ ನಿಂತ ನಿಸರ್ಗ ಆಸಕ್ತಿ ಅದರ ಚೆಲುವಿನಲ್ಲಿ ಬೆರಗು ಅದರ ಜೀವನ ರೀತಿಯಲ್ಲಿ ಕುತೂಹಲ-ಊಹೆ, ಮನುಷ್ಯ-ಮನುಷ್ಯರ ಸಂಬಂಧ ಇದಕ್ಕೆ ಮುಖ್ಯವಾಗಿ ಕಾಣುತ್ತೇವೆ. ಸಮಾಜದಲ್ಲಿ ಮನುಷ್ಯ ಕುಟುಂಬದಲ್ಲಿ ಮನುಷ್ಯ ಸ್ನೇಹ, ಪ್ರೇಮ, ದ್ವೇಷ ಎಲ್ಲ ಇದಕ್ಕೆ ವಸ್ತುವಾಗುತ್ತವೆ.'[೯] ಆದ್ದರಿಂದಲೇ ಹೊಸದರ ಹುಡಕಾಟ ಕುತೂಹಲ, ಆಸಕ್ತಿಗಳು ನವ್ಯಕಾವ್ಯದಲ್ಲಿವೆ. ಹಿಂದಿನ ಕಾವ್ಯ ಪರಂಪರೆಯಲ್ಲಿ ಕಾಣಿಸದೆ ಇರುವ ಹೊಸ, ಹೊಸ ಲಕ್ಷಣಗಳನ್ನು ತಂದಿತ್ತು. ವಸ್ತುವಿನ ಆಯ್ಕೆ ಅದನ್ನು ಅಭಿವ್ಯಕ್ತಿಗೊಳಿಸುವ ರೀತಿ ಹಿಂದಿನ ಪರಂಪರೆಯಿಂದ ಸಾಕಷ್ಟು ಪ್ರಮಾಣದಲ್ಲಿ ಭಿನ್ನವಾದ ರೂಪದಲ್ಲಿ ಬೆಳೆಯುತ್ತ ಸಮತೋಲನವನ್ನು ತನ್ನ ಆಧೀನದಲ್ಲಿಟ್ಟುಕೊಂಡು

ನವೋದಯ ಕಾವ್ಯ ಒಂದು ಶಿಸ್ತುಬದ್ಧತೆಯಲ್ಲಿ ಬೆಳೆಯತೊಡಗಿದ್ದು ಈಗ ಇತಿಹಾಸ.

ಜಗತ್ತಿನ ಯಾವುದೇ ಒಂದು ಸಾಹಿತ್ಯದಲ್ಲಿ ಕಾಲಕಾಲಕ್ಕೆ ಪರಿವರ್ತನೆ ಮತ್ತು ಪ್ರಯೋಗಗಳು ನಡೆಯುತ್ತಿರುತ್ತವೆ. ಆದ್ದರಿಂದ ಸಾಹಿತ್ಯವು ನಿರಂತರವಾದ ಚಲನಶೀಲ ಪ್ರಕ್ರಿಯೆ. ಬರೆಯುವ ಶೈಲಿ ಕಾಲಕ್ರಮೇಣ ತನ್ನ ಶಕ್ತಿಯನ್ನು ಕಳೆದುಕೊಂಡು ಅದರ ಕುತೂಹಲ ಕಡಿಮೆಯಾಗುತ್ತದೆ. ಒಂದು ಪ್ರಯೋಗ ಹುಟ್ಟಿಕೊಂಡು ಒಂದು ಹೊಸ ಮಾರ್ಗ ತೆರೆಯುತ್ತದೆ. ಆ ಸಂದರ್ಭದಲ್ಲಿ ಅದು ಉತ್ತಮ ಕೃತಿಗಳನ್ನು ನೀಡುತ್ತದೆ. ಕಾಲಾಂತರದಲ್ಲಿ ಶಬ್ದ, ಅರ್ಥ, ಪದಗಳು ಸಮಕಾಲೀನ ಅಗತ್ಯವನ್ನು ಪೂರೈಯಿಸುವ ನಿಟ್ಟಿನಲ್ಲಿ ಸಂಪೂರ್ಣವಾಗಿ ತಮ್ಮ ಶಕ್ತಿಗಳನ್ನು ಕಳೆದುಕೊಳ್ಳುತ್ತವೆ. ಆಗ ಅದಕ್ಕೆ ಭಿನ್ನರೂಪವಾದ ಹೊಸ ರೀತಿಯ ಬರವಣಿಗೆಯ ಶೈಲಿ ಚಲಾವಣೆಗೆ ಬರುವುದನ್ನು ಅಪೇಕ್ಷಿಸುತ್ತದೆ.

ಸುಮಾರು ೧೯೫೦ ರ ವೇಳೆಗೆ ನವೋದಯಕಾವ್ಯ ಮಾರ್ಗದ ಸತ್ವ ಕಳೆದುಕೊಂಡಿತು. ಹೊಸಕಾವ್ಯ ಮಾರ್ಗದ ಬಾಗಿಲು ತೆರೆಯಿತು. ಇದರ ಅವಶ್ಯಕತೆಯು ಹೆಚ್ಚಾಗಿರುವದರಿಂದ ನವೋದಯ ಕಾವ್ಯಮಾರ್ಗಕ್ಕೆ ಪ್ರತಿಭಟನೆಯಾಗಿ ಹೊಸ ಕಾವ್ಯ ಮಾರ್ಗದ ಹೊಸ ರೂಪ ಜನ್ಮತಾಳಿತು. ಅದೇ ನವ್ಯ ಸಾಹಿತ್ಯವೆಂದು ಹೆಸರಾಯಿತು. ಇದರ ಅವಶ್ಯಕತೆಯನ್ನು ಒತ್ತಿ ಹೇಳಿದ ವಿ.ಕೃ.ಗೋಕಾಕ ಅವರು ಹೊಸ ಕಾವ್ಯ ಮಾರ್ಗವನ್ನು 'ನವ್ಯ' ಕಾವ್ಯ ಮಾರ್ಗವೆಂದು ಕರೆದರು. ೧೯೫೨ ರ ವೇಳೆಗೆ ಗೋಪಾಲ ಕೃಷ್ಣ ಅಡಿಗರು 'ನಡೆದು ಬಂದ ದಾರಿ' ಸಂಕಲನದಲ್ಲಿ ಹೊಸ ರೀತಿಯ ಅಗತ್ಯವನ್ನು ಪ್ರಬಲವಾಗಿ ಪ್ರತಿಪಾದಿಸಿ ಹೊಸ ಕಾವ್ಯ ಮಾರ್ಗಕ್ಕೆ ಭದ್ರ ಬುನಾದಿ ಹಾಕಿದರು. ನಂತರ ಇದೇ 'ನವ್ಯಕಾವ್ಯ' ಎಂದು ನಿರ್ದೇಶಿಸಲ್ಪಟ್ಟಿತು. ಹೀಗೆ ನವ್ಯ ಎಂಬುದು ನವೋದಯ ಕಾವ್ಯಮಾರ್ಗಕ್ಕಿಂತ ಭಿನ್ನವಾದ ಕಾವ್ಯಮಾರ್ಗವೊಂದನ್ನು ನಿರ್ದೇಶಿಸಲು ಬಳಕೆಗೆ ಬಂದದ್ದು ಕಾಲದ ಸತ್ಯವೆಂದು ಹೇಳಬೇಕು. ಆದ್ದರಿಂದ 'ನವ್ಯಕಾವ್ಯ' ಎಂಬುದು ನವೋದಯ ಮಾರ್ಗಕ್ಕಿಂತ ಭಿನ್ನವಾದ ಕಾವ್ಯಮಾರ್ಗವನ್ನು ಸೂಚಿಸಲು ಬಳಸಿಕೊಂಡಿರುವ ಒಂದು ಪಾರಿಭಾಷಿಕ ಪದವಾಗಿದೆ ಎಂಬುವದನ್ನು ಚನ್ನಾಗಿ ಅರ್ಥೈಯಿಸಿಕೊಳ್ಳಬೇಕಾಗುತ್ತದೆ.

ತದನಂತರ ಮುಂದೆ ನಮ್ಮ ನಾಡಿನ ಹೊಸ ವಾತಾವರಣ ನಿರ್ಮಾಣವಾಯಿತೆಂದು ಅಡಿಗರು ಹೇಳಿದ್ದು ಮುಖ್ಯವಾದ ಮಾತು. ೧೯೪೭ ರಲ್ಲಿ ನಮ್ಮ ದೇಶ ಸ್ವಾತಂತ್ರ್ಯವನ್ನು ಪಡೆಯಿತು. ಸ್ವಾತಂತ್ರ್ಯ ಸಿಗುವವರಿಗೆ ಇಡೀ ದೇಶ ಒಮ್ಮನಸ್ಸಿನಿಂದ ಹೋರಾಟ ಮಾಡಿತು. ಸ್ವಾತಂತ್ರ್ಯ ಒಂದು ದೊರೆತು ಬಿಟ್ಟರೆ ದೇಶದ ಎಲ್ಲ ಸಮಸ್ಯೆಗಳು ಒಮ್ಮೆಗೇ ಬಗೆ ಹರಿದು ಬಿಡುತ್ತವೆ ಎಂದು ನಮ್ಮ ದೇಶ ಸಂಪೂರ್ಣವಾಗಿ ನಂಬಿಕೊಂಡಿತ್ತು. ಆದರೆ ಆದದ್ದೇ ಬೇರೆ ನಾವೆಲ್ಲರೂ ಒಂದೆ ಜಾತಿ ಒಂದೆ ಮತ ಎಂಬ ಉತ್ಸುಕತೆಯೆಲ್ಲವೂ ಮಣ್ಣು ಪಾಲಾಯಿತು. ಹಲವಾರು ಜನರು ಜಾತಿ ಮತ ಪಂಗಡಗಳು ಇಬ್ಭಾಗವಾಗಿ ಹರಿದು ಹಂಚಿ ಹೋದವು. ಒಂದೊಂದು ಜಾತಿಯ ಆದರ್ಶ ಕನಸುಗಳು ಬೇರೆಯಾದವು. ಪ್ರತಿಯೊಂದು ಸಮಾಜದಲ್ಲಿರುವ ವ್ಯಕ್ತಿಯನ್ನು ಕುರಿತು ಕವಿ ತನ್ನದೆಯಾದ ಒಂದು

ಭಾಷೆಯನ್ನು ರೂಪಿಸಿಕೊಳ್ಳುತ್ತ ಉತ್ತಮ ಅಭಿವ್ಯಕ್ತಿಯನ್ನು ನೀಡುತ್ತ ಹೋದರು. ಏಕೆಂದರೆ ಹೊಸ ಬಗೆಯ ಸಾಹಿತ್ಯವನ್ನು ಆವತ್ತಿನ ವಾತಾವರಣವೇ ಅಪೇಕ್ಷಿಸುತ್ತಿತ್ತು ಎಂಬುದು ತನಗೆ ತಾನೆ ಸ್ಪಷ್ಟವಾಗುತ್ತದೆ. ಆದರೆ ಮುಂದೆ ಹೊಸ ಬಗೆಯ ಸಾಹಿತ್ಯದ ಸ್ವರೂಪ ಹೇಗೆ ಎಂಬುದನ್ನು ಅವರು ತಮ್ಮ ತಮ್ಮ ರೀತಿಯಲ್ಲಿ ಕಂಡುಕೊಳ್ಳುತ್ತ ಹಲವಾರು ಕವಿಗಳು ನವ್ಯ ಸಾಹಿತ್ಯವನ್ನು ಶ್ರೀಮಂತಗೊಳಿಸುವಲ್ಲಿ ಪ್ರಯತ್ನ ಮಾಡಿರುವದು ತುಂಬ ವೈಶಿಷ್ಟ್ಯಪೂರ್ಣವಾಗಿದೆ.

ಹಲವಾರು ಕವಿಗಳು ಇದೆ ಪರಿಕಲ್ಪನೆಯ ಹಿನ್ನಲೆಯಾಗಿಟ್ಟುಕೊಂಡು ನವ್ಯ ಸಾಹಿತ್ಯವನ್ನು ಬೆಳೆಸುವದರಲ್ಲಿ ತೊಡಗಿಸಿಕೊಂಡರು ಎಂಬುವದನ್ನು ನಾವು ಗುರುತಿಸಬಹುದು. ಅಡಿಗರ ಕಾವ್ಯವನ್ನು ಚರ್ಚಿಸುವದಕ್ಕಿಂತ ಮೊದಲು ಗೋಕಾಕರ ಕಾವ್ಯದಲ್ಲಿ ನವ್ಯತೆಯ ಕಲ್ಪನೆಯನ್ನು ಸ್ವಲ್ಪ ಚರ್ಚಿಸಿ ನಾವು ಮುಂದುವರೆಯಬೇಕಾಗುತ್ತದೆ. ಏಕೆಂದರೆ ಗೋಕಾಕರದ್ದು 'ನವ್ಯಕಾವ್ಯ'ದ ವಿಚಾರದಲ್ಲಿ ಉಲ್ಲೇಖಿಸಬೇಕಾದ ಹೆಸರು. "ಹೀಗೆ ನವ್ಯತೆಯ ಅಗತ್ಯವನ್ನು ಒತ್ತಿಹೇಳಿದ ಗೋಕಾಕರು 'ನವ್ಯತೆಯನ್ನು ತಂತ್ರದಲ್ಲಿ, ಅಭಿವ್ಯಕ್ತಿ ವಿಧಾನದಲ್ಲಿ ಮಾತ್ರ ಪ್ರತಿಪಾದಿಸುತ್ತಾರಯೇ ಹೊರತು ಜೀವನ ದೃಷ್ಟಿಯ ಬದಲಾವಣೆಯಾಗಿಲ್ಲ ಎಂಬುದು ಮುಖ್ಯ ಸಂಗತಿ. ಕಾವ್ಯದ ಆತ್ಮ ಯಾವಾಗಲೂ ಒಂದೇ ಅದನ್ನು ಒಡಮೂಡಿಸುವಾಗ ಕವಿ ಬಗೆಬಗೆಯ ಕಾವ್ಯ ಸಾಮಗ್ರಿಯನ್ನು ಬಳಸುತ್ತಾನೆ. ಅದು ಕಾವ್ಯದ ರೀತಿಗೆ ಸಂಬಂಧ ಪಟ್ಟುದಷ್ಟೇ ಎಂದು ಹೇಳುವ ಗೋಕಾಕರು 'ನವ್ಯಕಾವ್ಯ' ತಾತ್ವಿಕ ಕ್ರಾಂತಿಯಲ್ಲ ಒಂದು ನೂತನ ತಾಂತ್ರಿಕ-ವಿಧಾನ ಮಾತ್ರ ಎಂದು ಖಚಿತವಾಗಿ ಪ್ರತಿಪಾದಿಸುತ್ತಾರೆ."[೨] ಗೋಕಾಕರು ತಮ್ಮ ಕಾವ್ಯದಲ್ಲಿ ತಂತ್ರವನ್ನು ಸಾಕಷ್ಟು ರೀತಿಯಲ್ಲಿ ಬಳಸಿಕೊಂಡು, ಕಾವ್ಯದಲ್ಲಿ ಹೊಸ ರೀತಿಯ ಬದಲಾವಣೆಯನ್ನು ತರಲು ಪ್ರಯತ್ನಸಿದ್ದು ಸಮಂಜಸವೆನಿಸುತ್ತದೆ. ಆದರೆ ಅಡಿಗರು ತಮ್ಮ ಸಂಪ್ರದಾಯದಲ್ಲಿ ಕಾಲಕಾಲಕ್ಕೆ ಆಗುವ ಬದಲಾವಣೆ ತಂತ್ರಕ್ಕೆ ಹೊಸ ನುಡಿಗಟ್ಟು ನೀಡಿ ಅದಕ್ಕೊಂದು ಶಬ್ದ ಪ್ರತಿಮೆ ಎಂದು ಕರೆದಿರುವದು ಗಮನಾರ್ಹವಾಗಿದೆ. ತಮ್ಮ ವ್ಯಕ್ತಿತ್ವವನ್ನು ಪಣವಾಗಿಸಿಕೊಂಡು ಅದು ಸುತ್ತಲ ಜಗತ್ತಿಗೆ ಸ್ಪಂದಿಸುವ ಕ್ರಮವನ್ನೇ ಭಾಷೆಯ ಮೂಲಕ ನಿರರ್ಗಳವಾಗಿ ಆತ್ಮವಿಶ್ವಾಸದಿಂದ ಪಡಿ ಮೂಡಿಸುತ್ತಾ ಹೋದವರು ಗೋಕಾಕರು. ಹೀಗಾಗಿ ಗೋಕಾಕರ ಕಾವ್ಯವೆಂದರೆ ಸುತ್ತಲ ಜಗತ್ತು ಅವರ ವ್ಯಕ್ತಿತ್ವದ ಮೂಲಕ ಹಾದು ಹೊರಬಂದ ವರ್ಣಮಯ ಸೃಷ್ಟಿಯಾಗಿ ನಮಗೆ ಅದು ಕಂಡು ಬರುತ್ತದೆ. ಕಾವ್ಯಾಭಿವ್ಯಕ್ತಿಯೇ ಒಂದು ತಂತ್ರವಾಗಿ ಬಳಸಿಕೊಂಡು ಅವರ ಕಾವ್ಯದ ಉದ್ದಕ್ಕೂ ಅನೇಕ ಹೊರಳುಗಳಿವೆ ಅವೆಲ್ಲಾ ಕಾವ್ಯದ ಬಹಿರಂಗಕ್ಕೆ ಸಂಬಂಧಪಟ್ಟಿವೆ. ಆದರೆ ಅಂತರಂಗದ ಅದರ ಜೀವಸತ್ವ ಮಾತ್ರ ಯಾವತ್ತು ಒಂದೇ ಎಂದು ಅರಿಯುವ ಸಂದರ್ಭದಲ್ಲಿ ಕಾವ್ಯದ ಆತ್ಮ ಒಂದೇ ಇರುವಾಗ ಅದಕ್ಕೊಂದು ಹೊಸ ರೀತಿಯ ರಚನಾತ್ಮಕ ಕೌಶಲ್ಯವನ್ನು ಜೀವಸತ್ವ ಕನಸುಗಾರಿಕೆಯಿಂದ ಉಗಮಗೊಂಡು ವಾಸ್ತವದ ಕಠೋರತೆಯನ್ನು ತುಂಬಲು ಹಲವಾರು ಛಂದಸ್ಸು, ಅಲಂಕಾರ, ರೂಪಕ,

ಪ್ರತಿಮೆಯನ್ನು ಬಳಸಿಕೊಂಡು ಗೋಕಾಕರು ಕಾವ್ಯಕ್ಕೊಂದು ಚೌಕಟ್ಟು ಒದಗಿಸಿ ಕೊಟ್ಟರೆನ್ನುವುದು ಅವರ ನಾವೀನ್ಯತೆಯ ತುಡಿತವನ್ನು ತೋರಿಸುತ್ತದೆ.

ನವ್ಯ ಸಂದರ್ಭದಲ್ಲಿ ಅಡಿಗರದು ಒಂದು ದೊಡ್ಡದಾದ ವ್ಯಕ್ತಿತ್ವ. 'ಭಾವ ತರಂಗ'ದಿಂದ ಹಿಡಿದು 'ಭೂಮಿಗೀತ' ದ ವರೆಗೆ ಅಡಿಗರವು ಐದು ಕವನ ಸಂಗ್ರಹಗಳಿವೆ. ಅಡಿಗರ 'ಭಾವ ತರಂಗ' ಅವರ ವ್ಯಕ್ತಿತ್ವದ ಬೆಳವಣಿಗೆಯ ಮೊದಲ ಹಂತದ ಪ್ರಾತಿನಿಧಿಕ ಕಾವ್ಯವನ್ನು ಒಳಗೊಂಡಿದೆ. ಭಾವತೀವ್ರತೆ ಅಡಿಗರ ಕವಿಜೀವನದ ಒಂದು ವಿಶೇಷವಾಗಿರುವದು ನಮಗೆ ಕಂಡು ಬರುತ್ತದೆ. ಎಲ್ಲ ಕವಿತೆಗಳಲ್ಲಿಯೂ ಈ ತೀವ್ರತೆಯನ್ನು ಕಾಣಬಹುದು. 'ಕಲ್ಲಾಗು ಕಲ್ಲಾಗು,' 'ನಿನಗೆ ನೀನೆ ಗೆಳೆಯ ನಿನಗೆ ನೀನೆ' ಇಂಥ ಅವರ ಕವನಗಳಲ್ಲಿ ನಾವು ಗುರುತಿಸುವದಕ್ಕೆ ಸಾದ್ಯವಿದೆ.

ತಮ್ಮ ವ್ಯಕ್ತಿತ್ವವನ್ನೇ ಕೇಂದ್ರವಾಗಿಟ್ಟುಕೊಂಡು ತಮ್ಮೆಲ್ಲ ಆಸಕ್ತಿಗಳನ್ನು ಮೌಲ್ಯಗಳ ಚೌಕಟ್ಟಿನಲ್ಲಿಟ್ಟು, ತಮ್ಮ ಅನುಭವಗಳಿಗೆ ಶಬ್ದಶರೀರವನ್ನು ಕೊಡುವಾಗ ಬದುಕಿನ ಮೌಲ್ಯಗಳಿಗೂ ಮತ್ತು ಕಾವ್ಯದ ಮೌಲ್ಯಗಳಿಗೂ ವ್ಯತ್ಯಾಸವಿಲ್ಲವೆಂದು ತಿಳಿಯುವ ಅಡಿಗರ ಕಾವ್ಯ ತುಂಬಾ ಪ್ರಾಮಾಣಿಕ ಅನ್ನಿಸುವುದಕ್ಕೆ ಅವರ ಪ್ರತಿಮೆಗಳು, ಸಂಕೇತಗಳು, ಕಾವ್ಯದ ಧೋರಣೆ, ಸಂವೇದನೆಯಿಂದ ಕೂಡಿದ್ದು. ಲಯ, ಭಾಷೆಯ ಮೇಲಿನ ಪ್ರಭುತ್ವ, ಜೀವನಾನುಭವ ಇಂಥ ಎಲ್ಲಾ ಸಾಧ್ಯತೆಗಳನ್ನು ಅವರ ಕಾವ್ಯದಲ್ಲಿ ನಾವು ಸಹಜವಾಗಿ ಕಾಣಬಹುದು.

೨.೨ ನವ್ಯ ಸಾಹಿತ್ಯದ ಲಕ್ಷಣ ಮತ್ತು ಪ್ರಮುಖ ಕವಿಗಳು.

ನವ್ಯ ಸಾಹಿತ್ಯ ಮಾರ್ಗ ಕನ್ನಡ ಸಾಹಿತ್ಯ ಚರಿತ್ರೆಯ ಸಂದರ್ಭದಲ್ಲಿ ಒಂದು ಘಟ್ಟವಾಗಿ ಕಾಣಿಸಿಕೊಳ್ಳುತ್ತದೆ. ಕನ್ನಡ ಸಾಹಿತ್ಯವು ಫಲವತ್ತತೆಯನ್ನು ಪಡೆದುಕೊಳ್ಳುತ್ತ ಹೋಗುವ ಹಿನ್ನಲೆಯಲ್ಲಿ ನವ್ಯ ಸಾಹಿತ್ಯ ಮಾರ್ಗದ ಕೆಲವು ಪ್ರಮುಖ ಲಕ್ಷಣಗಳು ಕಂಡು ಬರುತ್ತವೆ. ಯಾವುದೇ ಸಾಹಿತ್ಯಕ್ಕೆ ತನ್ನದೇ ಆದ ಲಕ್ಷಣಗಳು ಇರುವದು ಸಹಜವಾಗಿದೆ. ಅದರ ತಳಹದಿಯ ಮೇಲೆ ಸಾಹತ್ಯ ಸೃಷ್ಠಿಯಾಗುವದರ ಮೂಲಕ ತನ್ನ ವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳುತ್ತಾ ಅದೊಂದು ಹೊಸ ರೂಪದಲ್ಲಿ ಬೆಳೆದು ನಿಲ್ಲುತ್ತದೆ.

ಆದ್ದರಿಂದ ನವ್ಯ ಸಾಹಿತ್ಯದ ಲಕ್ಷಣಗಳು ನಮಗೆ ವೈವಿಧ್ಯಮಯವಾದ ರೂಪದಲ್ಲಿ ಕಂಡು ಬರುತ್ತವೆ. ನವೋದಯ ಸಾಹಿತ್ಯ ವ್ಯಕ್ತಿಯನ್ನು ಸಾಮಾಜಿಕ ಚೌಕಟ್ಟಿನಲ್ಲಿಟ್ಟು ನೋಡಿ, ಆತನನ್ನು ಅರ್ಥೈಯಿಸುತ್ತಿತ್ತು. ಆದ್ದರಿಂದಲೇ ಮನುಷ್ಯನ ಸಾಮಾಜಿಕ ವರ್ತನೆಗಳು ಆತನ ವ್ಯಕ್ತಿತ್ವವನ್ನು ಅಂತರಂಗವನ್ನು ತಿಳಿಸಬಲ್ಲವು. ಆದರೆ ನವ್ಯ ಸಾಹಿತ್ಯ ಸಾಮಾಜಿಕ ಚೌಕಟ್ಟಿನಿಂದ ದೂರವಿರುವ ಸಮಸ್ಯೆಗಳ ಬಗ್ಗೆ ಚಿಂತಿಸುತ್ತದೆ. ಏಕೆಂದರೆ ನವೋದಯ ಸಾಹಿತ್ಯದಲ್ಲಿ ಆದರ್ಶದ ಮೌಲ್ಯಗಳು ಮುಖ್ಯವಾಗಿ ಕಂಡು ಬಂದವು. ಆ ದೃಷ್ಟಿಯಿಂದ ಸಮಕಾಲೀನ ಪ್ರಜ್ಞೆಯನ್ನು ಗಮನಿಸಿಕೊಂಡಾಗ ಅಲ್ಲಿರುವ ಮಾನವಪ್ರೀತಿ, ನಿಸರ್ಗ,

ಮೌಲ್ಯದಪ್ರಜ್ಞೆ, ಸಂಸ್ಕೃತಿ, ಪರಂಪರೆಯ ಜ್ಞಾನ, ಸಾಮಾಜಿಕಪ್ರಜ್ಞೆ ಹಿಂದಿನ ಕಾಲದ ಕಾವ್ಯದಲ್ಲಿಲ್ಲದ ಹೊಸ ಪರಂಪರೆಯನ್ನು ಹುಟ್ಟುಹಾಕಿಕೊಂಡು ತನ್ನ ಹೊಸ ಹೊಸ ಲಕ್ಷಣಗಳನ್ನು ಮೈಗೂಡಿಸಿಕೊಂಡು ಬಂದಿತು.

ನವ್ಯ ಸಾಹಿತ್ಯ ಸಾಮಾಜಿಕ ಚೌಕಟ್ಟಿನಿಂದ ಸ್ವಲ್ಪ ಅಂತರದಲ್ಲಿ ನಿಂತುಕೊಂಡು ನೋಡುವದು ಗಮನಾರ್ಹವಾಗಿದೆ. ಏಕೆಂದರೆ ಕವಿಗಳು ಇಲ್ಲಿ ವಾಸ್ತವಿಕತೆಗೆ ಹೆಚ್ಚು ಗಮನ ನೀಡಿದ್ದಾರೆ. ನವೋದಯ ಕಾಲದಲ್ಲಿ ಕಾಲಾನುಕ್ರಮದಲ್ಲಿ ಕಂಡ ಕನಸುಗಾರಿಕೆಯ ವಿರುದ್ಧವೂ ಒಂದು ರೀತಿಯ ಬಂಡಾಯವಾಗಿದೆ. ಆದ್ದರಿಂದ ಅಡಿಗರು ವಾಸ್ತವತೆಯನ್ನು ಕಂಡುಕೊಂಡಿರುವ ಬಗೆಯನ್ನು ನಾವು ನೋಡಬಹುದು. "ಕಾರ್ಖಾನೆಗಳು, ನಗರ, ಗಡಿಯಾರಕ್ಕೆ ಕಟ್ಟು ಬಿದ್ದವರು, ಟೊಳ್ಳು ಆದರ್ಶಗಳು, ನಾಯಕರ ಹೆಸರಿನಲ್ಲಿ ಮೆರೆಯುವ ರಾಕ್ಷಸರು ಅವರು ವಾಸ್ತವತೆಯನ್ನು ಕಾವ್ಯವಾಗಿಸುವ ಪ್ರಯತ್ನದಲ್ಲಿ ಅಡಿಗರ ಕಾವ್ಯಭಾಷೆ ಹಿಂದಿನಕ್ಕಿಂತ ಬದಲಾಯಿತು. ಈ ಕಾವ್ಯ ಭಾಷೆ ಸಿಟ್ಟು ಮತ್ತು ಅದನ್ನು ನಿಯಂತ್ರಿಸುವ ವ್ಯಂಗ್ಯವನ್ನು ಒಳಗೊಳ್ಳಬೇಕಾದ್ದರಿಂದ ಸೌಂದರ್ಯೋಪಾಸನೆಯಿಂದ ಹುಟ್ಟುವ ನವೋದಯ ಸ್ಫೂರ್ತಿ ಗೀತೆಗಳ ಬದಲಾಗಿ ನಾಟಕೀಯ ಗುಣವನ್ನು ಮೈಗೂಡಿಸಿಕೊಂಡ ಸ್ವಚ್ಛಂದ, ಛಂದಸ್ಸು ರೂಪಗೊಂಡಿತು."[೩]

ಒಟ್ಟಾರೆಯಾಗಿ ನವೋದಯ ಸಾಹಿತ್ಯಕ್ಕಿಂತ ನವ್ಯಸಾಹಿತ್ಯ ವಾಸ್ತವತೆಯನ್ನು ಪಡೆದುಕೊಂಡು, ನವೋದಯದ ಕೆಲವು ಸಾಂಪ್ರದಾಯಿಕ ಭಾವನಾಂಶಗಳನ್ನು ನಿರಾಕರಿಸಿ, ಬೀಭತ್ಸವನ್ನು ಹುಟ್ಟಿಸುವ ಶಬ್ದಗಳು ಬೆಳವಣಿಗೆಯಾದವು. ಅಡಿಗರ 'ನಡೆದು ಬಂದ ದಾರಿ'ಯಿಂದ ಆರಂಭವಾದ ಈ ಕಾವ್ಯ ಭಾಷೆ ನವ್ಯ ಕಾವ್ಯಕ್ಕೊಂದು ಹೊಸ ದಾರಿ ಮಾಡಿಕೊಟ್ಟಿತು. ಬದುಕನ್ನು ಅದರಂತೆ ಕಾವ್ಯವನ್ನು ವಾಸ್ತವಿಕತೆಯ ನೆಲೆಯನ್ನು ಅರಿಯಲು ಈ ಕಾವ್ಯಮಾರ್ಗ ಪ್ರಯತ್ನಿಸಿತು. ಆದರೆ ಕೆಲವು ಶ್ರೇಷ್ಠ ಕವನಗಳಲ್ಲಿ ಆದರ್ಶ, ನಂಬಿಕೆಗಳು ಬ್ರಷ್ಟವಾಗುವುದರ ಭಯಂಕರ ಚಿತ್ರಣವನ್ನು ಶೈಲಿಯ ಮಟ್ಟದಲ್ಲಿ ಉಪಮೆ, ರೂಪಕಗಳನ್ನು ಬಳಸಿಕೊಂಡು ಛಂದೋಲಯವನ್ನು ಪ್ರಯೋಗಿಸುವದರ ಮೂಲಕ ಅಡಿಗರು ಪ್ರಮುಖ ಸಾಹಿತ್ಯಿಕ ಉಪಕರಣಗಳನ್ನು ಕಂಡುಕೊಂಡರು.

ಛಂದಸ್ಸು ಕಾವ್ಯ ರಚನೆಗೆ ಅವಶ್ಯವಾಗಿ ಬೇಕಾಗುತ್ತದೆ. ಕಾವ್ಯಕ್ಕೊಂದು ಚೌಕಟ್ಟನ್ನು ಒದಗಿಸುವದು ಛಂದಸ್ಸಿನ ಪ್ರಯೋಜನೆಯಾಗಿದೆ. 'ಕಾವ್ಯವೂ ಒಂದು ಕಲೆ ಶಬ್ದಗಳನ್ನು ಛಂದಸ್ಸಿನೊಳಗೆ ತೂರಿಸುವ ನೆಯ್ಗೆಯ ಕೆಲಸವಲ್ಲ, ಕಾವ್ಯವೆಂದರೆ ಅನುಭವಕ್ಕೆ ಆಕಾರ ಕೊಡುವ ಅಸಲು ಕಸಬು, ಕವಿತೆ ಕೇವಲ ಮಾತಾಗಿ ಉಳಿಯದೆ ಕೃತಿಯಾಗಿ ಅವತರಿಸಬೇಕು ಎಂಬ ಪರಿಕಲ್ಪನೆ ನವ್ಯ ಕಾವ್ಯದಲ್ಲಿ ಹೆಚ್ಚಿನ ಪ್ರಾಮುಖ್ಯತೆ ಪಡೆಯಿತು.'[೪] ಹೊರಗಿನ ಜಗತ್ತಿನ ಅನುಭವ ಮನಸ್ಸಿನ ಒಳಪದರಗಳಲ್ಲಿ ಒಳಹೊಕ್ಕು ಅದರಲ್ಲಿರುವ ಅಂತಃಸತ್ವವನ್ನು ಹೀರಿಕೊಂಡು ಸುಪ್ತವಾಗಿರುವ ಅನುಭವಗಳನ್ನು ಸಂವೇದನೆಗಳೊಡನೆ ಸಮ್ಮಿಳಿತಗೊಂಡು ಹೊರಬರಲು ಕಾಲ ಪಕ್ವವಾಗಿರುವದನ್ನು ಕಾಯುತ್ತಿರುತ್ತದೆ ಆಗ ನಾವು

ಅದನ್ನು ವ್ಯಕ್ತಪಡಿಸಬೇಕು. 'ಹೇಳಿದರೆ ಹಾಳಾಗುವದು ಅನುಭವದ ಸವಿಯು ಹೇಳದಿರೆ ತಾಳಲಾರನೂ ಕವಿಯು' ಎಂದು ಕುವೆಂಪುರವರು ಹೇಳಿದಂತೆ ಆ ಕಾವ್ಯಕ್ಕೊಂದು ತಕ್ಕ ಶರೀರವನ್ನು ಸೃಷ್ಟಿಸಿ ಕಲಾಕೃತಿಯಾಗಿ ಮಾರ್ಪಾಡಿಸುವದು ಕವಿಯ ಕೆಲಸ. ಪ್ರತಿಯೊಂದು ಜೀವಿಗೂ ಆತನದೇಆದ ಒಂದು ದೈಹಿಕ ರಚನೆ ಹೇಗೆ ಅಗತ್ಯವೋ ಅದೇ ರೀತಿ ಒಳ್ಳೆಯ ಸಾಹಿತ್ಯದ ಪ್ರತಿಯೊಂದು ಕೃತಿಗೂ ಅದರದೇಆಗಿರುವ ದೈಹಿಕ ರಚನೆ ಅಗತ್ಯ. ಈ ಹಿನ್ನಲೆಯಲ್ಲಿ ನವ್ಯ ಕವಿಗಳು ಕಾವ್ಯದ ಶರೀರವನ್ನು ಹೊಸ ರೀತಿಯಲ್ಲಿ ಕಟ್ಟುವ ಉತ್ಸಾಹವನ್ನು ತಾಳಿದರು.

ಭಾಷಾ ಬಳಕೆಯಲ್ಲಿಯೂ ನವ್ಯ ಸಾಹಿತ್ಯ ಅನೇಕ ಸಮಸ್ಯೆಗಳನ್ನು ಎದುರಿಸುತ್ತಲೇ ಬಂದಿದೆ. ಭಾಷೆ ಶೋಧಕವಾಗಿ ಸಂಕೀರ್ಣಮಯವಾಯತು. ವ್ಯಕ್ತಿ ವಿಶಿಷ್ಟ ಅನುಭವಗಳ ಅಭಿವ್ಯಕ್ತಿಗೆ ಬಳಸಿಕೊಳ್ಳಬೇಕಾದ ಸ್ಥಿತಿಯಲ್ಲಿ ಅದಕ್ಕೆ ವಿಶಿಷ್ಟ ತೇಜಸ್ಸನ್ನು ನೀಡಬೇಕಾದರೆ ಜವಾಬ್ದಾರಿಯನ್ನು ನವ್ಯ ಸಾಹಿತ್ಯ ಸ್ವೀಕರಿಸಬೇಕಾಗಿ ಬಂದಿತು. ಇಂದು ಪ್ರತಿಯೊಬ್ಬ ಕವಿಯು ಎದುರಿಸಬೇಕಾದ ಪ್ರಶ್ನೆ ಪ್ರತಿಯೊಬ್ಬ ಮಹತ್ವದ ಕವಿಯೂ ಭಾಷೆಯ ಮೇಲಿನ ತನ್ನ ವಿಶಿಷ್ಟ ಪ್ರಭುತ್ವದ ಮೂಲಕ ಬಿಡಿಸಿಕೊಳ್ಳಬೇಕಾಗುತ್ತದೆ. ಇದಕ್ಕಾಗಿ ಸುತ್ತಲೂ ಆಡುವ ಭಾಷೆಯ ಪರಿಮಿತಿಗಳನ್ನು ತನ್ನಿಂದ ಆದಷ್ಟು ಮಟ್ಟಿಗೂ ಮುರಿದು ಅದರ ಅಭಿವ್ಯಕ್ತಿಯ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುತ್ತಾನೆ. ಹೊಸ ಭಾಷಾಶಿಲ್ಪದ ಪ್ರಯೋಗದಲ್ಲಿ ತೋರಿದ ಕಾಳಜಿಯನ್ನು ನವ್ಯಕವಿಗಳು ಅದರ ಸಂವಹನ ಸಾಧ್ಯತೆಯಲ್ಲಿ ತೋರಲಿಲ್ಲವೆಂದೇ ಹೇಳಬೇಕು.

ನವ್ಯ ಕವಿಗಳು ಜನರಾಡುವ ಭಾಷೆಯನ್ನು ಬಳಸಿಕೊಂಡು ಹೊಸ ಶೋಧನೆಗೆ ತೊಡಗಿದಾಗ ಭಾಷೆ ಸಂಕೀರ್ಣವಾದದ್ದು ನಿಜ. ನವೋದಯ ಕವಿಗಳು ಅದೇ ಜನರಾಡುವ ಭಾಷೆಯನ್ನು ಬಳಸಿದ್ದರೂ ಅವರ ಪರಿಕಲ್ಪನೆಯಲ್ಲಿ ಭಾಷೆ ಸರಳ ಬದುಕಿನ ಮೊತ್ತವಾಯಿತು. ಹೀಗೆ ನವ್ಯಕ್ಕೂ ಭಾಷೆ, ಬದುಕು, ಆಧುನಿಕ, ತಾಂತ್ರಿಕ ಕೌಶಲ್ಯಗಳು ಸವಾಲಾಗಿ ತೋರಿದ್ದರೂ ಅವೇ ಸಾಹಿತ್ಯಿಕ ಮೌಲ್ಯ ಮಿತಿಗಳಾದವು.

'ನವ್ಯ' ಸಾಹಿತ್ಯ ಪರಂಪರೆಯನ್ನು ಗುರುತಿಸುವಾಗ, ಇದರ ಆದ್ಯ ಪ್ರವರ್ತಕರಾದ ವಿ.ಕೃ.ಗೋಕಾಕ ಅವರು ತಮ್ಮ 'ಸಮುದ್ರ ಗೀತೆಗಳು' ಸಂಕಲನದಲ್ಲಿ ಹೊಸ ರೀತಿಯ ಪ್ರಯೋಗಗಳನ್ನು ಮಾಡಿದ ಅವರು ಛಂದಸ್ಸಿನ ಹೊಸ ಹೊಸ ಪ್ರಯೋಗಗಳನ್ನು ಮಾಡುವದರ ಮೂಲಕ ನವೋದಯ ಕಾವ್ಯ ಸಂಪ್ರದಾಯದಿಂದ ಮುಕ್ತವಾಗಿ ನವ್ಯ ಕಾವ್ಯಕ್ಕೆ ಒಂದು ಹೊಸ ಮಾರ್ಗ ತೋರಿಸಿದರು. ಅನುಭಾವಿ, ತತ್ವಜ್ಞಾನಿ ಶ್ರೀ ಅರವಿಂದರ ಚಿಂತನೆ ಗೋಕಾಕರಿಗೆ ಒಂದು ಹೊಸ ವಿಚಾರಧಾರೆಯನ್ನು ಮೂಡಿಸುತ್ತದೆ. ಅವರ ವ್ಯಕ್ತಿತ್ವವನ್ನು ಗುರುತಿಸುವದರ ಮೂಲಕ ಅವರ ಮೇಲೆ ಹೆಚ್ಚಿನ ಪ್ರಭಾವವನ್ನು ದಟ್ಟವಾಗಿಸಿ ಬಿಡುತ್ತದೆ. ನಿಜವಾದ ಶೋಧನೆಯ ನೆಲೆಯು ಅವರ ವಿಚಾರಧಾರೆಗೆ ಒಂದು ವಸ್ತುವಾಗಿ ನಿಲ್ಲುತ್ತದೆ. ಅದಕ್ಕಾಗಿ ಗೋಕಾಕರು ಪ್ರತಿಭಾನ್ವಿತ ಕವಿಯಾಗಿ ನವ್ಯ ಸಾಹಿತ್ಯದಲ್ಲಿ ಕಾಣಿಸಿಕೊಳ್ಳುತ್ತಾರೆ.

ವಿ.ಕೃ.ಗೋಕಾಕರ ಸಮಕಾಲೀನರಾಗಿ ಗೋಪಾಲಕೃಷ್ಣ ಅಡಿಗರು ಕಾಣಿಸಿಕೊಳ್ಳುತ್ತಾರೆ. "ತಮ್ಮ ಮೊದಲ ಸಂಕಲನ 'ಭಾವತರಂಗ'ದಲ್ಲಿಯೇ ಸ್ವಂತಿಕೆಯ ಹಂಬಲವನ್ನು ದಟ್ಟವಾಗಿ ಪ್ರಕಟಿಸಿದ ಗೋಪಾಲಕೃಷ್ಣ ಅಡಿಗರು 'ನಡೆದುಬಂದ ದಾರಿ' ಸಂಕಲನದ ವೇಳೆಗೆ ತಮ್ಮ ನಿಲುವಿನಲ್ಲಿ ಹೆಚ್ಚು ಸ್ಪಷ್ಟರಾಗಿದ್ದು, ಹೊಸ ಕಾವ್ಯದ ಅಗತ್ಯವನ್ನು ಪ್ರತಿಪಾದಿಸಿ ಭಿನ್ನ ರೀತಿಯ ಕಾವ್ಯ ರಚನೆ ಆರಂಭಿಸಿದರು. ಅಡಿಗರ ಕಾವ್ಯದುದ್ದಕ್ಕೂ ಕಂಡು ಬರುವ ಬಹುಮುಖ್ಯ ಅಂಶ ಆಧುನಿಕ ಮಾನವನ ಸಂಘರ್ಷ ಸ್ಥಿತಿ."[೫] ಅವರ 'ಭೂಮಿಗೀತೆ' ಕವನ ಸಂಕಲನ ನೋಡಿದರೆ ನಮಗೆ ಪರಿಪೂರ್ಣ ಅರ್ಥವಾಗುತ್ತದೆ ಭೂಮಿ–ಆಕಾಶಗಳ ಮಧ್ಯ ಸಿಕ್ಕದೇಹ ಮನಸ್ಸುಗಳ ಘರ್ಷಣೆಯು ತುಂಬಾ ವೈಶಿಷ್ಟ್ಯಪೂರ್ಣವಾಗಿದೆ.

ಗಂಗಾಧರ ಚಿತ್ತಾಲ, ಸು.ರಂ.ಯಕ್ಕುಂಡಿ, ವಿ.ಜಿ.ಭಟ್ಟ, ಎಂ.ಅಕಬರ ಅಲಿ, ಶಂಕರ ಮೊಕಾಶಿ ಪುಣೆಕರ ಮೊದಲಾದವರು ತಮ್ಮ ಕಾವ್ಯ ಜೀವನದ ಆರಂಭ ಘಟ್ಟದಲ್ಲಿ ಗೋಕಾಕರ ಚಿಂತನೆ, ವಿಚಾರಕ್ಕೆ ಒಳಗಾಗಿ ಕಾಲಾಂತರದಲ್ಲಿ ತಮ್ಮದೆ ಆದ ಶೈಲಿಯನ್ನು ಗುರುತಿಸಿಕೊಂಡರು. ನವ್ಯ ಪರಂಪರೆಯಲ್ಲಿ ಸು.ರಂ.ಯಕ್ಕುಂಡಿ ಭಾವಗೀತಾತ್ಮಕತೆಯ ಬಗ್ಗೆ ಬದುಕಿನ ಸ್ಥಿತಿಗತಿಗಳನ್ನು ಕುರಿತು ಚಿಂತಿಸುತ್ತ ಭಾವನೆಗಳ ಹುಟ್ಟುವಿಕೆ ಅವುಗಳ ನೆಲೆ ಮುಂತಾದ ವಿಚಾರಗಳನ್ನು ತರುವದರಲ್ಲಿ ಪ್ರಯತ್ನಿಸಿದ್ದಾರೆ.

ಚಿತ್ತಾಲರದು ಶ್ರೇಷ್ಠವಾದ ವ್ಯಕ್ತಿತ್ವವಾಗಿದೆ. ಉದಾತ್ತವಾದ ಚೇತನವನ್ನು 'ನವ್ಯ' ಕಾವ್ಯ ಸಂದರ್ಭದಲ್ಲಿ ಸೃಷ್ಟಿಸಿದ ವಿಶಿಷ್ಟವಾದ ಪ್ರತಿಭೆಯಾಗಿದೆ. ಕಾವ್ಯ ಸೃಷ್ಟಿಯನ್ನು ಮಾಡುವದರ ಮೂಲಕ ಚಿತ್ತಾಲರದು ಗಮನಾರ್ಹ ಸಾಧನೆ ಮಾಡಿದ್ದಾರೆ. ಶಂಕರ ಮೊಕಾಶಿ ಪುಣೆಕರ, ತಮ್ಮ ವಿಶಿಷ್ಟ ವ್ಯಕ್ತಿತ್ವದಿಂದ ಬೇರೆ ಬೇರೆ ರೀತಿಯ ಆಲೋಚನೆಗಳಿಂದಾಗಿ ಸಮಕಾಲೀನ ಸಾಹಿತ್ಯದಲ್ಲಿ ಪ್ರಮುಖರಾಗಿದ್ದಾರೆ. ವಿ.ಜಿ.ಭಟ್ಟರು ನವ್ಯ ಸಾಹಿತ್ಯದಲ್ಲಿ ಸಮರ್ಥವಾದ ವಿಡಂಬನೆ, ವ್ಯಂಗೋಕ್ತಿಗಳ ಬಳಕೆಯ ಪ್ರಯೋಗವನ್ನು ಮಾಡಿರುವದು ತುಂಬಾ ಗಮನಾರ್ಹವಾಗಿದೆ. ನಂತರ ನವ್ಯತೆ ಹೆಚ್ಚು ಪ್ರಖರತೆಯನ್ನು ಪಡೆದುಕೊಳ್ಳಲು ಅಡಿಗರ ಪ್ರಭಾವ ಕೆಲವು ಕವಿಗಳ ಮೇಲಾಗಿದೆ.

ಈ ಒಂದು ಮಾರ್ಗದಲ್ಲಿ ಮಹತ್ವದ ಕೃಷಿ ಮಾಡಿದ ಕೆ.ಎಸ್.ನರಸಿಂಹಸ್ವಾಮಿ ಕಾವ್ಯ ಸಂದರ್ಭವನ್ನು ತಮ್ಮ ಬೆಳವಣಿಗೆಗೆ ಧಾರಾಳವಾಗಿ ಬಳಸಿಕೊಂಡು ಹೆಸರು ಮಾಡಿದ ಕವಿ. 'ಮೈಸೂರು ಮಲ್ಲಿಗೆಯ ಸೊಬಗು ಇನ್ನೂ ಬಾಡಿಲ್ಲ ಬಾಡುವಂತೆಯೂ ಇಲ್ಲ' ಈ ಕಾವ್ಯದ ಚೆಲವು ಒಲುವು 'ಶಿಲಾಲತೆ' ಹಾಗೂ ಮನೆಯಿಂದ ಮನೆಗೆ ಇವುಗಳಲ್ಲಿ ನಡೆದ ಕಾವ್ಯದ ಬೆಳವಣಿಗೆಯನ್ನು ಸ್ಪಷ್ಟವಾಗಿ ಗುರುತಿಸಬಹುದು. ಒಂದು ಗಟ್ಟಿಮುಟ್ಟಾದ ವಾಸ್ತವ ಪ್ರಜ್ಞೆ ಅವರ ಎಲ್ಲ ಕವಿತೆಗಳ ತಳಹದಿಯಲ್ಲಿದೆ, ಮೈಸೂರು ಮಲ್ಲಿಗೆಯ ಪ್ರಣಯದ ಸುಕುಮಾರರು ಜಗತ್ತಿನಿಂದ ಹೊರಬಂದು ವಾಸ್ತವ ಜಗತ್ತಿನೊಡನೆ ಕೂಡಿಕೊಂಡಿರುವದು ವಿಶೇಷವಾಗಿದೆ. ಕಾವ್ಯ ಬೆಳವಣಿಗೆಯ ಇನ್ನೊಂದು ತಿರುವು ಎಂದರೆ "ತೆರೆದ ಬಾಗಿಲು"

ಕವನ ಸಂಕಲನದಲ್ಲಿ ಭೂಮಿಯೊಂದೇ ತಾನು ಭರವಸೆಯಿಟ್ಟು ಉಳಿದವರಿಗೆ ಭರವಸೆಯ ತುಂಬಿ ಇರಬೇಕಾದ ಕವಿಯ ಕೆಲಸ ಎಂಬ ಉದ್ದೇಶ ಕೆ.ಎಸ್.ಎನ್ ಅವರ ಕಾವ್ಯದಲ್ಲಿ ಚಿತ್ರಿತವಾಗಿದೆ.

ನವ್ಯ ಕಾವ್ಯದ ಆರಂಭದ ದಿನಗಳಲ್ಲಿ ಅಡಿಗರ ಜೊತೆ ಜೊತೆಗೆ ಕೇಳಿಬರುತ್ತಿದ್ದ ಇನ್ನೊಂದು ಹೆಸರು, ರಾಮಚಂದ್ರ ಶರ್ಮ. ಕನ್ನಡ ಕಾವ್ಯ ರಮ್ಯ ಸಂಪ್ರದಾಯದ ಏಕತಾನದಲ್ಲಿ ಸಿಕ್ಕು ಉಸಿರು ಕಳೆದುಕೊಳ್ಳುತ್ತಿದ್ದಾಗ ತಮ್ಮದೆಯಾದ ರಮ್ಯತೆ, ವೈಚಾರಿಕತೆ, ಉತ್ಸುಕತೆಯನ್ನು ಕಾವ್ಯಕ್ಕೆ ತಂದು ಕಾವ್ಯದ ನುಡಿಗಟ್ಟನ್ನು ಬದಲಾಯಿಸಿದವರಲ್ಲಿ ಶರ್ಮರು ಒಬ್ಬರು. ಆಮೇಲೆ ಕನ್ನಡ ಕಾವ್ಯ ರಂಜಕರು ಹವ್ಯಾಸಿ ಕವಿಗಳು ಓದುವ ಕಾವ್ಯವಲ್ಲ ಎಂದು ವಾದಿಸಿದರೂ ಕೂಡ ಅವರ ಕಾವ್ಯಕ್ಕೆ ಹೆಚ್ಚಿನ ಮಹತ್ವವಿದೆ.

ಏಕೆಂದರೆ ಶರ್ಮರ ಕಾವ್ಯದ ಕತೆಯೇ ಈ ಶತಮಾನದ ಎರಡನೆ ಜನಾಂಗಗಳ ಗ್ರಹಿಕೆಯ ಕತೆಯಾಗಿದೆ. ಇವರ ಕವನಗಳು ಹಿಂದಿರುವ ಮನಸ್ಸು ಪ್ರಾಮಾಣಿಕವೂ ಸೂಕ್ಷ್ಮವೂ ದಿಟ್ಟವೂ ಆದದ್ದು. ಸದ್ಯ ಅವುಗಳನ್ನು ನೋಡಿದರೆ ನಿರಂತರವಾದ ತುಡಿತ ಅವುಗಳಲ್ಲಿವೆ ಎಂದು ನಮಗೆ ಕಾಣಿಸುತ್ತದೆ. ನವ್ಯಕಾವ್ಯ ಅಡಿಗರ ದಟ್ಟ ಪ್ರಭಾವದಲ್ಲಿದ್ದಾಗ ಅದಕ್ಕೊಂದು ವಿಶಿಷ್ಟ ನಡೆ, ನುಡಿ ಕೊಟ್ಟವರು ಎ.ಕೆ.ರಾಮಾನುಜನ್. "ಇವರ ಕಾವ್ಯ ಜೀವನಾನುಭವವನ್ನು ಉಂಡು ಅರಗಿಸಿಕೊಂಡು ಅದನ್ನು ಪರಿವರ್ತಿಸಿ ನೀಡುವ ಕಾವ್ಯ ಅವರ ಕಾವ್ಯದಲ್ಲಿ ವಿಷಯಕ್ಕಿಂತ ನಿರೂಪಣೆಯ ರೀತಿ ಮುಖ್ಯ ಎಂದು ಹೇಳುವದು ಕೂಡಾ ಒಂದು ಸರಳೀಕರಣ. ಯಾವುದೇ ಒಳ್ಳೆಯ ಕಾವ್ಯಕ್ಕಿರುವಂತೆ ಇಲ್ಲಿ ವಿಷಯ ರೀತಿಗಳೆರೆಡೂ ಮುಖ್ಯವಾಗಿವೆ."[೬]

ಓದುಗರಿಗೆ ವಿಷಯ ತಟ್ಟನೆ ತಿಳಿಯುವಂತೆ ಕಾವ್ಯದ ತಿರುಳನ್ನು ಬಹಳಷ್ಟು ಸರಳೀಕರಣ ಮಾಡಿರುದರಿಂದ ಜನಸಾಮಾನ್ಯರಿಗೆ ಅರ್ಥವಾಗುವ ರೀತಿಯಲ್ಲಿ ಕಾವ್ಯ ರಚಿಸಿರುವದು ವಿಶೇಷವಾಗಿದೆ. ಬೇಂದ್ರೆ ಮತ್ತು ಅಡಿಗರ ತದನಂತರ ಸಹಜವಾದ ಪ್ರತಿಭೆಯಿಂದ ಉತ್ತೇಜಿತರಾಗಿ ಸೃಜನಾತ್ಮಕ ಶಕ್ತಿಯಿಂದ ನಮ್ಮೆಲ್ಲರ ಗಮನ ಸೆಳೆದ ಚಂದ್ರಶೇಖರ ಕಂಬಾರ ಭಾಷೆಯ ಜೊತೆಯಲ್ಲಿ ಆಟವಾಡುವ ರೂಢಿಯನ್ನು ಇಟ್ಟುಕೊಂಡಿದ್ದಾರೆ. ಉತ್ತರ ಕರ್ನಾಟಕದ ದೇಶೀಯತೆ ಅವರ ಸಾಹಿತ್ಯದಲ್ಲಿ ಹುಲುಸಾಗಿ ಬೆಳೆದಿದೆ. ತಮ್ಮ ಅಪಾರವಾದ ಆಸಕ್ತಿಯಿಂದ ಜಾನಪದ ಸಾಹಿತ್ಯಕ್ಕೊಂದು ಸಾರ್ಥಕ ಬದುಕಿನ ಜೀವ ತುಂಬಲು ಪ್ರಯತ್ನಿಸಿರುವದು ತುಂಬ ವೈಶಿಷ್ಟ್ಯಪೂರ್ಣವಾಗಿದೆ. ನವ್ಯ ಸಾಹಿತ್ಯದಲ್ಲಿ ಗಮನಾರ್ಹವಾದ ಕಾವ್ಯ ರಚಿಸಿ, ಸಾಧನೆ ಮಾಡಿರುವ ಎಚ್.ಎಂ.ಚನ್ನಯ್ಯ ತಮ್ಮ ಕಾವ್ಯದಲ್ಲಿ ಪ್ರತಿಮಾತ್ಮಕ ದೃಷ್ಟಿ ಧೋರಣೆಗಳನ್ನು ಪ್ರಯೋಗಿಸಿಕೊಂಡು ಬಂದಿರುವದು ಕಂಡುಬರುತ್ತದೆ. ಸಿದ್ದಲಿಂಗಯ್ಯ ದಲಿತರ ಬದುಕಿನ ಬಗ್ಗೆ ಕಾಳಜಿಯನ್ನು ವ್ಯಕ್ತಪಡಿಸಿರುವದರಿಂದ ದಲಿತ ಕವಿ ಎಂಬ ಹೆಸರಿಗೆ ಪಾತ್ರರು ಆಗಿದ್ದಾರೆ.

ನವ್ಯ ಪ್ರಜ್ಞೆಯು ಬಳಕೆಯಾಗಿದೆ. ಶ್ರೀ ಗೋವಿಂದಪೈ ಯವರ ಕವನಗಳು ಬುದ್ಧಿ, ಪ್ರಧಾನತೆ-ಸಂಯಮಗಳಲ್ಲಿ ಅದರ ಒಂದೆರೆಡು ವೈಶಿಷ್ಟ್ಯಗಳು ಎದ್ದು ಕಾಣುತ್ತವೆ. ಬೇಂದ್ರೆಯವರ 'ಕುರಿಮರಿ ನಾಯಿ' ನವ್ಯ ಕಾವ್ಯ ಪ್ರಪಂಚಕ್ಕೆ ಸೇರಿದ್ದು, ಗಮನಾರ್ಹವಾಗಿದೆ ಅವರ 'ನರಬಲಿಯ' ಕಾವ್ಯ ನವ್ಯತೆಯ ಚಿತ್ರಣವನ್ನು ಪ್ರತಿಬಿಂಬಿಸುತ್ತದೆ. ಶ್ರೀ ಕುವೆಂಪುರವರ 'ಕೋಗಿಲೆ ಮತ್ತು ಸೋವಿಯಟ್ ರಷ್ಯಾ' ಎಂಬ ಕವನವು ವಸ್ತುವಿನಲ್ಲಿ ನಿರೂಪಣೆಯಲ್ಲಿ ನವ್ಯತೆಯ ಲಕ್ಷಣವನ್ನು ತೋರಿದೆ. ಅಡಿಗರ ಕವನಗಳು ಹಾಗೂ ಶ್ರೀಕಣವಿ, ಎಕ್ಕುಂಡಿ, ವಿ.ಜಿ.ಭಟ್ಟ, ಶ್ರೀರಾಮಚಂದ್ರ ಶರ್ಮ ಮೊದಲಾದವರ ಸಾಮಾಜಿಕ ಕವನಗಳಲ್ಲಿಯೂ ನವ್ಯತೆಯು ತಲೆಯೆತ್ತಿದೆ. ಎಚ್.ಎಸ್.ಭೀಮನಗೌಡರ ತಮ್ಮ ಕಾವ್ಯದಲ್ಲಿ ಜನಪದ-ಭಾಷೆ, ಲಯ ನುಡಿಗಟ್ಟುಗಳನ್ನು ಸಹಜವಾಗಿ ನಿರಾಡಂಬರವಾಗಿ ಬಳಸಿರುವದು ನವ್ಯ ಸಾಹಿತ್ಯದಲ್ಲಿ ಢಾಳಾಗಿ ಕಾಣುತ್ತದೆ.

೨.೪ ನವ್ಯ ಸಾಹಿತ್ಯದಲ್ಲಿ ಗೋಕಾಕರ ಮಾರ್ಗ

ಕನ್ನಡದಲ್ಲಿ ನವ್ಯ ಮಾರ್ಗವನ್ನು ಐತಿಹಾಸಿಕ ದೃಷ್ಟಿಯಿಂದ ಪ್ರಾರಂಭಿಸಿದವರು ವಿ.ಕೃ.ಗೋಕಾಕರು. ಸ್ವಾತಂತ್ರ್ಯ ನಂತರದಲ್ಲಿ ಭಾರತದ ರಾಜಕೀಯ, ಸಾಮಾಜಿಕ, ಬದುಕಿನಲ್ಲಾದ ಬದಲಾವಣೆಗಳು ಹಾಗೂ ನವೋದಯ ಕಾವ್ಯ ಸಂಪ್ರದಾಯ ತನ್ನ ಸಿದ್ಧಿಯನ್ನು ತಲುಪುವದರ ಮೂಲಕ ಪರಿವರ್ತನೆಯಾಗತೊಡಗಿದ ಸ್ಥಿತಿ ಹೊಸ ಮಾರ್ಗದ ಅಗತ್ಯವನ್ನು ಸೂಚಿಸಿದ್ದವು. ಈ ಬದಲಾವಣೆಯ ಅವಶ್ಯಕತೆಯಿದೆ ಎಂದು ಅಧಿಕೃತವಾಗಿ ಹೇಳಿದವರು ವಿ.ಕೃಗೋಕಾಕರು. ನವೋದಯ ಕಾವ್ಯ ಪರಂಪರೆಗೆ ಒಂದು ರೀತಿಯ ಹಳೆಯ ಕನಸುಗಳಿಗೆ ಬಿಳ್ಕೊಡುಗೆ ಹೇಳಿದರು. ಕನ್ನಡ ಆಧುನಿಕ ಸಾಹಿತ್ಯದಲ್ಲಿ ಹೊಸ ಪರಂಪರೆಗೆ ಒಂದು ಸೇತುವೆ ಕಟ್ಟಬೇಕು ಎಂದು ಗೋಕಾಕರು ನವ್ಯ ಸಾಹಿತ್ಯಕ್ಕೆ ಒಂದು ಹೆದ್ದಾರಿಯನ್ನು ನಿರ್ಮಿಸಿದರು.

೧೯೫೦ ರಲ್ಲಿ ಮುಂಬಯಿ ಸಾಹಿತ್ಯ ಸಮ್ಮೇಳನದಲ್ಲಿ ಅವರು ತಮ್ಮ ಅಧಿಕಾರಯುತವಾದ ಭಾಷಣದಲ್ಲಿ ನವ್ಯ ಕಾವ್ಯವನ್ನು ಸಮರ್ಥಿಸಿದಲ್ಲದೆ ಅದನ್ನು ಆಧುನಿಕ ಕನ್ನಡ ಕಾವ್ಯದೊಂದಿಗೆ ಜೋಡಿಸಿದರು. ನವ್ಯ ಕವಿತೆಗಳ ತಂತ್ರ ವಿಧಾನವನ್ನು ಕುರಿತು ಪ್ರತಿಪಾದಿಸುವಾಗ ಅವರು ತಾವು ಬರೆದ ಕವಿತೆಗಳಿಂದಲೇ ಉದಾಹರಣೆಗಳನ್ನು ಆಯ್ದುಕೊಂಡು ಹೇಳಿದರು. ಹೀಗೆ ಕಾವ್ಯ ಮಾರ್ಗವೊಂದರ ಪ್ರೇರಕಾದ್ದಲ್ಲದೆ ಆ ಮಾರ್ಗದ ಮೂಲ ಪ್ರಜ್ಞೆಯನ್ನು ಅವರು ಶಾಸ್ತ್ರೀಯವಾಗಿ ಯೋಚಿಸಿದರು. ನವ್ಯ ಕಾವ್ಯವೆಂಬ ಹೆಸರನ್ನು ಕೊಟ್ಟವರು ಗೋಕಾಕರು ಆದರೆ, ಅದು ಅವರಿಗೆ ಹೊಸ ರೀತಿ ತಂತ್ರವಷ್ಟೇ ಆಗಿತ್ತು. ವಸ್ತುವಿನ ಆಮೂಲಾಗ್ರ ಪರಿವರ್ತನೆಯ ಕಡೆಗೆ ಅವರ ದೃಷ್ಟಿ ಹರಿಯಲಿಲ್ಲ. ಲಯ ಮತ್ತು ಪ್ರತಿಮಾ ಕಲ್ಪನೆಗಳಲ್ಲಿಯ ಅವರ ಕುತೂಹಲಕಾರಿ ಪ್ರಯೋಗಗಳು ಕೂಡಾ ರೂಢಿಯ ಕೊರಕಲಿಗೆ ಬಿದ್ದಿದ್ದ ಆಗಿನ ಕಾವ್ಯದ ಸ್ಥಿತಿಯನ್ನು ತಳ ಮಟ್ಟದಿಂದ ಕಲಕಲು ಸಾಧ್ಯವಾಗಲಿಲ್ಲ.

ನವ್ಯ ಅವರ ಮನಸ್ಸು ಹಿಡಿದಿರುವುದನ್ನು ಸಹಜವಾಗಿಯೇ ಮೇಲುನೋಟಕ್ಕೆ ಗುರುತಿಸಬಹುದು. ಇಲ್ಲಿಯ ಕವಿತೆಗಳು ಇಡಿಯಾಗಿ ನವ್ಯಕ್ಕೆ ಲಕ್ಷವಾಗದೇ ಹೋಗಬಹುದು. ಆದರೆ ಅವು ನವ್ಯದ ಹೆಜ್ಜೆಗುರುತುಗಳನ್ನು ಹೊಳಹನ್ನು ನಿರ್ದೇಶಿಸುವ ಮಾದರಿಯ ಪ್ರಯೋಗಗಳಾಗಿ ಕನ್ನಡ ಕಾವ್ಯದಲ್ಲಿ ಐತಿಹಾಸಿಕ ದಾಖಲೆಗಳಾಗಿ ನಿಲ್ಲುತ್ತವೆ ಎಂಬುದನ್ನು ನಾವು ನಿರ್ಲಕ್ಷಿಸುವಂತಿಲ್ಲ. ಆದರೆ ಗೋಪಾಲಕೃಷ್ಣ ಅಡಿಗರು ಮಾತ್ರ ಈ ಒಂದು ಹೊಸ ಪ್ರಯೋಗದ 'ಗತಿ' ಯನ್ನು ಬದಲಾಗುವ ಸ್ಥಿತ್ಯಂತರವನ್ನು ಬಹುಬೇಗನೆ ತಿಳಿದುಕೊಂಡು ತೀರ ಬೇರೆಯಾದ ನಿಟ್ಟಿನಲ್ಲಿ ನಿಲ್ಲಿಸಿ ನೋಡಿದಾಗ ಹೊಸ ಜನಾಂಗದ ಮನಸ್ಥಿತಿಗೆ ಹೃದಯಕ್ಕೆ ಸಂತೋಷ ಹುಟ್ಟಿಸಿತು. ಏಕತಾನತೆಯ ಕಂದರದಿಂದ ಪಾರುಮಾಡಿ ಕಾವ್ಯಕೋಡಿಗೆ ಚಲನಶೀಲತೆಯನ್ನು ತಂದು ಕೊಡಲು ಪ್ರಯತ್ನಿಸಿರುವುದು ಗಮನಾರ್ಹವಾದ ಸಂಗತಿಯಾಗಿದೆ.

'ನವ್ಯತೆ' ನಮ್ಮ ಕನ್ನಡವನ್ನು ಎರಡು ಮಾರ್ಗಗಳಲ್ಲಿ ಪ್ರವೇಶ ಮಾಡಿರುವದು ನಮಗೆ ಕಂಡು ಬರುವ ಸಂಗತಿಯಾಗಿದೆ. ಮೊದಲನೆಯದು ಗೋಕಾಕರ ಮಾರ್ಗವಾದರೆ, ಮತ್ತೊಂದು ಗೋಪಾಲಕೃಷ್ಣ ಅಡಿಗರ ಮಾರ್ಗ. ತಮ್ಮ ಮಾರ್ಗವನ್ನು 'ನವ್ಯ' ವೆಂದು ಗೋಕಾಕರು ಕರೆದುಕೊಂಡರು. ಅಡಿಗರ ಮಾರ್ಗವನ್ನು 'ಅತಿನವ್ಯ' ಎಂದು ಸ್ವತಃ ಗೋಕಾಕರೇ ವಿಂಗಡಿಸುತ್ತಾರೆ. ಹೀಗೆ ನವ್ಯ ಕಾವ್ಯ ಗಳಲ್ಲಿ ಎರಡು ಬಿರುಕುಗಳುಂಟಾದವು ಆದರೆ ಅಡಿಗರ ಕಾವ್ಯ ಕಣ್ಣೆದುರಿಗಿದ್ದ ಹೊಸ ಸವಾಲುಗಳನ್ನು ಸ್ವೀಕರಿಸಲು, ಪ್ರತಿಕ್ರಿಯಿಸಲು ಸಂಪೂರ್ಣವಾಗಿ ಸಿದ್ದವಾಯಿತು. ಗೋಕಾಕರ ಕಾವ್ಯ ಮಾತ್ರ ಸಂಪ್ರದಾಯದ ಜಾಡನ್ನು ಹಿಡಿದುಕೊಂಡು ಮುಂದುವರೆಯಿತು ತಾನಿಟ್ಟುಕೊಂಡ ಪ್ರಜ್ಞಾಕ್ಷೇತ್ರಕ್ಕೆ ಸೂತ್ರಗಳನ್ನು ನೀಡಿ ಕಾವ್ಯ ರಹಸ್ಯದ ಪರಿಯನ್ನೇ ಗೊತ್ತುಪಡಿಸಲು ಉದ್ದೇಶಿಸಿತು. ಮೊನಚಾದ ಭಾಷೆ, ತಂತ್ರ, ಶೈಲಿ–ಹಲವು ವೈವಿಧ್ಯಮಯ ಆಶಯಗಳನ್ನು ಹೊಂದಿದ ಅಡಿಗರ ಕಾವ್ಯ ಸ್ಪಷ್ಟವಾದ ಮಾರ್ಗವನ್ನು ತೆರೆಯಿತು.

ಮುಂದೆ 'ಅತಿನವ್ಯ' ರೀತಿಯನ್ನು ಗೋಕಾಕರು ವಿರೋಧಿಸುತ್ತಾರೆ. ಕಾಲಕ್ರಮೇಣ 'ಸಮನ್ವಯ' ವೆಂಬ ಪರಿಕಲ್ಪನೆಯನ್ನು ಅವರು ಬೆಳಕಿಗೆ ತರುವ ಪ್ರಯತ್ನ ಮಾಡುತ್ತಾರೆ. "ನವ್ಯತೆಯನ್ನು ಕುರಿತು ನಾನು ಮೊದಲನೆಯ ಸಲ ಮಾತನಾಡಿದಾಗಿನಿಂದ ಅತಿನವ್ಯತೆಯ ರೀತಿಯನ್ನು ಪ್ರಧಾನವಾಗಿಸದೆ ನಾನು ಮಾತನಾಡಿದ್ದೆ. ಅತಿನವ್ಯತೆಯ ಆರಾಧನೆಯಿಂದ ಹುಟ್ಟಿದ ಅತಿರೇಕಗಳಷ್ಟೇ ನವ್ಯವಲ್ಲವೆಂಬುದನ್ನು ಸ್ಪಷ್ಟಗೊಳಿಸಬೇಕಾಗಿತ್ತು. ಅಲ್ಲದೆ ಅತಿ ನವ್ಯವೊಂದನ್ನು ಬಿಟ್ಟು ಉಳಿದ ಬರವಣಿಗೆಯ ವಿಷಯದಲ್ಲಿರುವ ಅಸಹನೆಯ ಅಸಾಧುತ್ವವನ್ನು ಅಲ್ಲಗಳೆಯಬೇಕಾಗಿತ್ತು ಈ ಕಾರಣಕ್ಕಾಗಿ ಸಮನ್ವಯವೆಂಬ ತ್ರೈಮಾಸಿಕವನ್ನು ಹೊರಡಿಸಬೇಕೆಂಬ ವಿಚಾರ ನನ್ನ ತಲೆಯಲ್ಲಿ ಸುಳಿಯತೊಡಗಿತು." ಗೋಕಾಕರು 'ಅತಿ ನವ್ಯತೆ' ಯನ್ನು ಕುರಿತು ಸಮರ್ಥಿಸಿಕೊಂಡಿದ್ದರು. ಹೊಸ ಪ್ರಯೋಗಶೀಲತೆ ಮತ್ತು ಹೊಸ ಸಂವೇದನೆಯ ದೃಷ್ಟಿಯಿಂದ ಮುಂದೆ "ಸಮನ್ವಯ" ದ ಹದಿನಾರು ಸೂತ್ರಗಳನ್ನು

ರೂಪಿಸಿ ಗೋಕಾಕರು ಸಮನ್ವಯದ ಘೋಷಣೆ ಮಾಡಿದರು. ಈ ರೀತಿಯಾಗಿ ಅವರು 'ನವ್ಯತೆ'ಯನ್ನು ಆರಂಭಿಸಿದರು 'ಅತಿನವ್ಯತೆ' ವಿರೋಧಿಸಿ ಸಮನ್ವಯದ ಘೋಷಣೆ ಮಾಡಿದ್ದು, ಗೋಕಾಕರ ನವ್ಯತೆಯ ಪರಿಕಲ್ಪನೆಗೆ ಹಿಡಿದ ಕನ್ನಡಿಯಾಗಿದೆ. ಗೋಕಾಕರು ಬದಲಾದ ಸಂವೇದನೆಯ ಬಿಕ್ಕಟ್ಟನ್ನು ಗಮನಿಸಿಕೊಂಡು ನಡೆಸಿದ ಭಾಷಾ ಪ್ರಯೋಗ, ತಂತ್ರ ನಾವೀನ್ಯತೆ ಐತಿಹಾಸಿಕವಾಗಿ ಬಹುಮುಖ್ಯವಾಯಿತು. ಹೀಗೆ ಗೋಕಾಕರು ನವ್ಯ ಸಾಹಿತ್ಯದಲ್ಲಿ ಅಗ್ರಗಣ್ಯ ಕವಿಯಾಗಿ ಕಾಣಿಸಿಕೊಳ್ಳುತ್ತಾರೆ.

೨.೫ ಅಡಿಗರು ಮತ್ತು ಪ್ರಮುಖ ಕವಿಗಳ ಕೊಡುಗೆ

ಆಧುನಿಕ ಕನ್ನಡ ಕಾವ್ಯದಲ್ಲಿ ಒಂದು ಘಟ್ಟವು ಕಳೆದು ಈಗ ಇನ್ನೊಂದು ಘಟ್ಟ ಆರಂಭವಾಗುತ್ತದೆ. ಕಾವ್ಯ ರೂಪದಲ್ಲಿ ಬದಲಾವಣೆ ಆಗಬೇಕಾದ ಕಾಲ ಈಗಾಗಲೇ ಬಂದು ಬಿಟ್ಟಿದೆ. ಹೊಸ ಆದರ್ಶಕ್ಕಾಗಿ, ಹೊಸ ಕನಸಿಗಾಗಿ ದೇಶದ ಮನಸ್ಸು ಕುತೂಹಲದಿಂದ ಕಾಯುತ್ತಿದೆ. ಇಂಥ ವಾತಾವರಣ ನಮ್ಮ ಸುತ್ತಮುತ್ತಲೂ ಇರುವಾಗ, ಜೀವನವನ್ನು ಅವಲಂಬಿಸಿರುವ ಕಾವ್ಯವೂ ಬದಲಾವಣೆಗೊಳ್ಳುವದು ಸಹಜ. ಈಗ ಕಾಣುತ್ತಿರುವ ಹೊಸ ಮನೋಧರ್ಮವನ್ನು ವ್ಯಕ್ತಪಡಿಸಲು ಹೊಸ ಶಬ್ದ ರೂಪುಗೊಳ್ಳಬೇಕಾಗಿದೆ. ಪ್ರತಿ ತಲೆಮಾರಿನಲ್ಲೂ ಕವಿ ತನ್ನದೇ ಆದ ಒಂದು ಹೊಸ ಭಾಷೆಯನ್ನು ರೂಪಿಸಿಕೊಳ್ಳದೆ ಉತ್ತಮ ಅಭಿವ್ಯಕ್ತಿಯನ್ನು ಪಡೆಯಲಾರನು. ಅದಕ್ಕೆ ಗತಕಾಲದ ಭಾಷೆಯನ್ನು ನಮ್ಮ ಭಾವನೆಯು ದೂರ ತಳ್ಳುವುದರ ಮೂಲಕ ಹೊಸ ಜೀವನ, ಭಾವನೆಗಳಿಗೆ ತಕ್ಕ ರೀತಿ ರೂಪುಗೊಳ್ಳಬೇಕಾದ ಕಾಲ ಈಗ ಸಾಹಿತಿಗಳನ್ನು ಸೃಜನಾತ್ಮಕ ಸವಾಲುಗಳನ್ನು ಎದುರಿಸಿ ನಿಂತಿದೆ ಎಂದು ಗೋಪಾಲಕೃಷ್ಣ ಅಡಿಗರು ಹೊಸ ಕಾವ್ಯ ಮಾರ್ಗದ ಅಗತ್ಯವನ್ನು ಕುರಿತು ಪ್ರತಿಪಾದಿಸಿರುವ ಮಾತಿದು.

ಅಡಿಗರು ಹೊಸ ಭಾಷೆಯನ್ನು ರೂಪಿಸಿಕೊಳ್ಳಬೇಕಾದ ಅಗತ್ಯವನ್ನು ಹೇಳುತ್ತ, ವಾಸ್ತವದಿಂದ ನವೋದಯ ಕಾವ್ಯ ದೂರವಾಗಿದೆಯೆಂಬ ಸಂಗತಿಯ ಬಗ್ಗೆ ಒತ್ತುಕೊಟ್ಟು, ಕಾವ್ಯಕ್ಕೆ ವಾಸ್ತವದ ಜೀವದಾನ ನಡೆಯ ಬೇಕಾಗಿದೆಯೆಂದು ಅಡಿಗರ ಅಭಿಪ್ರಾಯವಾಗಿದೆ. ಭಾವ, ಲಯಗಳು, ಅಡಿಗರ ಹೊಸ ಪ್ರಯೋಗ ಶೀಲತೆಯಲ್ಲಿ ಸೇರಿಕೊಂಡಿವೆ. ಅದಕ್ಕಾಗಿ ತಮ್ಮ ಕವನ ಸಂಕಲನದಲ್ಲಿ ವಿಡಂಬನೆ, ನಾಟಕೀಯ ಶೈಲಿಯ ಸ್ವರೂಪಗಳು ಕವನಗಳಲ್ಲಿ ಮೈಚಾಚಿಕೊಂಡು ಬೆಳೆದಿವೆ. "ಅದಕ್ಕಾಗಿ ಅಡಿಗರ ವಿಡಂಬನೆಯ ಉದ್ದೇಶ ಹಾಗೂ ಅವರ ದೃಷ್ಟಿಕೋನಗಳು ಭಿನ್ನವಾಗಿರುತ್ತವೆ. ಅವರ ಕಾವ್ಯ ನಮ್ಮ ಜೀವನದಲ್ಲಿ ಡಾಂಭಿಕ ವೃತ್ತಿಯನ್ನು ಬಯಲಿಗೆಳೆಯುತ್ತದೆ. ಬಾಯಿಂದ ಹೇಳುವ ವೇದಾಂತ ಹಾಗೂ ಹೊಗಳುವ ಆದರ್ಶ ಸ್ವಾನುಭವವಾಗಿ ಆಚರಣೆಯಲ್ಲಿ ಒಡಮೂಡದಿರುವದೇ ಸಮಸ್ಯೆಯಾಗಿದೆ. ಧರ್ಮ ಹಾಗೂ ರಾಜಕೀಯ ಇವೆರೆಡು ಕ್ಷೇತ್ರಗಳಲ್ಲಿ ಮಾತ್ರ ಡಾಂಭಿಕ ವೃತ್ತಿ ಹೆಚ್ಚಾಗಿ ಕಂಡು ಬರುವದರಿಂದ ಹೀಗಾಗಿ ಅವೆರಡೂ ಅಡಿಗರ ವಿಡಂಬನೆಗೆ

ತುತ್ತಾಗಿವೆ."[೨೨] ನೂರಾರು ಆಡುಮಾತಿನಲ್ಲಿರುವ ಶಬ್ದಗಳನ್ನು ತನ್ನ ನಾಟಕ ಗುಣವುಳ್ಳ ಸ್ವಚ್ಛಂದ ಲಯಗಳಲ್ಲಿ ಅರಗಿಸಿಕೊಳ್ಳುವ ಈ ಕಾವ್ಯದಲ್ಲಿನ ವಾಸ್ತವಾತಾವಾದ ಮತ್ತು ಮಣ್ಣಿನ ವಾಸನೆ ಅಡಿಗರ ಅನನ್ಯತೆಯನ್ನು ಎತ್ತಿ ತೋರಿಸುತ್ತದೆ. ಅಡಿಗರ ಕಾವ್ಯ ಅನುಭವವನ್ನು ಬೆಲೆಗಟ್ಟುವ ಜೀವನದ ಅರ್ಥಪೂರ್ಣತೆಯನ್ನು ಹುಡುಕುವ ಕಾವ್ಯ, ಜೀವನ ಮೌಲ್ಯಗಳನ್ನು ಎತ್ತಿತೋರಿಸಲು ವಾಸ್ತವ ಸತ್ಯವನ್ನು ರೂಢವಾದ 'ಸಿದ್ದಶೈಲಿ' ಯನ್ನು ಬಿಟ್ಟುಕೊಡದೆ, ಹೊಸ ಲಯದಲ್ಲಿ ಅದನ್ನು ಹಿಡಿದು ಇಡಬೇಕೆಂದು ಗೋಪಾಲಕೃಷ್ಣ ಅಡಿಗರ 'ನವ್ಯತೆ'ಯ ಪರಿಕಲ್ಪನೆಯಾಗಿದೆ. ನವ್ಯ ಸಾಹಿತ್ಯವನ್ನು ಶ್ರೀಮಂತಗೊಳಿಸುವದರ ಮೂಲಕ ಕವಿಗಳು ಈ ದಿಸೆಯಲ್ಲಿ ಪ್ರಮುಖವಾದ ಕೊಡುಗೆಗಳನ್ನು ನೀಡಿದ್ದಾರೆ. ವಿ.ಕೃ.ಗೋಕಾಕ, ಅಡಿಗರು ತಮ್ಮದೆಯಾದ ಒಂದು ನಿಲುವಿನಲ್ಲಿ ಅಪಾರವಾದ ಕೊಡುಗೆಗಳನ್ನು ನೀಡಿದ್ದಾರೆ. ಈ ನಿಟ್ಟಿನಲ್ಲಿ ನವ್ಯ ಸಾಹಿತ್ಯವನ್ನು ಹದವಾಗಿ ವೈವಿಧ್ಯಮಯವಾಗಿ ಬೆಳೆಸುವದರ ಜೊತೆಯಲ್ಲಿ ಅಡಿಗರ ನಂತರ ನವ್ಯ ಮಾರ್ಗಕ್ಕೆ ಗಮನಾರ್ಹ ಕೊಡುಗೆಯನ್ನು ಕೊಟ್ಟವರು ಗಂಗಾಧರ ಚಿತ್ತಾಲರು. "ಅವರ ವಿಷಾದ ಸ್ಥಾಯಿಯಾದ ಧ್ಯಾನಶೀಲ ಕಾವ್ಯ ಬದುಕಿನ ಅದಮ್ಯ ಶಕ್ತಿಯನ್ನು ಭಾವಗೀತಾತ್ಮಕವಾಗಿ ಹೇಳುತ್ತ ಒಟ್ಟಿನಲ್ಲಿ ಬದುಕನ್ನು ಸಹನೀಯವಾಗಿಸುತ್ತದೆ. ಬದುಕಿನ ಬಗ್ಗೆ ಬೆರಗನ್ನು ಉಳಿಸುತ್ತದೆ. ಪ್ರತಿಯೊಂದು ಶಬ್ದಕ್ಕೆ ಜೀವವಿದೆ ಎಂದು ಅವರು ನಂಬಿದವರು. ಸೃಷ್ಟಿಕ್ರಿಯೆಯಲ್ಲಿ ಒಂದು ಶಬ್ದ ಇನ್ನೊಂದನ್ನು ಒಂದು ಪ್ರಾಸ, ಇನ್ನೊಂದು ಕಲ್ಪನೆಯನ್ನು, ಒಂದು ಸಾಲಿನ ತಿರುವು ಹೊಸದೊಂದು ಪಂಕ್ತಿಯನ್ನು ಕರೆತಂದು ಆಶ್ಚರ್ಯಗೊಳಿಸುವದನ್ನು ಅನುಭವಿಸಿದವರು. ರಾಮಚಂದ್ರ ಶರ್ಮ ಮತ್ತು ಚನ್ನಯ್ಯನವರಿಗಿಂತ ಬಿಡುಬಿಚ್ಚಾಗಿ ಲೈಂಗಿಕತೆಯ ಬಗ್ಗೆ ಬರೆದವರು."[೨೩] ಬದುಕನ್ನು ಬೆರಗಗೊಳಿಸುವ ಕಾವ್ಯ ರಚನೆ ಶಬ್ದಗಳ ಮೇಲಿನ ಹಿಡಿತವನ್ನು ಗಮನದಲ್ಲಿಟ್ಟಿಕೊಂಡು ನವ್ಯ ಸಾಹಿತ್ಯಕ್ಕೆ ಹೊಸ ತಿರುವು ಕೊಟ್ಟವರು ಚಿತ್ತಾಲರು.

ನವ್ಯ ಮಾರ್ಗದಲ್ಲಿ ಹೊಸ ಪ್ರಯೋಗ ನಡೆಸಿದ ರಾಮಚಂದ್ರಶರ್ಮ ಕಾವ್ಯವು ಮುಖ್ಯವಾಗಿ ಕಾಮ ಮತ್ತು ಪ್ರಗತಿಶೀಲತೆಗಳನ್ನು ತನ್ನ ಕೇಂದ್ರದಲ್ಲಿಟ್ಟುಕೊಂಡಿದೆ. ವಿದೇಶವಾಸ ಕನ್ನಡ ಭಾಷೆಯ ಮೇಲಿನ ಅವರ ಪ್ರಭುತ್ವವನ್ನು ಮಾಡಿತಷ್ಟೇ, ಆದರೂ ಪರಕೀಯರ ಅನುಭವವನ್ನು ಪಡೆದುಕೊಂಡು ನಮ್ಮ ನವ್ಯ ಸಾಹಿತ್ಯವನ್ನು ಗೋಕಾಕರಷ್ಟೇ ಕಾಳಜಿಯಿಂದ ಬೆಳೆಸಿದ್ದಾರೆ. ಶಬ್ದಗಳೇ ಮುಖ್ಯವಾಗಿ ಭಾವನೆಳನ್ನು ಸೃಷ್ಟಿಸಿಕೊಳ್ಳುತ್ತವೆ. ಹೀಗೆ ಶರ್ಮರ ಕಾವ್ಯಕ್ಕೆ ಹೊಸ ಬೆಕಿಂಡಿಗಳು ದೊರೆಯುತ್ತವೆ. ಹೀಗಾಗಿ ಒಳ್ಳೆಯ ಕವಿತ್ವದ ಶಕ್ತಿ ಅವರಲ್ಲಿ ಕಂಡು ಬರುತ್ತವೆ.

ನವ್ಯ ಕಾವ್ಯಕ್ಕೆ ಎ.ಕೆ.ರಾಮಾನುಜನ್ ರವರ ಕೊಡುಗೆ ವಿಶಿಷ್ಟರೂಪದಲ್ಲಿದೆ. ಆಂಗ್ಲಕವಿ ಎಲಿಯಟ್‌ನ ವಸ್ತುನಿಷ್ಠ ತಂತ್ರಗಳನ್ನು ಉಪಯೋಗಿಸಿಕೊಂಡು ತಾಂತ್ರಿಕವಾಗಿ ಕನ್ನಡದ ಉಳಿದ ಕವಿಗಳಿಗಿಂತ ಭಿನ್ನವಾಗಲೂ ಪ್ರಯತ್ನಿಸಿದ್ದಾರೆ. ಅವರ ಸತ್ವವಿರುವದು ಅನನ್ಯವಾದ ಜೀವನ ಶ್ರದ್ಧೆ ಕಾವ್ಯ ನಿಷ್ಠೆಗಳಲ್ಲಿ. ಹಳೆಯ ತಂತ್ರ ವಿಧಾನಗಳನ್ನು ಬಿಟ್ಟು

ಸುಸಂಸ್ಕೃತ ನೈಜವಾದದ ಕಾವ್ಯಗಳನ್ನು ಬರೆಯುವಲ್ಲಿ ಅವರ ಕಾವ್ಯಕ್ಕೆ ಹೊಸ ಚೈತನ್ಯ ನೀಡಿವೆ. ಈ ದಿಸೆಯಲ್ಲಿ ಕೆ.ಎಸ್.ನರಸಿಂಹಸ್ವಾಮಿ ಅವರ ಕಾಣಿಕೆಯು ಹಿರಿಯದಾಗಿದೆ. ಭಾಷೆ, ಲಯ, ಪ್ರತಿಮೆಗಳನ್ನೆಲ್ಲ ಪ್ರತ್ಯೇಕವಾಗಿ ಕಂಡು ಅನುಭವಿಸಿದಾಗ ಅವುಗಳ ಚೆಲುವಿಗೆ ಮನುಸ್ಸು ಮುಗ್ಧವಾಗುತ್ತದೆ.

ಕಾವ್ಯದ ಕುಶಲಕರ್ಮವನ್ನು ಕೆ.ಎಸ್.ನರಸಿಂಹಸ್ವಾಮಿ ಯಾರಿಂದಲೂ ಕಲಿಯಬೇಕಾಗಿಲ್ಲ. ಅಸಹಜ ಪ್ರಜ್ಞೆ ಅವರಲ್ಲಿ ಮೂಡಿಬರುತ್ತದೆ ಹೊಸಗನ್ನಡ ಸಾಹಿತ್ಯದಲ್ಲಿ ಅಗ್ರಗಣ್ಯ ಕವಿಗಳ ನವ್ಯ ಕಾವ್ಯಗಳಾಗಿ ನವ್ಯಸಾಹಿತ್ಯವನ್ನು ತಮ್ಮದೆಯಾದ ಧಾಟಿಯಲ್ಲಿ ಸಮರ್ಥವಾಗಿ ದುಡಿಸಿಕೊಂಡಿರುವದು ಗಮನಾರ್ಹವಾಗಿದೆ.

ಅದರಂತೆ ಶಿವರುದ್ರಪ್ಪ, ಕಣವಿಯವರ ಹಲವು ಕವಿತೆಗಳು ನವ್ಯದ ಮಾದರಿಯಲ್ಲಿದ್ದು, ಗಮನ ಸೆಳೆಯುತ್ತವೆ. ಅಲ್ಲದೇ ಕಾವ್ಯದ ಶೈಲಿಯನ್ನು ಭಿನ್ನವಾಗಿ ದುಡಿಸಿಕೊಂಡರು.

ಜನಪ್ರಿಯ ಕವಿಗಳಲ್ಲೊಬ್ಬರಾದ ಕೆ.ಎಸ್. ನಿಸಾರ ಅಹಮ್ಮದ ಆಕರ್ಷಕವಾಗಿ ಬರೆಯುವದರ ಮೂಲಕ ನಮ್ಮ ಮನಸ್ಸನ್ನು ಕೇಂದ್ರೀಕರಿಸಿಕೊಂಡು, ಶಿಷ್ಟಭಾಷೆ, ಛಂದಸ್ಸು ಆತ್ಮೀಯ ಸಂಭಾಷಣೆಯ ಭಾಷೆ, ಗ್ರಾಮಗಳಿಂದ ತಂದ ಪದಗಳ ಬಳಕೆ, ಅಂತ್ಯಪ್ರಾಸ, ಎಲ್ಲವನ್ನು ಬಳಸಿಕೊಂಡು ಪಂಕ್ತಿಗಳ ಗತಿಯನ್ನು ಅಸಾಧಾರಣ ನಿಯಂತ್ರಣದಿಂದ ಪರಿಣಾಮಕಾರಿಯಾಗಿ ಸಾಧಿಸಬಲ್ಲರು ಎಂಬುವದಕ್ಕೆ ಪುರಾವೆಗಳನ್ನು ನೀಡಿದರು.

ಕನ್ನಡ ಸಾಹಿತ್ಯಕ್ಕೆ ಸಲ್ಲಿಸಿದ ಒಬ್ಬ ಮುಸ್ಲಿಂ ಬಾಂಧವನ ಬರವಣಿಗೆಯಲ್ಲಿ ರಚನೆಯ ಉದ್ದೇಶ–ಕನ್ನಡಾಂಬೆ–ಭಾರತಾಂಬೆ, ರಕ್ಷಣೆ, ನಾಡುನುಡಿಯ ಅಭಿಮಾನ, ನಿಸರ್ಗಪ್ರಿಯತೆ, ಕೋಮುಸೌಹಾರ್ದತೆ, ಐಕ್ಯತೆ, ವಿವಿಧತೆಯಲ್ಲಿ ಏಕತೆ, ಜಾತಿ ನಿರ್ಮೂಲನ, ಸಂಪ್ರದಾಯ–ಸಂಸ್ಕೃತಿ–ನಾಗರಿಕತೆಗಳ ಧೋರಣೆಗಳು ವ್ಯಕ್ತಿಯ, ಸಮಾಜದ–ದೇಶದ ಬಗೆಗಿನ ಕಾಳಜಿಗಳು ಪರಿಸರ ಪ್ರಜ್ಞೆಗಳಿಗೆ ಸಾಕ್ಷಿಯಾಗಿದೆ. ನವ್ಯಕಾವ್ಯದಲ್ಲಿ ತುಂಬ ನಿಷ್ಠೆಯಿಂದ ಪ್ರಯೋಗ ನಡೆಸಿದವರಲ್ಲಿ ಗಂಗಾಧರ ಚಿತ್ತಾಲ ಕ.ವೆಂ.ರಾಜಗೋಪಾಲ, ಜಯಸುದರ್ಶನ, ಸು.ರಂ.ಎಕ್ಕುಂಡಿ, ಪಿ.ಲಂಕೇಶ, ಅನಂತಮೂರ್ತಿ ಇವರೆಲ್ಲರೂ ಕೂಡ ಮುಖ್ಯರಾಗಿದ್ದಾರೆ ಎಂದು ಹೇಳಬಹುದು.

ಎರಡನೆಯ ತಲೆಮಾರಿನ ನವ್ಯ ಕವಿಗಳಲ್ಲಿ ಎಚ್.ಎಸ್.ಭೀಮನಗೌಡರ ಅವರು ಮುಖ್ಯರು. ಅವರ ರಚನೆಗಳು ನವ್ಯದ ಎಲ್ಲಾ ಗುಣಗಳನ್ನು ತೋರ್ಪಡಿಸುತ್ತವೆ. ಈ ದಿಸೆಯಲ್ಲಿ ಅವರ ಪಾತ್ರ ಪ್ರಮುಖವಾಗಿ ಎದ್ದು ಕಾಣುತ್ತದೆ. ವೈಶಿಷ್ಟ್ಯಪೂರ್ಣವಾದ ಭಾಷೆ, ಲಯ, ಧ್ವನಿ, ಪ್ರತಿಮೆ ಸಂಕೇತಗಳನ್ನು ಬಳಸುವದರ ಮೂಲಕ ಅವರ ಪ್ರಯೋಗಶೀಲತೆ ಮಹತ್ವದ್ದಾಗಿದೆ. ಅದಕ್ಕಾಗಿ ಸಾಮಾಜಿಕ–ರಾಜಕೀಯ ಸ್ಥಿತ್ಯಂತರಗಳನ್ನು ಕಲಾತ್ಮಕವಾಗಿ ಸೆರೆಹಿಡಿಯುವಲ್ಲಿ ಗೌಡರು ಓದುಗರ ಹೃದಯದಲ್ಲಿ ಭದ್ರವಾದ ಸ್ಥಾನಗಳಿಸಿಕೊಂಡಿದ್ದಾರೆ.

[illegible]

೨.೬ ನವ್ಯೋತ್ತರ ಸಂದರ್ಭ

ನವ್ಯ ಕಾವ್ಯದ ಸತ್ವ ಕಡಿಮೆಯಾಗುತ್ತಿದ್ದಂತೆ ಅದಕ್ಕೆ ಪ್ರತಿಧ್ವನಿಯಾಗಿ ದಲಿತ-ಬಂಡಾಯ ಸಾಹಿತ್ಯ ಪಂಥಗಳು ಕನ್ನಡದಲ್ಲಿ ಕಾಣಿಸಿಕೊಂಡವು. ನವ್ಯ ನಂತರದ ಸಾಹಿತ್ಯವನ್ನು ನವ್ಯೋತ್ತರವೆಂತಲೂ ಕರೆಯುತ್ತರೆ. ನವ್ಯಕ್ಕಿಂತ ವಸ್ತುವಿನಲ್ಲಿ ಆಯ್ಕೆಯಲ್ಲಿ, ಆಶಯದಲ್ಲಿ ಅಭಿವ್ಯಕ್ತಿ ವಿಧಾನದಲ್ಲಿ ಛಂಧಸ್ಸಿನಲ್ಲಿ ದಲಿತ-ಬಂಡಾಯ ಸಾಹಿತ್ಯ ಭಿನ್ನವಾದದ್ದು ಎಂಬುದು ಮೇಲ್ನೋಟಕ್ಕೇ ಗೊತ್ತಾಗುತ್ತದೆ. ನವ್ಯ ಕಾವ್ಯ ವ್ಯಕ್ತಿ ವಿಶೇಷ, ಅಂತರ್ಮುಖತೆ ಭಾಷಾ ಕ್ಲಿಷ್ಟತೆಯಿಂದಾಗಿ ಜನ ವಿಮುಖರಾಗಿದ್ದಾರೆ ಎನ್ನುವ ಕೂಗು ಬಂಡಾಯ ಕಾವ್ಯದಲ್ಲಿ ಕೇಳಿಸಿಕೊಂಡಿದ್ದು ನಿಜ.

ಕಾವ್ಯದ ಕಸಬು ಸಾಮಾಜಿಕ ಹೋರಾಟದ ಭಾಗವಾಗಿಯೇ ಇರಬೇಕಾದ ಅನಿವಾರ್ಯತೆ ದಲಿತ ಕಾವ್ಯದ ತಾತ್ವಿಕ ಸಮರ್ಥನೆಯಾಗಿದೆ ಎಂದು ಹೇಳಬಹುದು. ಹಾಗಾದರೆ ದಲಿತರು ಎಂದರೆ ಯಾರಿಗೆ ಕರೆಯಬೇಕು ಎಂಬ ವಾದವೂ ಕೂಡ ನಡೆಯಿತು. ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ, ಧಾರ್ಮಿಕವಾಗಿ ಯಾರು ದಮನಕ್ಕೆ ಒಳಗಾಗಿರುತ್ತಾರೊ ಅವರೆಲ್ಲ ದಲಿತರು. ಅಸ್ಪೃಶ್ಯರ ಜೊತೆ ಅನ್ಯ ಜಾತಿಯ ಬಡವರೂ ಇದರಲ್ಲಿ ಸೇರಿರುತ್ತಾರೆಂದು ಲೋಹಿಯಾವಾದಿಗಳು ಅಭಿಪ್ರಾಯ ಪಟ್ಟರು. ಭಾರತದ ಶ್ರೇಣೀಕೃತ ಸಮಾಜದಲ್ಲಿ ಅತ್ಯಂತ ಕೆಳಗಿನವರೆಂದು ಕರೆಯಲ್ಪಡುವ ಅಸ್ಪೃಶ್ಯರೇ ದಲಿತರು ಎಂಬ ವಾದವನ್ನು ಅಂಬೇಡ್ಕರ್ ವಾದಿಗಳು ಎತ್ತಿ ಹಿಡಿದರು. ಮುಂದೆ ಇದೇ ಪದ ರೂಢಿಗೆ ಬಂದಿತು. ಸಾಹಿತ್ಯದ ಸಂದರ್ಭದಲ್ಲಿ 'ದಲಿತ' ಎಂಬುದರ ಬಗ್ಗೆ ಇದೇ ಬಗೆಯ ಹಲವು ಅಭಿಪ್ರಾಯ ವ್ಯಕ್ತವಾದವು.

ಸ್ವತಃ ದಲಿತರಾದವರು ತಾವು ಅನುಭವಿಸಿದ ನೋವುಗಳನ್ನು ಭಾಷೆಯ ಮೂಲಕ ಪ್ರಕಟಿಸುವಲ್ಲಿ ಜ್ವಲಂತ ಸಮಸ್ಯಗಳಿರುವುದರಿಂದ, ಪ್ರಾಮಾಣಿಕತೆ ಇರುವುದರಿಂದ ಅನುಕಂಪದಿಂದ ಎರವಲು ಪಡೆದ ಅಭಿವ್ಯಕ್ತಿಗಿಂತಲೂ ವಿಶೇಷವಾದುದನ್ನು ಆ ಕಾವ್ಯ ಪಡೆಯಲು ಸಾದ್ಯವಿದೆ. ದಲಿತರೆಂದರೆ ತುಳಿತಕ್ಕೊಳಗಾದ, ಶೋಷಣೆಯನ್ನು ಅನುಭವಿಸುವವರೆಲ್ಲರೂ ದಲಿತರು ಎಂದು ಹಲವಾರು ಜನ ಕವಿಗಳು ಹೇಳಿರುವದು ಸೂಕ್ತವೆನಿಸುತ್ತದೆ. ಜಿ.ಎಸ್. ಶಿವರುದ್ರಪ್ಪನವರ ವಾದವು ಕೂಡ ಹೀಗೆದೆ. ದಲಿತರು ಕೇವಲ ಶೋಷಿತರಷ್ಟೇ ಅಲ್ಲ, ಶೋಷಣೆಯ ಜೊತೆಗೆ ಅಮಾನವೀಯವಾದ ಹಿಂಸೆ-ಕ್ರೌರ್ಯಗಳಿಗೆ ಒಳಗಾದವರು, ಒಂದು ವ್ಯಕ್ತಿತ್ವವೆ ಇಲ್ಲದವರಂತೆ ನಡೆಯಿಸಿಕೊಳ್ಳುವರು. ದಲಿತರ ಬಗ್ಗೆ ಕಾಳಜಿಯುಳ್ಳ ಬರಗೂರ ರಾಮಚಂದ್ರಪ್ಪನವರ ಹೇಳಿಕೆಯು ದಲಿತರ ಬದುಕಿನ ಚಿತ್ರಣವನ್ನು ತುಂಬಾ ಗಮನಾರ್ಹವಾಗಿ ಪ್ರತಿಬಿಂಬಿಸುತ್ತದೆ. ಇವರ ಹೇಳಿಕೆಯಿಂದ ದಲಿತ ಬದುಕಿಗೊಂದು ಹೊಸ ನೆಲೆ ದೊರಕಿದಂತಾಯಿತು. ದಲಿತ ಕವಿಗಳಿಗೆ ದಲಿತರ ಮೇಲೆ ಅಪಾರ ಪ್ರೀತಿ, ಕಾಳಜಿ, ಕಳಕಳಿ ಅಂತಯೇ ಅವರು ದಲಿತರ ನಾಲಿಗೆಯಾಗಿ ಅವರ ಜೀವನ ಕಷ್ಟನಷ್ಟಗಳ ಶೋಷಕರ ಬದುಕಿಗೆ ಅಡಿಪಾಯವಾಗಿ ನಿಂತವರು ದಲಿತರು. ಬಡತನ, ದಾರಿದ್ರ್ಯತನದ

ಬಗ್ಗೆ ಕಾವ್ಯದಲ್ಲಿ ಅಭಿವ್ಯಕ್ತಿಪಡಿಸುವ ಕವಿಗಳ ಸಂಖ್ಯೆ ಹೆಚ್ಚಾಯಿತು. ಹೀಗಾಗಿ ದಲಿತ ಸಾಹಿತ್ಯ ಕೇವಲ ಶೋಷಣೆ, ಅನ್ಯಾಯ, ದಬ್ಬಾಳಿಕೆ ಒಳಗಾದವರ ನೋವಿಗೆ ಸ್ಪಂದಿಸುವದರ ಮೂಲಕ ಒಂದು ಜಾತಿಗೆ ಮಾತ್ರ ಸೀಮಿತವಾಯಿತು.

ದಲಿತರ ಕಲ್ಯಾಣಕ್ಕಾಗಿ ಟೊಂಕಕಟ್ಟಿ ನಿಂತು ಕಾವ್ಯ ಬರೆದ ದಲಿತ ಕವಿಗಳು ಅನೇಕರು ಇದ್ದಾರೆ. ನೂರಾರು ಕಾವ್ಯಗಳನ್ನು ರಚಿಸುವದರ ಮೂಲಕ ಸಾಮಾಜಿಕ ಚಿಂತನೆಗಳನ್ನು ಮಾಡುವುದರ ಜೊತೆಗೆ ದಲಿತ ಬದುಕಿಗೊಂದು ನೆಲೆಗಟ್ಟನ್ನು ಒದಗಿಸಿಕೊಟ್ಟರು. 'ಬಂಡಾಯ' ಸಾಹಿತ್ಯವು ಕೂಡ ಗಮನಾರ್ಹವಾಗಿ ತನ್ನದೆಯಾದ ನೆಲೆಯಲ್ಲಿ ಬೆಳೆಯಿತು. 'ಬಂಡಾಯ' ಕೇವಲ ಇಂದು ನಿನ್ನೆಯದಲ್ಲ ಅದಕ್ಕೊಂದು ದೀರ್ಘವಾದ ಪರಂಪರೆಯಿದೆ ಬಂಡಾಯವೆಂಬುದು ಕೇವಲ ಒಂದು ಭಾಷೆ ಒಂದು ಪ್ರದೇಶ ಒಂದು ಕಾಲಘಟ್ಟಕ್ಕೆ ಸೀಮಿತವಾಗಿರದೆ ಅದು ಭಾಷೆ ದೇಶಗಳನ್ನು ಮೀರಿ ಹರಿಯುವ ನಿರಂತರ ನದಿಯಾಗಿದೆ.

ಸಿದ್ಧಾಂತಗಳ ಪ್ರಭಾವದಿಂದ ಈ ಬಂಡಾಯದ ಮೇಲೆ ದೊಡ್ಡ ಪ್ರಭಾವ ಬೀರಿತು. ಮುಖ್ಯವಾಗಿ ಎಡಪಂಥೀಯ ಸಿದ್ಧಾಂತಗಳು ಬಂಡಾಯ ಸಾಹಿತ್ಯ ಚಳುವಳಿಯ ಮೇಲೆ ಗಾಢವಾದ ಪ್ರಭಾವವನ್ನುಂಟುಮಾಡಿವೆ. ಪ್ರಗತಿಶೀಲ ಚಳುವಳಿಗೆ ಪ್ರೇರಣೆ ನೀಡಿದ ಮಾರ್ಕ್ಸವಾದ ಬಂಡಾಯ ಚಳುವಳಿಗೂ ಪ್ರಮುಖ ನೆಲೆಯಾಗಿದೆ. ಎಲ್ಲ ಜಾತಿಯ ಬಡವರನ್ನು ಒಗ್ಗೂಡಿಸುವ ಮಾರ್ಕ್ಸವಾದ ಅತ್ಯಂತ ಜನಪರವಾದ ಸಿದ್ಧಾಂತವಾಗಿದೆ. ವರ್ಗ ಹೋರಾಟದ ಮೂಲಕ ಸಮಾಜಿಕ, ರಾಜಕೀಯ, ಆರ್ಥಿಕ, ಸಮಾನತೆಯನ್ನು ಬಯಸುವ ಈ ಸಿದ್ಧಾಂತ ಇಲ್ಲಿ ಮುಖ್ಯ ಪ್ರೇರಣೆಯಾಗಿದೆ. ಕೆಳವರ್ಗದ ಜಾತಿಯ ಜನಾಂಗವನ್ನು ಶೋಷಣೆ, ಅನ್ಯಾಯಕ್ಕೆ ಒಳಗಾದವರನ್ನು ಬಡವರನ್ನು ಎಲ್ಲ ವರ್ಗದ ಜನರ ಬಗ್ಗೆ ಬಂಡಾಯ ಸಾಹಿತ್ಯ ಅನುಕಂಪ, ಕಾಳಜಿಯಿಂದ ನೋಡುವ ಕೆಲಸ ಮಾಡುತ್ತದೆ. ಇದು ಒಂದು ಮನೋಧರ್ಮವಾಗಿ ಸಮಾಜದಲ್ಲಿ ಸಮಾನತೆಯ ಭಾವನೆಯನ್ನು ಬೆಳೆಸಲು ಅದು ಮಹತ್ವಾಕಾಂಕ್ಷೆಯನ್ನು ಹೊಂದಲು ಪ್ರಯತ್ನಿಸುತ್ತದೆ.

ಸಾಹಿತ್ಯವೆಂಬುದು ಸಮಾಜದಿಂದ ದೂರವಿಲ್ಲ, ಹೀಗಾಗಿ ಸಮಾಜವೆಂದರೆ ಕೇವಲ ಜನಸಮುದಾಯವಲ್ಲ. ಆ ಜನ ಸಮುದಾಯದ ರಾಜಕೀಯ, ಆರ್ಥಿಕ ಬೆಳವಣಿಗೆಗಳ ಸಾಮಾಜಿಕ ಸ್ಥಿತಿಗಳ ಬದುಕನ್ನು ರೂಪಿಸುವದರಿಂದ ರಾಜಕೀಯ ಸಿದ್ಧಾಂತವಿರದೆ ಭಾವುಕರಾಗಿ ಸಮಾಜ ನಿರ್ಮಾಣ ಮಾಡಲು ಸಾಧ್ಯವಿಲ್ಲವಾದುದರಿಂದ ಸಮಾಜದಲ್ಲಿ ಬದುಕುವ ಮುನುಷ್ಯನಿಗೆ ರಾಜಕೀಯ ಪ್ರಜ್ಞೆ ಅಗತ್ಯವೆಂದು ಮಾರ್ಕ್ಸವಾದಿಗಳೂ ಹೇಳುತ್ತಾರೆ.

ಬಂಡಾಯ ಸಾಹಿತ್ಯ ವಿವಿಧ ರೂಪದಲ್ಲಿ ಬೆಳೆಯುವದರ ಮೂಲಕ ಕ್ಷೇತ್ರದಲ್ಲಿ ಹೆಚ್ಚಿನ ಮಹತ್ವವನ್ನು ನೀಡಿದೆ. ಆಧುನಿಕ ಸಂದರ್ಭದಲ್ಲಿ ಬೆಳೆದುಕೊಂಡು ಬಂದ ನವೋದಯ-ನವ್ಯ ಘಟಕಗಳ ಕಾವ್ಯ ಪರಂಪರೆ ಮತ್ತೊಂದು ರೀತಿಯಾಗಿದೆ. ಈ ಪರಂಪರೆಯಲ್ಲಿ ಬಂಡಾಯ ಚಳುವಳಿಯ ಸಂದರ್ಭದಲ್ಲಿ ಕಾವ್ಯ ವಿಶಿಷ್ಟ ರೀತಿಯಾಗಿ

ಬೆಳೆದು ನಿಂತಿದೆ. ಹಲವಾರು ಕವಿಗಳು ತಮ್ಮದೇ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಪ್ರಯತ್ನಿಸಿರುವದು ಗಮನಾರ್ಹವಾಗಿದೆ.

ಅಂಥ ಪರಂಪರೆಯ ಜಾಡನ್ನು ಹಿಡಿದುಕೊಂಡು ಹಲವಾರು ಕವಿಗಳು ದಲಿತ ಮತ್ತು ಬಂಡಾಯ ಸಾಹಿತ್ಯಕ್ಕೆ ಒಂದು ನಿಶ್ಚಿತ ನೆಲೆ ಸಿಕ್ಕ ಮೇಲೆ, ಅದಕ್ಕೊಂದು ಮೂರ್ತಸ್ವರೂಪ ಬಂದ ಮೇಲೆ ಕನ್ನಡ ಸಾಹಿತ್ಯದಲ್ಲಿ ದಲಿತ-ಬಂಡಾಯ ಕವಿಗಳ ಒಂದು ಬಹುದೊಡ್ಡ ಗುಂಪು ಹುಟ್ಟಿಕೊಂಡಿತು. ನೂರಾರು ದಲಿತ ಮತ್ತು ಬಂಡಾಯ ಕವಿಗಳು ಕಾವ್ಯ ರಚಿಸಿದ್ದು ಕೆಲವು ಹೆಸರುಗಳನ್ನು ಇಲ್ಲಿ ಉಲ್ಲೇಖಿಸಬಹುದು, ದಲಿತ-ಬಂಡಾಯ ಸಾಹಿತ್ಯದಲ್ಲಿ ಕೇಳಿ ಬರುವ ಪ್ರಮುಖ ಹೆಸರುಗಳೆಂದರೆ ದಲಿತ ಕವಿ ಸಿದ್ದಲಿಂಗಯ್ಯ, ಬರಗೂರ ರಾಮಚಂದ್ರಪ್ಪ, ಕಾಳೇಗೌಡ, ನಾಗವಾರ, ಅಲ್ಲಮ ಪ್ರಭು ಬೆಟದೂರ ಅವರು ಸಾಮಾಜಿಕ ಪ್ರಜ್ಞೆಯನ್ನು ರಾಜಕೀಯ ಸ್ಥಿತಿಗತಿಗಳನ್ನು ಗಮನದಲ್ಲಿಟ್ಟುಕೊಂಡು ಕಾವ್ಯ ರಚನೆಗೆ ತಮ್ಮನ್ನು ತೊಡಗಿಸಿಕೊಂಡರು. ಸು.ರಂ.ಯಕ್ಕುಂಡಿ, ಗೋವಿಂದಯ್ಯ ನವ್ಯ ಸಾಹಿತ್ಯದಿಂದ ಬಂದ ಚಂದ್ರಶೇಖರ ಪಾಟೀಲರು ದಲಿತ ಬಂಡಾಯ ಮನೋಭಾವದ ಕವನಗಳನ್ನು ಬರೆದು, ಹೋರಾಟದಲ್ಲಿಯೂ ತಮ್ಮನ್ನು ತೊಡಗಿಸಿಕೊಂಡರು. ಚನ್ನಣ್ಣ ವಾಲಿಕಾರ, ಸರಜೂ ಕಾಟಕರ, ಸತ್ಯಾನಂದ ಪಾತ್ರೋಟ, ಸಬರದ, ಶಂಕರ ಕಟಗಿ, ಗುಂಡಣ್ಣ ಕಲಬುರ್ಗಿ, ಅಶೋಕ ನರೋಡೆ ಮುಂತಾದ ಎರಡನೇ ಮೂರನೇ ತಲೆಮಾರಿನ ಕವಿಗಳು ನವ್ಯೋತ್ತರ ಕಾವ್ಯಘಟ್ಟದಲ್ಲಿ ತಮ್ಮನ್ನು ಪ್ರಾಮಾಣಿಕವಾಗಿ ತೊಡಗಿಸಿಕೊಂಡದ್ದನ್ನು ಈ ಸಂದರ್ಭದಲ್ಲಿ ಮರೆಯುವಂತಿಲ್ಲ. ಕವಯಿತ್ರಿಯರ ಸಾಧನೆಯು ದಲಿತ ಬಂಡಾಯ ಸಾಹಿತ್ಯದಲ್ಲಿ ಪ್ರಮುಖವಾಗಿ ಕಾಣಿಸಿಕೊಂಡಿರುವದು ವೈಶಿಷ್ಟ್ಯ ಪೂರ್ಣವಾಗಿದೆ.

ಇಂಥ ಪರಂಪರೆಯಲ್ಲಿ ಮುಂತಾದ ಕವಿಗಳೂ ನವ್ಯ, ನವ್ಯೋತ್ತರ ಕಾಲ ಘಟ್ಟದಲ್ಲಿ ಪಲ್ಲಟನೆಗೊಂಡು ವಿಶಿಷ್ಟವಾದ ಸಾಹಿತ್ಯ ರಚನೆ ಮಾಡುವದರಲ್ಲಿ ಜನಪ್ರಿಯವೆನಿಸಿದರು. ಎಚ್.ಎಸ್.ಭೀಮನಗೌಡರ ಅವರು ದಲಿತ, ಬಂಡಾಯ ಸಾಹಿತ್ಯದಲ್ಲಿನ ಸಾಮಾಜಿಕ, ರಾಜಕೀಯ, ಸ್ಥಿತ್ಯಂತರಗಳನ್ನು, ಪ್ರಜ್ಞೆಯನ್ನು ಕುರಿತು ಕವನ ರಚಿಸಿದರೂ ಕೂಡ ಅವರು ಅಲ್ಲಿಯ ತತ್ವ-ಸಿದ್ಧಾಂತಗಳಿಗೆ ಅಂಟಿಕೊಳ್ಳುವದಿಲ್ಲ. ತಮ್ಮದೆ ಆದ ಕ್ರಿಯಾತ್ಮಕವಾದ ಹೊಸ ಪ್ರಯೋಗಶೀಲತೆಯನ್ನು ಸಾಧಿಸಿದ್ದಾರೆ. ಹೀಗಾಗಿ ದಲಿತ-ಬಂಡಾಯ ಪಂಥಕ್ಕೆ ಬದ್ಧರಾಗದೆ ಕಾವ್ಯ ರಚನೆಯಲ್ಲಿ ಕಲಾತ್ಮಕತೆಯನ್ನು ಸಾಧಿಸಿರುವದು ಗಮನಾರ್ಹವಾಗಿದೆ.

ಹೀಗೆ ಭೀಮನಗೌಡರು ನವ್ಯ-ನವ್ಯೋತ್ತರ ಮಾರ್ಗವನ್ನು ಕ್ರಮಿಸುವದರ ಮೂಲಕ ವಿಶಿಷ್ಟವಾದ ಛಾಪವನ್ನು ಮೂಡಿಸಿದ್ದಾರೆ. ಇಂಥ ಪರಂಪರೆಯಲ್ಲಿ ಕಾವ್ಯ ರಚಿಸಿದ ಅವರ ದೃಷ್ಟಿ-ಧೋರಣೆಗಳನ್ನು ಮುಂದಿನ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಅಡಿ ಟಿಪ್ಪಣಿಗಳು

೧. ಹೊಸಗನ್ನಡ ಸಾಹಿತ್ಯ ಚರಿತ್ರೆ, ಎಲ್.ಎಸ್.ಶೇಷಗಿರಿರಾವ್ – ಪು–೨ ಅಂಕಿತಾ ಪುಸ್ತಕ ಬೆಂಗಳೂರು. ೨೦೦೨.

೨. ನವ್ಯತೆ ನರಹಳ್ಳಿ ಬಾಲಸುಬ್ರಹ್ಮಣ್ಯ. ಪು–೨೮ ಕರ್ನಾಟಕ ಸಾಹಿತ್ಯ ಅಕಾಡಮಿ. ೧೯೯೯.

೩. ವಿಮರ್ಶೆ ದಾರಿಯಲ್ಲಿ, ಸುಮತೇಂದ್ರ ನಾಡಿಗ. ಪು–೬೧. ಕರ್ನಾಟಕ ಬುಕ್ ಎಜೆನ್ಸಿ ಬೆಂಗಳೂರು. ೧೯೯೪.

೪. ನವ್ಯತೆ ನರಹಳ್ಳಿ ಬಾಲಸುಬ್ರಹ್ಮಣ್ಯ. ಪು–೪೭ ಕರ್ನಾಟಕ ಸಾಹಿತ್ಯ ಅಕಾಡಮಿ. ೧೯೯೯.

೫. ನವ್ಯತೆ ನರಹಳ್ಳಿ ಬಾಲಸುಬ್ರಹ್ಮಣ್ಯ. ಪು–೫೨ ಕರ್ನಾಟಕ ಸಾಹಿತ್ಯ ಅಕಾಡಮಿ. ೧೯೯೯.

೬. ನವ್ಯ ಕಾವ್ಯ ಪ್ರಯೋಗ, ಕೀರ್ತಿನಾಥ ಕುರ್ತಕೋಟಿ, ಪು–೧೩೦ ಮನೋಹರ ಗ್ರಂಥಮಾಲೆ ಧಾರವಾಡ. ೧೯೭೫.

೭. ನವ್ಯ ವಿಮರ್ಶೆ, ಗಿರಡ್ಡಿ ಗೋವಿಂದರಾಜ. ಪು–೪೪ ಅಕ್ಷರ ಪ್ರಕಾಶನ ಸಾಗರ. ೧೯೭೫.

೮. ನವ್ಯ ವಿಮರ್ಶೆ, ಗಿರಡ್ಡಿ ಗೋವಿಂದರಾಜ. ಪು–೫೧ ಅಕ್ಷರ ಪ್ರಕಾಶನ ಸಾಗರ. ೧೯೭೫.

೯.ನವ್ಯ ವಿಮರ್ಶೆ, ಗಿರಡ್ಡಿ ಗೋವಿಂದರಾಜ. ಪು–೫೨ ಅಕ್ಷರ ಪ್ರಕಾಶನ ಸಾಗರ. ೧೯೭೫.

೧೦. ನವ್ಯತೆ ವಿ.ಕೃ.ಗೋಕಾಕ, ಪು–೪೩ ಸುರುಚಿ ಪ್ರಕಾಶನ ಮೈಸೂರು ೧೯೭೫.

೧೧. ನವ್ಯತೆ ನರಹಳ್ಳಿ ಬಾಲಸುಬ್ರಹ್ಮಣ್ಯ. ಪು–೩೦ ಕರ್ನಾಟಕ ಸಾಹಿತ್ಯ ಅಕಾಡಮಿ. ೧೯೯೯.

೧೨. ನವ್ಯ ಕಾವ್ಯ ಪ್ರಯೋಗ, ಕೀರ್ತಿನಾಥ ಕುರ್ತಕೋಟಿ, ಪು–೬೬ ಮನೋಹರ ಗ್ರಂಥಮಾಲೆ ಧಾರವಾಡ. ೧೯೭೫.

೧೩. ವಿಮರ್ಶೆಯ ದಾರಿಯಲ್ಲಿ, ಸುಮತೇಂದ್ರ ನಾಡಿಗ. ಪು–೭೦ ಕರ್ನಾಟಕ ಬುಕ್ ಎಜೆನ್ಸಿ ಬೆಂಗಳೂರು. ೧೯೯೪.

ಅಧ್ಯಾಯ ೨

ಎಚ್.ಎಸ್. ಭೀಮನಗೌಡರ ಕಾವ್ಯದ ಧೋರಣೆ ಮತ್ತು ಆಶಯ

ಅಧ್ಯಾಯ ೩

ಎಚ್.ಎಸ್. ಭೀಮನಗೌಡರ ಕಾವ್ಯದ ಧೋರಣೆ ಮತ್ತು ಆಶಯ

ಒಬ್ಬ ಕವಿಯನ್ನು ಕುರಿತು ಅಧ್ಯಯಿನಿಸುವ ಸಂದರ್ಭದಲ್ಲಿ ಅವರ ಕಾವ್ಯದ ಹಿನ್ನಲೆ-ಮುನ್ನಲೆಯನ್ನು ಸ್ಪಷ್ಟವಾಗಿ ಅರ್ಥೈಸಿಕೊಳ್ಳಬೇಕಾಗುತ್ತದೆ. ಕನ್ನಡ ನವ್ಯ ಕಾವ್ಯದ ಮಹತ್ವದ ಕವಿ ಎಚ್.ಎಸ್.ಭೀಮನಗೌಡರ ಅವರ ಕಾವ್ಯವನ್ನು ಇಲ್ಲಿ ಗಂಭೀರ ಚರ್ಚೆಗೆ ಒಳಗುಮಾಡುವ ನಿಟ್ಟಿನಲ್ಲಿ ಗಮನಿಸುವಾಗ ಅವರದೇ ಆದ ಕಾವ್ಯ ಕುತೂಹಲಗಳು ಎದ್ದು ಕಾಣುತ್ತವೆ. ಈ ಕಾರಣಕ್ಕಾಗಿ ಭೀಮನಗೌಡರ ಕಾವ್ಯ ಕೇಂದ್ರದಲ್ಲಿ ಪ್ರಖರಗೊಳ್ಳುವ ಧೊರಣೆ ಮತ್ತು ಆಶೆಗಳನ್ನು ದಾಖಲಿಸಿಕೊಳ್ಳಬೇಕಾಗುತ್ತದೆ. ಈ ಅಂಶಗಳನ್ನು ಅರ್ಥೈಸಿಕೊಂಡಾಗ ಕವಿಯ ತಿಳಿವಿನ ಪರೀಧಿಯನ್ನು ಬಿಚ್ಚಿಕೊಂಡತೆಯೇ.

- ಭಾರತ ದೇಶ ಬ್ರಿಟೀಷರ ಹಿಡಿತದಿಂದ ರಾಜಕೀಯವಾಗಿ ಬಿಡುಗಡೆ ಹೊಂದಿದರೂ ಅವರ ವಸಾಹುತುಶಾಹಿ ಹಿಡಿತದಿಂದ ಪಾರಾಗಿಲ್ಲ. ನಮ್ಮ ದೇಶ ಸ್ವಾತಂತ್ರ್ಯ ಪಡೆದು ಇಷ್ಟು ವರ್ಷ ಕಳೆದರೂ ಪಾಶ್ಚಿಮಾತ್ಯ ದೇಶಗಳ (ಈಗ ಅಮೇರಿಕಾದ) ಧೋರಣೆಗಳಿಂದಾಗಿ ಪರೋಕ್ಷವಾಗಿಯಾದರೂ ಜೌದ್ಯೋಗಿಕವಾಗಿ ವಿಜ್ಞಾನ-ತಂತ್ರಜ್ಞಾನಗಳಿಂದಾಗಿ ವ್ಯಾಪಾರ ಕೃಷಿ ಕ್ಷೇತ್ರದ ಮೇಲೂ ಈ ಪ್ರಭಾವದಿಂದ ಪಾರಾಗಿಲ್ಲ. ಒಂದಿಲ್ಲೊಂದು ರೀತಿಯಲ್ಲಿ ಅಂಥ ದೇಶಗಳನ್ನು ಅವಲಂಬಿಸುವ ಪರಿಸ್ಥಿತಿ ನಮ್ಮದಾಗಿದೆ.
- ಬಡರಾಷ್ಟ್ರವಾದ ನಮ್ಮ ದೇಶ ಅಭಿವೃದ್ಧಿಶೀಲತೆಯನ್ನು ಸಾಧಿಸುವ ದಿಕ್ಕಿನಲ್ಲಿ ಅಂಥ ದೇಶಗಳಿಗೆ ಮೊರೆ ಹೋಗಬೇಕಾದ ಅನಿವಾರ್ಯತೆ ಉಂಟಾಗಿದೆ.
- ನಮ್ಮ ದೇಶ ಮೂಲಭೂತವಾಗಿ ಕೃಷಿಪ್ರಧಾನ ನೈಸರ್ಗಿಕತೆ ಪಡೆದ ದೇಶ. ಇಂಥ ದೇಶದಲ್ಲಿ ಬದುಕುವ ಸಾಮಾನ್ಯ ಪ್ರಜೆಯ ಮೂಲಭೂತ ಗುಣಗಳು -ಮುಗ್ದತೆ, ಸಹಜತೆ, ನಂಬಿಕೆ, ಧಾರ್ಮಿಕತೆ, ಸರಳತೆ.
- ಪಾಶ್ಚಾತ್ಯ ದೇಶಗಳ ಪ್ರಭಾವದಿಂದಾಗಿ ನಮ್ಮ ದೇಶದ ಪ್ರಜೆಯ ಮನಸ್ಸು ಚೆಲ್ಲಾ-ಪಿಲ್ಲಿಯಾಗಿದೆ. ಈ ಪ್ರಭಾವ ಪರೋಕ್ಷವಾಗಿ ನಮ್ಮ ರಾಜಕೀಯ ನಾಯಕರ ಉದ್ಯಮಿಗಳ, ಅಧಿಕಾರಿಗಳ ಹಾಗೂ ಶಿಕ್ಷಕರ ಮುಖಾಂತರ ಸಾಮಾನ್ಯ ವ್ಯಕ್ತಿಯ ಮೇಲೆ ಆಗಿ ಸಾಮಾನ್ಯ ವ್ಯಕ್ತಿ ಅಸಹಾಯಕನಾಗಿ, ದಿಕ್ಕು ತೋಚದವನಾಗಿದ್ದಾನೆ.
- ಈ ಮುಖ್ಯ ಅಂಶಗಳು ಎಚ್.ಎಸ್. ಭಿಮನಗೌಡರ ಅನೇಕ ಕವನಗಳಲ್ಲಿ ನಿದರ್ಶನವಾಗಿ ಕಾಣಬಹುದು. ಇದೇ ಭೀಮನಗೌಡರ ಮುಖ್ಯ ವಸ್ತು ಆಶಯ. ಈ ಪ್ರಭಾವವನ್ನು ಗುರುತಿಸಿ ಅದರಿಂದ ಪಾರಾಗಬೇಕೆಂಬುದಕ್ಕೆ ಅವರು ವ್ಯಂಗ್ಯ, ವಿಡಂಬನೆ, ವಕ್ರೋಕ್ತಿ ಬಳಸುತ್ತಾರೆ ಇದು ಭೀಮನಗೌಡರ ಕಾವ್ಯದ ಮುಖ್ಯ ಧೋರಣೆಯಾಗುತ್ತದೆ.

ಉದಾ:- ನೆಚ್ಚಿನ ಪ್ರಾಣಿ ಎತ್ತು. ಬೊಂಡಾಭೂಪತಿ, ಹುಣಸೆ, ಕಿಟ್ಟನ ಗಾಂಧೀ ಚಿತ್ರ, ಕಂಪನಿಯ ಮಾಲಿಕನಿಗೆ, ನೆಲ ಹಿಡಿಯುವ ಮೊದಲು, ಮೃಗರಾಜ, 'ಗಲ್ಲಿಗೇರಿದವರು', ಕೆಂಚ-ಕುರಿಮರಿ, ಹೊಟೇಲಲ್ಲಿ ಹುಲಿ.

- ಭೀಮನಗೌಡರ ಅವರ ಕಾವ್ಯದ (ನಾಲ್ಕು ಸಂಕಲನ ಸೇರಿ) ಮುಖ್ಯ ಲಕ್ಷಣ ಸಂಘರ್ಷ, ದ್ವಂದ್ವ, ನಾಗರಿಕತೆ-ನೈಸರ್ಗಿಕತೆ, ಜಾಣತನ, ಮುಗ್ಧತೆ, ನಗರ-ಹಳ್ಳಿ, ಇಂಗ್ಲೀಷ-ಕನ್ನಡ, ಶಿಷ್ಟ-ಜಾನಪದ, ಪೌರ್ವಾತ್ಯ-ಪಾಶ್ಚಿಮಾತ್ಯ, ಆಕಾಶ-ಭೂಮಿ ಇತ್ಯಾದಿ.
- ನಾಗರಿಕ ಸಂಸ್ಕೃತಿಯ, ಆಧುನಿಕ ಸಂಸ್ಕೃತಿಯ ಯಾಂತ್ರಿಕ-ತಾಂತ್ರಿಕ ಸಂಸ್ಕೃತಿಯ ಮಧ್ಯ ಸಿಲುಕಿದ ಸಾಮಾನ್ಯ ವ್ಯಕ್ತಿ ಹೇಗೆ ಶೋಷಿತನಾಗುತ್ತಾನೆ. ಮೂಲಭೂತ ಮಾನವೀಯ ಗುಣ ಕಳೆದುಕೊಳ್ಳುತ್ತಾನೆ ನಿಸ್ಸಹಾಯಕನಾಗುತ್ತಾನೆ ಎನ್ನುವದು ಭೀಮನಗೌಡರ ಪ್ರಮುಖ ವಸ್ತು.
- ಅದನ್ನು ಅಭಿವ್ಯಕ್ತಿಸಲು ಸಹಜ ಭಾಷೆಯನ್ನು ಬೆಳೆಸಿ, ವ್ಯಂಗ್ಯ, ವಿಡಂಬನೆ ವಕ್ರೋಕ್ತಿ ಬಳಸಿ ಮನುಷ್ಯನ ಬದುಕಿನ ವೈಪರೀತ್ಯಗಳನ್ನು ಹಿಡಿದಿಡುವ ಪ್ರಯತ್ನವೇ ಅವರ ಕವನಗಳು.
- ಕವನಗಳನ್ನು ಲಘುದಾಟಿಯಲ್ಲಿ ಬರೆದರೂ ಆಂತರಿಕವಾಗಿ ಗಂಭೀರ ಸಮಸ್ಯೆಗಳ ಸ್ಪಂದನವನ್ನು ಒಳಗೊಂಡಿದ್ದಾರೆ.
- ನವ್ಯ ಕಾವ್ಯದ ಪ್ರಭಾವದ ಜಾಡಿನಲ್ಲಿ ಬರೆಯಲು ಪ್ರಾರಂಭಿಸಿದರೂ ತನ್ನದೇ ಆದ ವೈಶಿಷ್ಟ್ಯವನ್ನು ಕಂಡುಕೊಳ್ಳಲು ಕವನಗಳ ಮೂಲಕ ಪ್ರಯತ್ನಿಸಿದ್ದಾರೆ.

ಮೊದಮೊದಲು ಅಂತರ್ಮುಖಿ ವೈಯಕ್ತಿಕ ಕವನ ಬರೆದಿದ್ದಾರೆ ಎನ್ನಿಸಿದರೂ, ಮೊದಲನೆಯ ಸಂಕಲನದಿಂದ ಹಿಡಿದು ಕೊನೆಯ ಸಂಕಲನದ ವರೆಗೆ ಬಹಿರ್ಮುಖಿ ಪ್ರಜ್ಞೆ ಕೆಲಸ ಮಾಡಿದೆ ಎಂಬುದು ಅವರ ಅನೇಕ ಕವನಗಳಿಂದ ಸ್ಪಷ್ಟವಾಗುತ್ತದೆ.

ಬದುಕಿನ ಸಾಮಾನ್ಯ ವ್ಯಕ್ತಿಯ ಮಾನಸಿಕ ವಿವಿಧ ಪದರಗಳನ್ನು ಅರ್ಥಮಾಡಿಕೊಂಡು ಅಭಿವ್ಯಕ್ತಿ ಮಾಡುವುದು ಭೀಮನಗೌಡರ ಕಾವ್ಯದ ಮುಖ್ಯ ಆಶಯ.

ಈ ವರೆಗೆ ಭೀಮನಗೌಡರ ಅವರ ಒಟ್ಟು ನಾಲ್ಕು ಕವನ ಸಂಕಲನಗಳನ್ನು ರಚಿಸಿದ್ದಾರೆ. ಅವುಗಳನ್ನು ಈ ಕೆಳಗಿನಂತೆ ಪರಿಚಯಿಸಲಾಗಿದೆ.

೧. ತುಡಗಿ-(೧೯೭೩)

೨. ಹುಡುಗಾಟದ ಹಾಡು-(೧೯೭೭)

೩. ನೆಲ ಹಿಡಿಯುವ ಮೊದಲು-(೧೯೮೪)

೪. ಹೋಮಾ ಎಂಬ ಪಕ್ಷಿ-(೧೯೯೩)

ಈ ನಾಲ್ಕು ಕವನ ಸಂಕಲನಗಳು ಪ್ರಕಟಿತ ಸಾಹಿತ್ಯ ಕೃತಿಗಳಾಗಿವೆ. ಅವುಗಳನ್ನು ಈ ಕೆಳಗಿನಂತೆ ಪರಿಶೀಲನೆಗೆ ಒಳಗು ಮಾಡಲಾಗಿದೆ.

೩.೧ ವ್ಯಕ್ತಿನೆಲೆ ಮತ್ತು ವಾಸ್ತವ ಪ್ರಜ್ಞೆ

ಹುಸಿ ಕನಸು, ಆದರ್ಶ, ಪ್ರೇಮ-ಪ್ರೀತಿಯ ಕುರಿತು ಅತಿಯಾದ ಉತ್ಸಾಹ, ದೈವಿಕತೆಯ ತಳುಕು, ಮಿತಿಮೀರಿದ ಭಾವಲೋಲುಪತೆಯ ತೋರಣದಿಂದ ಬೇಸತ್ತ ಸ್ಥಿತಿಗೆ 'ನವ್ಯಪ್ರಯೋಗ' ಪ್ರತಿಕ್ರಿಯೆ ನೀಡಿತೆನ್ನಬೇಕು. ಹೀಗಾಗಿ ಅತಿರಂಜಿತವೆನ್ನಬಹುದಾದ ಕನಸು-ಆದರ್ಶಗಳು ಬದಲಿಗೆ ವಾಸ್ತವ ಜಗತ್ತನ್ನು ಅನಾವರಣಗೊಳಿಸುವ ಅದಮ್ಯ ಒತ್ತಾಸೆ ಕೊನರೊಡೆಯಿತೆನ್ನಬೇಕು. ಈ ನವ್ಯಕ್ಕೆ ಮೊಟ್ಟಮೊದಲು ಸ್ಪಂದಿಸಿದವರು ಇಂಗ್ಲಿಷ್ ಪ್ರಾಧ್ಯಾಪಕರೆನ್ನುವದು ನಿರ್ವಿವಾದ. ಆಗಲೇ ಮಾರ್ಡನಿಸ್ಟ ವಿಚಾರಗಳು ಪಾಶ್ಚಾತ್ಯರಲ್ಲಿ ಮೂಡಿ ಅನೇಕ ವರ್ಷಗಳೇ ಗತಿಸಿದರೂ ಕನ್ನಡಕ್ಕೆ ಪ್ರವೇಶ ಮಾಡಿದ್ದು ವಿಳಂಬವಾಗಿ ಅನ್ನುವದು ಹಿಂದಿನ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಕವಿ ಗೋಪಾಲಕೃಷ್ಣ ಅಡಿಗ-ಗೋಕಾಕರ ಈ ಪರಂಪರೆಯ ಪ್ರವರ್ತಕರ ಮೂಲಕ ಘೋಷಣೆಗೊಂಡ ನವ್ಯ ಆಶಯಗಳು ತರುವಾಯದ ಪೀಳಿಗೆಗಳಲ್ಲಿ ಪರಿಣಾಮ ಮತ್ತು ತನ್ನದೇ ಅಭಿವ್ಯಕ್ತಿಯ ಮಿತಿಗಳನ್ನು ಸೃಷ್ಟಿಸಿತೆನ್ನುವದು ಸರಿ. ಈ ಪರಂಪರೆಯ ಪ್ರಭಾವ-ಪ್ರೇರಣೆಗೆ ಒಳಗಾದ ಎಚ್.ಎಸ್.ಭೀಮನಗೌಡರು ಇಂಗ್ಲಿಷ್ ಸಾಹಿತ್ಯವನ್ನೇ ಓದಿಕೊಂಡವರು. ಹೀಗಾಗಿ ಅವರ ಕಾವ್ಯದಲ್ಲಿ ನವ್ಯದ ವಿವಿಧ ಆಕೃತಿ, ಪರಿಕಲ್ಪನೆಗಳನ್ನು ತರಲು ತಮ್ಮ ದೇಸಿ ಭಾಷಿಕ ಶಕ್ತಿಯನ್ನು ದುಡಿಸಿಕೊಂಡದ್ದೂ ಎದ್ದು ಕಾಣುವಂಥದ್ದು. ನವ್ಯ ಪರಂಪರೆಯ ಕವಿಗಳು ಯಾವಾಗ ವಾಸ್ತವ ಪ್ರಜ್ಞೆಯನ್ನು ತಮ್ಮ ಕಾವ್ಯದಲ್ಲಿ ಮೂಡಿಸಲು ಪ್ರಯತ್ನಿಸಿದರೋ ಆಗ ಅವರ ತೀವ್ರವಾದ ವೈಯಕ್ತಿಕ ಒಳತೋಟಿ ಬಿಚ್ಚಿಕೊಳ್ಳಲು ಶುರುವಾಯಿತು. ಈ ಅಂತರ್ಯಮುಖಿಯೊಂದಿಗೆ ಅವರ ಕಾವ್ಯದಲ್ಲಿ ವಾಸ್ತವದ ಎಚ್ಚರ, ಅರಿವು ಕಣ್ಣು ಪಡೆಯಿತೆನ್ನಬೇಕು. ಎಚ್.ಎಸ್.ಭೀಮನಗೌಡರ ಅವರ ಕಾವ್ಯದಲ್ಲಿ ನಾವು ಮುಖ್ಯವಾಗಿ ಗಮನಿಸುವದು-ಕನಸು, ಆದರ್ಶಗಳನ್ನು ವಾಸ್ತವಿಕರಿಸಿ ನೋಡುವದು ಹುಸಿ ವೈಭವಗಳಿಗೆ ಪ್ರತಿಕ್ರಿಯೆ ನೀಡುವ ಉದ್ದೇಶ ಪ್ರಬಲ ಪರಿಣಾಮ ನೀಡುವವದರಲ್ಲಿ. ಇಂಥ ನೆಲೆಗಟ್ಟಿನ ಅನೇಕ ರಚನೆಗಳನ್ನು ಕವಿ ಭೀಮನಗೌಡರಲ್ಲಿ ಕಾಣಬಹುದು.

"ನಡೆದಿತ್ತು ಮಂದಿಯ ಮಾತುಕತೆ
ಮನೆ, ಹೊಲ, ರೊಕ್ಕ, ರಶಿಯಾ
ವಿಮಾ ರಾಜಕಾರಣ, ಜಾತ್ರೆ

[illegible]

ನಾನು ಬಾಯ್ಮುಚ್ಚಿ ಕುಳಿತಾಗ" (ನಡೆದಿತ್ತು ಮಾತುಕತೆ)[೧]

ಸಮಾಜದಲ್ಲಿರುವ ಜನರ ಮನಸ್ಥಿತಿಯನ್ನು ಈ ಕವನ ಪ್ರತಿಬಿಂಬಿಸುತ್ತದೆ. ಜೀವನದಲ್ಲಿ ಏನಾದರೂ ಸಾಧಿಸಬೇಕೆಂದು ಆಸೆಯು ಎಲ್ಲರಿಗೂ ಇರುತ್ತದೆ. ಆದರೆ ಜನರು ನಮ್ಮನ್ನು ಸುಖವಾಗಿ ಬಾಳಲು, ಬದಕಲು ಬಿಡುವದಿಲ್ಲ. ಹೀಗಾಗಿ ಒಂದು ರೀತಿಯಾದ ಸಂಕುಚಿತವಾದ ಮನೋಭಾವನೆಯಿಂದ ನೋಡುವದು, ಅಸೂಯೆ ಪಡುವದು, ಹಿಯಾಳಿಕೆಯ ಮಾತುಗಳಿಂದ ನೆಮ್ಮದಿಯನ್ನು ಕದಡುವ ಇಂದಿನ ಸಮಾಜದಲ್ಲಿನ ಮುಗ್ಧತೆಯ ಬದುಕಿನ ಪ್ರಸಂಗದ ಚಿತ್ರಣವು ಇಲ್ಲಿ ವ್ಯಕ್ತವಾಗಿದೆ.

"ನಾ ನಡೆಯುವಾಗಿಲ್ಲ ಬದುಕು
ತುಂಬುಗಲ್ಲದ ಹರೆಯ ಹುಡುಗಿ
ಕಣ್ತುಂಬಿ ಮೈತುಂಬಿ ಕೈಮಾಡಿ ಕರೆದರೆ
ನಾ ಹುಚ್ಚ
ಮುಟ್ಟಬೇಕೆಂದು ಹಾವಿನ ಹೆಡಮುರಿಗೆ
ಕಟ್ಟಬೇಕೆಂದು
ಕೈ ಚಾಚಿದರೆ ಇಡೀ ಮುಗಿಲೇ ನಡಿಗಿದಂತೆ
ಗುಡುಗಿಗೆ ನಾನು ಪುಡಿಪುಡಿಯಾದಂತೆ
ಸೊಟ್ಟ ಮುಖ ಮಾಡಿ ಒಬ್ಬನೇ ಬಿದ್ದಂತೆ." (ಬದುಕು ಮತ್ತು ನಾನು)[೨]

ಬದುಕಿನ ವಾಸ್ತವಿಕತೆಯ ಹಿನ್ನಲೆಯಲ್ಲಿ ಕವನವು ಮಾರ್ಮಿಕವಾಗಿ ಮೂಡಿ ಬಂದಿದೆ. ಏಕೆಂದರೆ ನಮ್ಮ ವಯಸ್ಸಿನಲ್ಲಿ ನಾವು ಏನಾದರೂ ಸಾಧಿಸಬೇಕು ಎಂಬ ಛಲಬೇಕು. ಮನುಷ್ಯನಿಗೆ ವಯಸ್ಸಾದ ನಂತರ ಯಾವ ಅವಕಾಶವು ನಮ್ಮನ್ನು ಹುಡುಕಿಕೊಂಡು ಬರುವದಿಲ್ಲ ಬಂದರೂ ಪ್ರಯೋಜನವಿಲ್ಲ. ಆಗ ಕೆಲಸ ಮಾಡಲು ನಾನು ಸಮರ್ಥನಾಗಿರುವದಿಲ್ಲ, ಆಗ ದೌರ್ಬಲ್ಯದ ಸ್ಥಿತಿಯಲ್ಲಿ ಇರುತ್ತೇವೆ. ಕವಿ ಅದರ ತಿರುಳನ್ನು ಕೊನೆಯ ಸಾಲಿನಲ್ಲಿ ಬರುವ ಅಸಹಾಯಕತೆಯ ಬದುಕಿನ ಚಿತ್ರಣ ಸ್ಪಷ್ಟವಾಗಿದೆ.

"ಇನ್ನು ಬೆಳಗಾಗಿ
ರವಿಯ ಕಾಣುವ ಹೊತ್ತು
ತಟ್ಟನೆ ಮಣ್ಣಿನಲ್ಲಿ ಮಾಯವಾದಿ
ಆ ಲೋಕದಲಿ ಮಾತ್ರ ಅಮರವಾದಿ." (ಬಸವಣ್ಣ)[೩]

ಬಸವಣ್ಣನವರು ಹುಟ್ಟಿದರು ಜಗತ್ತಿನಲ್ಲಿರುವ ಅಂಧಕಾರವೆಲ್ಲ ಮಾಯವಾಯಿತು. ಎಂಬ ನಂಬಿಕೆ ನಮಗಿತ್ತು ಒಂದು ಕನಸು ಕಟ್ಟಿಕೊಂಡಿದ್ದು ಆಗಿತ್ತು. ಅವರನ್ನು ಪೂಜ್ಯ ಭಾವನೆಯಿಂದ ನೋಡುವ ಕಾಯಕವು ಅರ್ಥಪೂರ್ಣವಾಗಿತ್ತು. ಇಂದು ಅವರ ಜಯಂತಿ ಆಚರಣೆ ಮಾಡುತ್ತೇವೆ. ಆದರೆ ಪ್ರಸ್ತುತ ಬದುಕಿನಲ್ಲಿ ಎಷ್ಟೊಂದು

ಅಂಥ ಆದರ್ಶಪ್ರಿಯತೆಯನ್ನು ಅಳವಡಿಸಿಕೊಂಡಿದ್ದೇವೆ. ಎಂದು ಕವಿ ಭೀಮನಗೌಡರು ನಮ್ಮ ಮನಸ್ಸನ್ನು ಎಚ್ಚರಿಸುವಲ್ಲಿ ಸತ್ಯದ ಬೆಳಕನ್ನು ಮೂಡಿಸಿದ್ದಾರೆ.

"ಲಂಗದ ಬದಲು ಸೀರೆಯುಟ್ಟಳು
ಬಳೆ ಕುಂಕುಮ ತಾಳೆ ಪೈಜಣ
ಹೂಮಾಲೆ
ಮೇಲಾಗಿ ಮುಖದಲ್ಲಿ ಲಜ್ಜೆ
ಮೂಗುತಿ ಬೆಂಡೋಲೆ,
ಚಪ್ಪರ ಹೋಗಿ ಉಪ್ಪರಿಗೆಯಾಗಿ
ಮಂದಿಯಂದರೆ ನಾಚಿ ಒಳಗೆ
ಸರಿಯುವಳು,
ಒಳಗೆ ಮರೆಯುವಳೂ
ತೆರೆಯುವಳು
ಇವಳು ನಮ್ಮವಳು
ನಮ್ಮವಳೇ ಲಮಾಣಿ ಹುಡಗಿ." (ಲಮಾಣಿ ಹುಡುಗಿ)[೪]

ಆಧುನಿಕ ಮನುಷ್ಯನ ಬದುಕು ತುಂಬ ಪರಿವರ್ತನೆಯಾಗಿದೆ. ಹಳೆಯ ಸಂಪ್ರದಾಯವೆಲ್ಲ ಸವಕಲಾಗಿದೆ ಕಾಲದ ಪರಿಸ್ಥಿತಿಗೆ ತಕ್ಕಂತೆ ನಾವು ಹೊಸ ರೀತಿಯ ಸಂಪ್ರದಾಯವನ್ನು ಅಳವಡಿಸಿಕೊಳ್ಳುತ್ತೇವೆ. ನಮ್ಮಲ್ಲಿ ಸಂಸ್ಕೃತಿಯ ಏರು-ಪೇರು ಆಗುವದನ್ನು ದಿನ ನಿತ್ಯ ಕಣ್ಣಾರೆ ನೋಡುತ್ತಿದ್ದೇವೆ. ಅದಕ್ಕೆ ಕವಿ ಹೆಣ್ಣಿನ ಚಾರಿತ್ರ್ಯದ ಮೂಲಕವೆ ಸೊಗಸಾದ ವಿವರಣೆಯನ್ನು ವಾಸ್ತವದ ವಿಚಾರವನ್ನು ಇಲ್ಲಿ ಪ್ರತಿಬಿಂಬಿಸಿದ್ದಾರೆ.

"ಓಡುತ್ತೇನೆ, ಹಾಡುತ್ತೇನೆ
ನಿನ್ನ ಸಹಜತೆಯನ್ನು
ಸೌಜನ್ಯವನ್ನು ಸೊಬಗನ್ನು
ನಿನ್ನ ಪ್ರಾಮಾಣಿಕತೆಯನ್ನು ಸುಸಂಸ್ಕೃತಿಯನ್ನು,
ಓಡುತ್ತೇನೆ ಮನಸೋತು
ನಿನ್ನ ಒಡನಾಟಕ್ಕೆ ಹುಡಗಾಟಕ್ಕೆ
ಗುಡಗಾಟಕ್ಕೆ
ನಿನ್ನ ರಾಗಕ್ಕೆ ತ್ಯಾಗಕ್ಕೆ
ಹೆಚ್ಚಾಗಿ ನಿನ್ನ ಮಾತೃತ್ವಕ್ಕೆ." (ಓಡುತ್ತೇನೆ)[೫]

ಈ ಋತು ಚಕ್ರವು ತಿರುಗುತ್ತಿದ್ದಂತೆ ಹೊಸ ಹೊಸ ಬದಲಾವಣೆಯು ಅನಿವಾರ್ಯ. ಮನುಷ್ಯನಿಗೆ ಕೂಡಾ ಇದು ಅಗತ್ಯವಾಗಿದೆ. ಏಕೆಂದರೆ ಕಾಲವನ್ನು ಅನುಸರಿಸಿ ಮಾನವನು ಬದುಕಬೇಕಾಗುತ್ತದೆ. ಅದನ್ನು ಬಿಟ್ಟು ಬದುಕಲು ಸಾದ್ಯವಿಲ್ಲ, ಈ ಕಾಲವು ನಿತ್ಯ ನೂತನವಾಗಿರುತ್ತದೆ. ಹೊಸ ಹೊಸ ಚೈತನ್ಯವನ್ನು ನಮಗೆ ನೀಡುತ್ತದೆ, ಅದು ನಮ್ಮ ಮಾನವ ಕುಲದ ಮೇಲೆಟ್ಟಿರುವ ಅಪಾರ ಕಾಳಜಿಯ ಬಗ್ಗೆ ಕವಿ ಈ ಕವಿತೆಯಲ್ಲಿ ಚೆನ್ನಾಗಿ ಒಡಮೂಡಿಸುತ್ತಾರೆ.

"ಪ್ರಗತಿ ಪಥದಲ್ಲಿದ್ದ ಬಸ್ಸಿನ
ಸಂಕುಚಿತ ಸೀಟಿನಲ್ಲಿ ಬಂಧಿತ
ನಸಕುನೇಸರ ಕಿರಣಗಳ
ಖಾಕಿ ಖಾದಿ ಖಾವಿ ಇತ್ಯಾದಿ
ನೀಷೇಧ ಕಣ್ಣುಗಳ ಕಾವಲಿನಲ್ಲಿ
ದಿಗ್ಗನೆ ಎಚ್ಚರವಾಯಿತು.
ಆದರೆ ಅಪೂರ್ವ ಮೋಕ್ಷ ದೊರೆಯಿತು
ಅಪರೂಪದ ಅಸ್ತಿತ್ವಕ್ಕೆ ಖುಸಿಯಾಯಿತು." (ಅಸ್ತಿತ್ವ)[೬]

ಈ ಜೀವನ ಎನ್ನುವದು ಒಂದು ಪ್ರಯಾಣ ಇದರಲ್ಲಿ ಹಲವಾರು ತೆರೆಗಳು ಬಂದು ಅಪ್ಪಳಿಸುತ್ತವೆ ಮತ್ತೆ ಹೋಗುತ್ತವೆ. ಹಾಗೆ ಸುಖ-ದುಃಖಗಳ ಸಾಗರದಲ್ಲಿ ಏರು-ಇಳಿತಗಳು ಬರುತ್ತವೆ ದೂರಾಗುತ್ತವೆ. ಅದಕ್ಕೆ ಹೀಗೆ ನನ್ನ ಜೀವನ ಕಷ್ಟದಲ್ಲಿ ಮುಳಿಗಿದೆ ಎಂದು ನಾವು ಅಳುತ್ತ ಕುಳಿತು ಬಿಟ್ಟರೆ ಮುಂದೆ ಬರುವ ನಕ್ಷತ್ರ ನೋಡುವ ಭಾಗ್ಯ ಕಳೆದುಕೊಳ್ಳುತ್ತವೆ. ಅದಕ್ಕೆ ಪ್ರಯತ್ನದಿಂದ ಮಾಡಿದ ಕೆಲಸ ಕೊನೆಗೆ ಮೋಕ್ಷಕ್ಕೆ ದಾರಿಯಾಗುವ ಆದರ್ಶ ಬದುಕಿನ ಫಲಶ್ರುತಿ ಇದಾಗಿದೆ: ಮುಂದಿನ ಕವನದಲ್ಲಿ ಇದಕ್ಕೊಂದು ನಿದರ್ಶನವೆಂಬಂತೆ ಭೀಮನಗೌಡರ ಅವರ ಕವಿತೆಯಲ್ಲಿ ವ್ಯಕ್ತವಾದ ಬಗೆ ಈ ರೀತಿ ಇದೆ.

"ಆಗ ದಿಕ್ಕು ತಪ್ಪಿತು. ಸುತ್ತೂ ನೋಡುವುದಾಯಿತು
ಅಲ್ಲಲ್ಲಿ ಕೆಲವು ಛತ್ರಧಾರಿಗಳು
ಒಳ್ಳೇ ಹೆಮ್ಮೆಯಲ್ಲಿ ತೇಲುತ್ತಿದ್ದರು,
ಸ್ಕೂಟರ ಸವಾರರಂತೂ ಹೊಟ್ಟೆಕಿಚ್ಚಿನ ಹೊಗೆಯೆಬ್ಬಿಸಿ
ಮಿಂಚಿನಂತೆ ಮಾಯವಾದರು
ದನದ ಹುಡುಗರ ತಲೆಯ ಮೇಲಿನ
ತುಂಡು ಚೀಲದಲ್ಲಿಯೆ ಬಂಡೆಗಲ್ಲಿನಂತೆ ಮಿಂಡವಾಗಿದ್ದರು!"
(ಮಳೆಯ ಪ್ರಸಂಗ)[೬]

ಕವಿಯು ಮಳೆಯ ಅರ್ಭಟಕ್ಕೆ ದಾರಿಯ ಮಧ್ಯ ಸಿಕ್ಕು ಅಸಹಾಯಕ ಸ್ಥಿತಿಯಲ್ಲಿ ಪರದಾಡುತ್ತಿದ್ದಾರೆ. ಆಶ್ರಯದ ಹುಡುಕಾಟ, ತಡಕಾಟ, ಆತುರತೆಯಿಂದ ಮನಸಿನಲ್ಲಿ ಸಂಕೋಚವು ಕಾಡುತ್ತಿರುವ ಸಂದರ್ಭವು ಬಹಳಷ್ಟು ಮುಖ್ಯವಾಗಿದೆ. ಇನ್ನೊಬ್ಬರನ್ನು ನೋಡಿ ಅಸೂಯೆ ಪಡುತ್ತಿರುವ ಕವಿಯು ತನ್ನ ರಕಣೆಗಾಗಿ ಬದುಕಿನಲ್ಲಿ ಬರುವ ಕಷ್ಟಗಳಿಗೆ ಆತ್ಮ ಸ್ಥೈರ್ಯ ಕಳೆದುಕೊಳ್ಳದೆ ಗಂಭೀರವಾಗಿ ಬದುಕನ್ನು ಎದುರಿಸಬೇಕು, ಇನ್ನೊಬ್ಬರನ್ನು ಅವಲಂಬಿಸುವದು ಸೂಕ್ತವಲ್ಲ ಎಂದು ಕವಿ ತನ್ನ ನೈಜ ಚಿತ್ರಣವನ್ನು ಇಲ್ಲಿ ವ್ಯಕ್ತಪಡಿಸಿದ್ದಾರೆ.

> "ಹುಲಿ ಬಂದಾಗ ಹುಸಿತುಬಾಕಿಯ ಬಿಟ್ಟು
> ಬೆನ್ನು ಚಪ್ಪರಿಸಿಕೊಳ್ಳುವ
> ಯವಕನಂತಲ್ಲ.
> ದುಡ್ಡಿಗೆ ಸೇರು ಮಾನಮಾರಿದರೆ
> ನಾಚಿಕೆಯೋ ಎಂದು
> ಕಲ್ಗೆರಿಗಿ ಕಾಲುಂಗುರ ಬಿಚ್ಚಿ
> ಕಾಲ್ಜೆಗ್ಗಿ ಕೆಡವಿ
> ಖುಷಿ ಪಡುವ ರಣ ಹೇಡಿಯಂತಲ್ಲ.". (ಗಾಂಧೀಜಿ)[೮]

ಈ ಕವನದಲ್ಲಿ ನೈಜತೆಯಿದೆ, ನಿಜವಾದ ನವ್ಯ ಕವಿಗಳ ದಿಟ್ಟತನದ ಹೋರಾಟವಿದೆ. ಸತ್ಯವನ್ನು ಮರೆಮಾಚುವ ಕೆಲಸವಲ್ಲ. ಧೈರ್ಯದಿಂದ ಆದರ್ಶದ ಸಾಮ್ರಾಜ್ಯ ನಿರ್ಮಾಣ ಮಾಡುವ ಗುರಿಯಿದೆ ವ್ಯಾಮೋಹದ ಹಂಬಲವಿಲ್ಲ. ಇನ್ನೊಬ್ಬರ ಬಗ್ಗೆ ಭೀತಿ ಇಲ್ಲ. ಗಾಂಧೀಜಿಯ ತತ್ವದ ಚಿಂತನೆಯಿದೆ. ಮತ್ತೊಬ್ಬರ ಬಗ್ಗೆ ದ್ವೇಷವಿಲ್ಲ ಅಭಿಮಾನವಿದೆ. ಎಂಬ ಮಾತು ಗಾಂಭೀರ್ಯತೆಯಿಂದ ಕೂಡಿದೆ ಎಂದು ಭೀಮನಗೌಡರ ಅವರು ಇಲ್ಲಿ ದಿಟ್ಟವಾದ ನಿಲುವು ತಾಳಿದ್ದಾರೆ ಇನ್ನೊಬ್ಬರ ಬಗ್ಗೆ ಒಳ್ಳೆಯ ಅಭಿಪ್ರಾಯದ ಮನೋಭಾವನೆ ವ್ಯಕ್ತವಾಗಿದೆ.

> "ಸಂಬಂಧದ ಬಲೆ ಬೀಸುವಿಯಾ?
> ಬಿಸು ಬಿದ್ದು ಒದ್ದಾಡುವವನಲ್ಲ.
> ನೀತಿಯ ಗೋಡೆ ಕಟ್ಟುವಿಯಾ?
> ಕಟ್ಟು ಸಿಕ್ಕು ಬಿಕ್ಕುವವನಲ್ಲ
> ಕಾನೂನು ಕುಣಿಯಲ್ಲಿ ಹುಗಿಯುವಿಯಾ?
> ಹುಗಿ ಹಲುಬುವವನಲ್ಲ!" (ಜಗದೇಕವೀರನ ಕಥೆ)[೯]

ಸಮಾಜದಲ್ಲಿ ನಾವು ಹೇಗೆ ನಡೆದರೂ ಒಂದು ಅಪವಾದ ಸರ್ವಕಾಲಿಕ ಸತ್ಯವಾಗಿದೆ. ಮನುಷ್ಯನಿಗೆ ನೀತಿ, ಧರ್ಮ ಒಂದು ಚೌಕಟ್ಟು ಇರಬೇಕಾಗುತ್ತದೆ. ಆದರೆ ಅತೀಯಾದ ಬಂಧನ ಬೇಡ, ಕಪಿ ಹೇಳುವಂತೆ ಸಂಸ್ಕಾರ ಇರಬೇಕು. ಅದರಿಂದಲೇ ನಾಗರಿಕತೆ ಬೆಳೆಯುತ್ತದೆ. ಸಂಸ್ಕೃತಿಯು ಮೂಡುತ್ತದೆ ಅದಕ್ಕೆ ಇಲ್ಲಿ ವ್ಯಕ್ತಿ ಆತ್ಮಸ್ಥೈರ್ಯ

ಕಳೆದುಕೊಂಡಿಲ್ಲ. ಜಾಣ್ಮೆ ಎದ್ದು ಕಾಣುತ್ತದೆ. ಶ್ರುದ್ದೆಯಿಂದ ಬಾಳುವ ನೈತಿಕತೆಯಿದೆ, ಕವಿ ಮತ್ತೆ ಒಂದು ಶಿಸ್ತುಬದ್ಧತೆಯನ್ನು ನಿರ್ಮಿಸುವಲ್ಲಿ ತಾರತಮ್ಯ ಬೇಡ ಎನ್ನುತ್ತಾರೆ.

"ನಿಮಗೂ ಗೊತ್ತು ಗೋಪಿಯರೆ,
ನಿಮ್ಮದು ಹುಳುಹತ್ತಿ ಹೊಗೆಯಾಡಿದ
ಇಕ್ಕಟ್ಟು ಮನೆ
ನಿಮ್ಮ ಹೂವು ಬೆಳೆಯಲಾರದು ಅಲ್ಲಿ,
ಹೊರ ಬನ್ನಿ ಅದೋ ಬೃಂದಾವನ
ಮುಗುಳುನಗೆಯಲ್ಲಿ ಸ್ವಾಗತಿಸುವವನು ನಿಮ್ಮ ಮೋಹನ."

(ನರ್ತಸಿರಿ)[೧೦]

ಪ್ರತಿದಿನವೂ ಈ ಹೋರಾಟ ಇದ್ದೇ ಇದೆ. ಜಾತಿ, ಜನಾಂಗವೆಂತಲೂ ನಾವು ಬೇದ-ಭಾವನೆಯು ನಡೆಯುತ್ತಿರುವದು ವಿಷಾದದ ಸಂಗತಿ. ಕವಿಯು ವಾಸ್ತವಿಕತೆಯ ಚೌಟ್ಟಿನಲ್ಲಿಟ್ಟು ನೋಡುವ ಒಂದು ವ್ಯವಸ್ಥೆ ನಮ್ಮ ಪ್ರಸ್ತುತ ಜೀವನದಲ್ಲಿ ಅದು ಹೇಗೆ ಪ್ರಚಲಿತದಲ್ಲಿದೆ. ಆದ್ದರಿಂದ ಸಮಾಜ-ಮನುಷ್ಯ-ಸಂಸ್ಕೃತಿ, ಇವುಗಳ ಸಂಬಂಧ ನಶಿಸುವದಕ್ಕೆ ಶೋಷಣೆಯ ಬದುಕಿನ ಚಿತ್ರಣ ವೈಚಾರಿಕತೆಯ ಹಿನ್ನಲೆಯಲ್ಲಿ ಮೂಡಿ ಬಂದಿರುವದು ಗಮನಾರ್ಹವಾಗಿದೆ.

"ಛಿದ್ರ ಛಿದ್ರವಾಗಿ ಬಣ್ಣದ ಬಲೂನು
ಕೋಪದಲ್ಲಿ ಆಪತ್ ಘೋಷಿಸಿ
ಅವರನ್ನೆಲ್ಲ ಬಂಧಿಸುತ್ತೇನೆ
ಹೊಳೆದ ಗೀತೆ ಹರಿಯುತ್ತದೆ
ಬಂಧನದ ನೆರಳು ಶುಭ್ರಮುಗಿಲ
ಬಲೂನ ಶವವಾಗಿ ಬೀಳುತ್ತದೆ
ಗೀತ ಅರ್ಥಕ್ಕೆ ನಿಲ್ಲುತ್ತದೆ."

(ಧುರೀಣನ ಗೀತೆ)[೧೧]

ಇಂದಿನ ಸಮಾಜದಲ್ಲಿ ನಡೆಯುವ ದಾರುಣ ಘಟನೆಯನ್ನು ಕವಿ ಸೆರೆ ಒಡಿದಿರುವದು ಔಚಿತ್ಯಪೂರ್ಣವಾಗಿದೆ. ಇಂದಿನ ಆದರ್ಶ ವ್ಯಕ್ತಿತ್ವದಲ್ಲಿ ಮನುಷ್ಯನ-ಸಮಾಜದ ನಿಕಟ ಸಂಬಂಧ ಹೇಗೆ ದ್ವೇಷ, ಅಸೂಯೆ, ಇವುಗಳು ತಾಂಡವಾಡುವ ಈ ಯುಗದಲ್ಲಿ ನಾನೊಬ್ಬನೆ ಹೋರಾಡಿದರೆ ಸ್ವಾವಲಂಬಿಯಾಗಲು ಸಾಧ್ಯವಿಲ್ಲ. ಅದಕ್ಕೊಂದು ಸಂಘಟನೆ ಬೇಕಾಗುತ್ತದೆ. ಅದಕ್ಕೆ ಅಸಹಾಯಕನಾಗಿದ್ದಾನೆ. ಈ ಜಗತ್ತಿಗೆ ನನ್ನ ಕೊಡುಗೆ ನೀಡಲಿಲ್ಲ ಎಂಬ ಭ್ರಮೆಯಿದೆ ಅದಕ್ಕೆ ನನ್ನ ಜೀವನ ಗಾಳಿಗೆ ಸಿಕ್ಕು ಹಾಕಿಕೊಂಡ ಬಲೂನಂತೆಯಾಗಿದೆ. ಎಂದು ಕವಿ ಆದರ್ಶದ ನಿಲುವು ತಾಳುತ್ತಾನೆ. ಮುಂದೆ ಮೌನ

[illegible]

[illegible]

[illegible]

[illegible]

“ಎನ್ನುತ್ತಲೆ ಒಟ್ಟು ನೀನು ನಮ್ಮ ಹಾಗೆ
ಇಲ್ಲಿಯೇ ಕಣ್ಣು ತೆರೆದದ್ದೇನೋ ಬರೋಬರಿ
ಮನೆ ಬಿಟ್ಟದ್ದು ಮಠ ಬಿಟ್ಟಿದ್ದು ಅಥವಾ
ಮಣ್ಣು ಬಿಟ್ಟದ್ದೇ ಒಂದು ಆಶ್ಚರ್ಯ
ಹೆಣ್ಣು ಬಿಟ್ಟಿದಂತೂ ಇನ್ನೂ ಆಶ್ಚರ್ಯ
ಕೇವಲ ವಿದ್ಯೆಯ ವರ್ಪತವಾಗಿ ಬೆಳೆದು
ಡೋಲು ಬಾರಿಸಿದರೆ
ಅದೇ ಏನು ಮುಕ್ತಿಗೆ ದಾರಿ?” (ಸರ್ವಜ್ಞ ಮೂರ್ತಿ)[೧೪]

ಸರ್ವರೊಳಗೆ ಒಂದೊಂದು ನುಡಿ ಕಲಿತು ಪರ್ವತದಂತೆ ಬೆಳೆದಿರುವ ಸರ್ವಜ್ಞ ಕವಿಯು ಇಂದು ಅವನ ತ್ಯಾಗ ಜೀವನದ ಸರ್ವಸ್ವವನ್ನು ತೋರೆದು ಸಮಾಜ, ಸಂಸ್ಕೃತಿ, ಪರಂಪರೆ ಜನರಲ್ಲಿ ಒಂದು ರೀತಿಯಾದ ಮಾನವೀಯ ಮೌಲ್ಯಗಳನ್ನು ಮೂಡಿಸಿರುವದು ಮಹತ್ವದ್ದಾಗಿದೆ. ಸಮಾಜದ ಉದ್ಧಾರಕ್ಕೆ ಶ್ರಮಿಸಿದ ಕವಿ ಸರ್ವಜ್ಞ, ತಮ್ಮ ತ್ರಿಪದಿಗಳ ಮೂಲಕ ಜನರಿಗೆ ಹೊಸ ಹೊಸ ಸಂದೇಶಗಳನ್ನು ನೀಡಿ, ಮನುಕುಲವನು ಎಚ್ಚರಿಸುವ ವಾಸ್ತವಿಕತೆಯ ಚಿತ್ರಣ ಈ ಕವಿತೆಯಲ್ಲಿ ಧ್ವನಿ ಪೂರ್ಣವಾಗಿದೆ.

ತಮ್ಮ ಇನ್ನೊಂದು ಕವನದಲ್ಲಿ ಕವಿ ಭೀಮನಗೌಡರು ವ್ಯಕ್ತಿಯ ಮಾನವೀಯ ಅನುಕಂಪದ ಬಗ್ಗೆ ಹೀಗೆ ವ್ಯಕ್ತಪಡಿಸುತ್ತಾರೆ.

“ಅದೇ ಆಫೀಸು ಫೈಲು ಕಾನೂನು
ನಿಯಮಗಳ ಮಧ್ಯ ಸಿಗಿ ಬಿದ್ದಂತೆ ಅಜ್ಜ ತೀರಿದ
ಅರ್ಜಂಟ ತಾರು ಗೊಂಬೆಯಂತೆ
ಸಹೋದ್ಯೋಗಿಗಳು ಕೇಳಿದರು ಕುಳಿತರು
ನಾನು ಕೊಟು ಕಳಚಿ ಊರಿಗೆ ಹೊರಟಂತೆ
ನನಗೇನು ಚಿಂತೆ?”

(ಕೋಟು ಕಳಚಿ ಊರಿಗೆ ಹೊರಟಂತೆ)[೧೫]

ವ್ಯಕ್ತಿಯು ತನ್ನ ಕೆಲಸದಲ್ಲಿ ತಲ್ಲೀನನಾಗಿದ್ದಾನೆ, ಗಾಢವಾದ ಚಿಂತೆಯಲ್ಲಿ ಮುಳಿಗಿಕೊಳ್ಳುತ್ತಾನೆ. ಈಗ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕಾದ ಪ್ರಸಂಗ ಒದಗಿದೆ. ಆದರೂ ಅನಿವಾರ್ಯತೆ ಇದೆ, ಸತ್ಯದ ಅಂಶವು ಇಲ್ಲಿದೆ, ನಿರ್ಲಿಪ್ತತೆ ಇದೆ, ಪ್ರಾಮಾಣಿಕತೆಯಿದೆ, ಮಾನವೀಯತೆಯಿದೆ, ಅಂತಃಕರಣದಿಂದ ಮಿಡಿಯುವ ಭಾವನೆಯು ಎದ್ದು ಕಾಣುತ್ತದೆ.

“ಹೀಗಂತ ಅಥಾತ್ ಹಾಗಂತ ಒಮ್ಮೆ
ಬುದ್ಧನ ಹಾಗೆ ಜಾರಿ ಬಿಡುತ್ತಿದ್ದ ಅಡವಿಯಲ್ಲಿ
ಗಿಡ ಹೂ ಹಣ್ಣುಗಳು
ಹಕ್ಕಿ ಪಕ್ಷಿ ಪ್ರಾಣಿಗಳು
ತಮಷ್ಟಕ್ಕೆ ತಾವು ತನ್ನಷ್ಟಕ್ಕೆ ತಾನು
ಹೀಗೆ ಹಾಯಾಗಿ ಯಾಕೆ ಇರಬಾರದಪ್ಪ
ಎನ್ನುತ್ತಿದ್ದ ಹಾಗೆ ಹವೆ ಬದಲಾಯಿತು
ನೀರು ಬದಲಾಯಿತು ನೋಟ ಬದಲಾಯಿತು!”

(ಬಿಡದೀ ಮಾಯೆ)[೧೬]

ಪ್ರೀತಿಯ ಭವ ಬಂದನದಲ್ಲಿ ಸಿಕ್ಕು ಒದ್ದಾಡಿದ ಬುದ್ಧ ತ್ಯಾಗ ಜೀವಿಯಾಗಿ ಲೋಕವನ್ನು ತೊರೆದು ಹೋಗುವ ಪ್ರಸಂಗ ಆಶ್ಚರ್ಯಕರವಾಗಿದೆ. ಲೌಕಿಕ ಬದುಕಿಗೆ ವಿದಾಯ ಹೇಳಿ ಮನುಕುಲದ ಉದ್ದಾರಕ್ಕೆ ತನ್ನ ಜೀವನವನ್ನು ಮುಡಪಾಗಿಟ್ಟು ಬುದ್ಧ ಈ ಜಗತ್ತನ್ನು ತ್ಯಜಿಸಿದನು. ಹಾಗೆ ನಮ್ಮಲ್ಲಿ ಒಮ್ಮೊಮ್ಮೆ ಅಂಥ ಭಾವನೆಗಳು ಮೂಡುತ್ತವೆ, ಈ ಪ್ರಪಂಚದ ಗೂಡವೆ ಬೇಡ ಎಂದು ಮನಸ್ಸು ಅಲೌಕಿಕತೆಗೆ ನಮ್ಮನ್ನು ಕೊಂಡೊಯ್ಯುತ್ತದೆ ಆದರೆ ಅದು ಗಟ್ಟಿಯಾದ ನಿರ್ಧಾರವಾಗಬೇಕು. ಅದಕ್ಕೆ ಕವಿ ಹೇಳುತ್ತಾನೆ ಮನಸ್ಸಿನ ಚಾಂಚಲ್ಯತೆ ಬೇಡ ಅದು ಗಟ್ಟಿಯಾಗಿರಲಿ ಎಂದು ಹೇಳುವದು ಆದರ್ಶ ಬದುಕಿಗೆ ಒಂದು ನೆಲೆಗಟ್ಟಿದೆ.

ಹೆಣ್ಣು ಇಂದಿನ ಸಮಾಜದಲ್ಲಿ ಹೇಗೆ ಗುರುತಿಸಿಕೊಂಡಿದ್ದಾಳೆ ಎಂಬುವದಕ್ಕೆ ಈ ಕವನವೇ ಸಾಕ್ಷಿಯಾಗಿದೆ.

“ಹೆಣ್ಣೆ, ನಾ ಬದುಕಬೇಕು
ನಾ ನಡೆಯಬೇಕು
ಇದಕೆಲ್ಲ ನಿನ್ನ ಗಾರುಡಿಯ ಬೇಕು
ಏಳಬೇಕು ಕುಣಿಯಬೇಕು
ನಿನ್ನ ಪುಂಗಿಗೆ ಹೆಡೆಯೆತ್ತಬೇಕು
ಆಡಬೇಕು,
ಆಡುತ್ತಾ ಆಡುತ್ತಾ ಎಲ್ಲರ ತಣಿಸಬೇಕು” (ಹೆಣ್ಣು)[೧೭]

ಇಂದಿನ ಪ್ರಸ್ತುತ ಸಮಾಜದಲ್ಲಿ ಹೆಣ್ಣು ದೇಶದ ಕಣ್ಣು ತೆರೆಸುವ ಹೆಣ್ಣಾಗಿದ್ದಾಳೆ. ಏಕೆಂದರೆ ಪ್ರತಿಯೊಬ್ಬ ಪುರುಷನ ಯಶಸ್ಸಿನ ಹಿಂದೆ ಮಹಿಳೆಯ ಪಾತ್ರ ಬಹುಮುಖ್ಯವಾಗಿರುತ್ತದೆ ಆದರೆ ಅವಳು ಇಂದು ಪುರುಷನಷ್ಟು ಸ್ವಾತಂತ್ರ್ಯಕ್ಕೆ ಅರ್ಹಳಲ್ಲ ಎಂದು ನಾವು ಅವಳನ್ನು ಕೀಳರಿಮೆಯಿಂದ ಕಾಣುತ್ತಿದ್ದೇವೆ. ಅದಕ್ಕೆ ಕವಿ ಇಲ್ಲಿ ಹೆಣ್ಣನ್ನು ಪ್ರಧಾನವಾಗಿಟ್ಟುಕೊಂಡು ಅವಳ ವ್ಯಕ್ತಿತ್ವದ ವಿಚಾರಕ್ಕೆ ಹೆಚ್ಚು ಮಹತ್ವ ನೀಡಿರುವದು

ಗಮನಾರ್ಹವಾಗಿದೆ.

> "ಚೊಕ್ಕಟವಾಗಿ ಪಾರದರ್ಶಕ ಚೌಕಟ್ಟಿನಲ್ಲಿ
> ಕಣ್ಣಿಗೆ ಬಿದ್ದುದೇ ತಡ
> ಹೇಗೆ ಸೈರಿಸಿಕೊಳ್ಳವದು?
> ಆರ್ಡರ್ ಮಾಡಿಯೇ ಬಿಟ್ಟೆ
> ಮುಂದೆ ತಂದಿಟ್ಟ ಮಾಣಿ
> ಅಪರಾಧಿಯನ್ನು ನೇಣುಗಂಬಕ್ಕೆ ಒಪ್ಪಿಸುವಂತೆ
> ಪಾಪ ಮುಗ್ಧವಾಗಿ ಬಿದ್ದಿತ್ತು ಬೋಂಡಾ
> ಮುದ್ದಾಗಿತ್ತು ಚೆಂಡಿನಂತೆ
> ಅದೇ ಉದಯಸಿದ ಚಂದ್ರನಂತೆ
> ಸಿಂಗಾರಗೊಂಡ ರಂಡೆಯಂತೆ
> ಕಾಕದೃಷ್ಟಿಯ ಒಮ್ಮೆಲೆ ಬಿಚ್ಚಿ ಬಿಟ್ಟೆ
> ಈ ವರೆಗೆ ಕಂಭಕ್ಕೆ ಬಿಗಿದ ದನದಂತೆ!"
>
> (ಬೊಂಡಾ ಭೂಪತಿ)[೧೮]

ಸಾಮ್ರಾಜ್ಯಶಾಹಿ ವ್ಯವಸ್ಥೆಯಲ್ಲಿ ಇಂದು ಮನುಷ್ಯನ ಬದಕು ಎಷ್ಟೊಂದು ಶೋಚನೀಯವಾಗಿದೆ. ಎಂಬುವದಕ್ಕೆ ಕವಿಯು 'ಬೋಂಡಾಭೂಪತಿ' ಎಂದು ಕವನಕ್ಕೆ ಹೆಸರಿಟ್ಟಿರುವದು ವಿಶಿಷ್ಟವಾಗಿದೆ. ಸಾಮಾಜಿಕ, ರಾಜಕೀಯ, ಶೈಕ್ಷಣಿಕ ರಂಗಗಳಲ್ಲಿ ಕೆಳವರ್ಗದವರನ್ನು ದುಡಿಸಿಕೊಳ್ಳುವ ಅಧಿಕಾರಶಾಹಿಗಳ ಪ್ರಭುತ್ವ ಇಲ್ಲಿ 'ಬೊಂಡಾ' ದ ಮೂಲಕ ಚಿತ್ರಿಸುತ್ತಾರೆ ಅಂದರೆ ಶೋಷಣೆ, ಅನ್ಯಾಯಕ್ಕೆ ಜನ ಒಳಗಾಗಿರುವ ಮತ್ತು ಶ್ರೀಮಂತರು ಅವರನ್ನು ದುಡಿಸಿಕೊಳ್ಳುವ ರೀತಿ ಈ ಕವನದಲ್ಲಿ ವಾಸ್ತವ ಸತ್ಯವನ್ನು ಪ್ರತಿಬಿಂಬಿಸುತ್ತದೆ.

ಕವಿ ಭೀಮನಗೌಡರು ತಮ್ಮ ಕವನ ಸಂಕಲನದಲ್ಲಿ ಕಿಟ್ಟನ ಗಾಂಧೀ ಚಿತ್ರ, ಚೆಂದ, ಕುಟುಂಬಯೋಜನೆ, ಹೋರಾಟ, ಇಂಥ ಕವನಗಳಲ್ಲಿ ವ್ಯಕ್ತಿನೆಲೆಯೆದುರಿನ ಘಟನೆಗಳು, ಆದರ್ಶ, ವಾಸ್ತವಿಕಯೂ ವ್ಯಕ್ತವಾಗಿರುವದನ್ನು ಕಾಣುತ್ತೇವೆ. ಅವುಗಳು ವಾಸ್ತವಿಕ ಚೌಕಟ್ಟಿನೊಳಗೆ ಸಮ್ಮಿಳಿತಗೊಂಡಿವೆ. ಹಿತಮಿತ ಭಾಷೆಯಲ್ಲಿ ಅವರ ಪರಿಭಾವನೆಗಳು ಸತ್ವ ಪೂರ್ಣವಾಗಿವೆ. ಅದಕ್ಕಾಗಿ ಕಿಟ್ಟನ ಗಾಂಧೀ ಚಿತ್ರದಲ್ಲಿ ಆದರ್ಶದ ತುಡಿತವಿದೆ. ಬದುಕಿನ ಹಿಂದೆ ನಡೆಯುವ ಜಾಗೃತನವಿದೆ.

ಕುಟುಂಬ ಯೋಜನೆಯಲ್ಲಿ ಸಂಸಾರ ಬದುಕಿನ ಮೌಲ್ಯವು ಸಮಕಾಲೀನ ವ್ಯವಸ್ಥೆಗೆ ಹೊಂದಿಕೊಳ್ಳುವ ರೀತಿಯಿದೆ. ಹೀಗೆ ಹಲವಾರು ಕವನಗಳು ತಮ್ಮದೆಆದ ವಿಶಿಷ್ಟ ರೀತಿಯುಲ್ಲಿ ಒಂದು ಬಗೆಯು ಜೀವನಾನುಭವವನ್ನು ನೀಡುತ್ತವೆ. ಎಚ್.ಎಸ್.ಭೀಮನಗೌಡರ ಅವರ ಕವಿತೆಗಳಲ್ಲಿ ಆದರ್ಶವೆಂಬ ಮೌಲ್ಯ

ನವೋದಯದವರಿಗಿಂತ ಹೇಗೆ ವಾಸ್ತವದ ನೆಲದೊಳಗೆ ನಾಟಿಕೊಳ್ಳುತ್ತದೆ ಎಂಬುದಕ್ಕೆ ನಿದರ್ಶನಗಳನ್ನು ಕಾಣಿಸುತ್ತದೆ.

೩.೨ ಸಾಮಾಜಿಕ ಹಾಗೂ ರಾಜಕೀಯ ಪ್ರಜ್ಞೆ

ಸುತ್ತಲಿನ ಸಮಾಜಕ್ಕೆ ಕವಿ ಯಾವ ಬಗೆಯಾಗಿ ಸ್ಪಂದಿಸಿದ್ದಾನೆ ಎಂಬುವದಕ್ಕೆ ಅವನ ಕ್ರಿಯಾಶೀಲತೆಯ ಒಂದು ಅಂಶವಾದ ಸಾಮಾಜಿಕ ಪ್ರಜ್ಞೆಯನ್ನು ಅವನ ಬರೆಹ ಗಮನಿಸಿದರೆ ಅರ್ಥವಾಗುತ್ತದೆ. ಕವಿ ನೋಡುವ ದೃಷ್ಟಿಕೋನ ಕಾವ್ಯದ ಆಸಕ್ತಿ, ಯಾವಾಗ ಸಮಾಜದ ಅಭಿವೃದ್ದಿಯ ಕಡೆಗಿರುತ್ತದೆಯೋ ಅಲ್ಲಿ ಸಾಮಾಜಿಕ ಪ್ರಜ್ಞೆಯ ಪರಿಕಲ್ಪನೆ ವ್ಯಕ್ತವಾಗಿರುತ್ತದೆ.

ರಾಜಕೀಯ ಪ್ರಜ್ಞೆಯು ಒಂದು ರೀತಿಯಲ್ಲಿ ಸಮಾಜದ ಸ್ಥಿತಿಗತಿಗಳನ್ನು ಪ್ರತಿಬಿಂಬಿಸುತ್ತದೆ. ಈ ರಾಜಕೀಯ ವ್ಯವಸ್ಥೆ ಒಂದೇ ಮಟ್ಟದಲ್ಲಿರುವದಿಲ್ಲ. ಕಾಲ ಕಾಲಕ್ಕೆ ಬದಲಾವಣೆಯಾಗುವ ಸಾಧ್ಯತೆಗಳು ಹೆಚ್ಚಾಗಿರುತ್ತವೆ.

ಕನ್ನಡದ ಯಾವುದೇ ಕವಿ ಸಾಮಾಜಿಕ, ರಾಜಕೀಯ ಪ್ರಜ್ಞೆಗೆ ಹೊರತಾಗಿ ನಿಂತಿದ್ದನ್ನು ನಾವು ಎಲ್ಲಿಯೂ ಕಾಣುವದಿಲ್ಲ. ತಮ್ಮದೇ ಆದ ಸಂವೇದನಾಶೀಲ ಪ್ರಜ್ಞೆ, ಅಭಿವ್ಯಕ್ತಿಯ ಶೈಲಿ, ಪರಿಣಾಮಕಾರಿ ಭಾಷಾ ವಿಧಾನದಿಂದ ಸಾಮಾಜಿಕ, ರಾಜಕೀಯ ವಿಚಾರಗಳನ್ನು ಕಾವ್ಯಾತ್ಮಕವಾಗಿ ಪ್ರತಿಕ್ರಿಯಿಸಿದ್ದನ್ನು ನೋಡುತ್ತೇವೆ. ಇಲ್ಲಿ ಭೀಮನಗೌಡರ ಅವರು ಇಂಥ ಪ್ರಜ್ಞಾವಾಹಿನಿಯನ್ನು ನವ್ಯದಲ್ಲಿದ್ದೂ ನವ್ಯದವರಿಗಿಂತ ಭಿನ್ನವಾಗಿ ವ್ಯಕ್ತಗೊಳಿಸಿದ್ದು ವಿಶೇಷ ಮತ್ತು ಕುತೂಹಲ ಮೂಡಿಸುತ್ತದೆ. ಈ ದಿಶೆಯಲ್ಲಿ ವ್ಯಕ್ತವಾದ ಕೆಲವು ರಚನೆಗಳನ್ನು ಇಲ್ಲಿ ಗಮನಿಸಬೇಕು.

"ಮನೆಯೊಡೆಯ ಕಣ್ಮರೆಯಾದರೆ ಸುರು ಅದರ ಮಾಟ:
ಬೀದಿನಾಯಿಗೆ ಸನ್ನೆ ಮಾಡುವದು
ಮನೆ ಒಳಹಾದಿ ಹೇಳುವದು
ಮುಸುಮುಸು ಮೂಸಿ ಹುಡುಕುವ ಬಗೆ
ಅಡಗುವ ಬಗೆ ತಿಳಿಸುವದು
ತಾನೂ ತಿಂದು ಗಡಿಗೆ ಒಡೆದು ಹೊಲಸಮಾಡಿ
ದನ ಹೊಕ್ಕರೂ, ಬೀದಿನಾಯಿ ಮಕ್ಕಳ ಕಡಿದರೂ
ಕಳನಿದ್ದೆ ಮಾಡುವದು
ಒಡೆಯ ಬಂದಾಗ ಮತ್ತೆ ನಟಿಸುವದು
ಮನೆಹಾಳಾಯಿತಲ್ಲಾ ಎಂದರೆ ಸಂದಿ-ಗೊಂದಿ ಹುಡುಕಿ
ಭಾರಿ ಬೊಗಳಿ
ಒಡೆಯನನ್ನು ಖುಷಿಪಡಿಸುವದು" (ನಾಯಿಗಳು)[೧೯]

ಈ ಕವಿತೆಯಲ್ಲಿ ಆಡುನುಡಿ ತುಂಬಾ ಸೊಗಸಾಗಿ ಮೂಡಿ ಬಂದಿದೆ. ಭಾಷೆಯ ಬಳಕೆ ಜಾನಪದ ಶೈಲಿಯ ಒಗರನ್ನು ಮೈಗೂಡಿಸಿಕೊಂಡಿದೆ. ನಾಯಿ ಎಂಬ ಅರ್ಥದಲ್ಲಿ ನಮ್ಮ ಸಮಾಜದ ವಿಡಂಬನೆಯ ಧಾಟಿಯಲ್ಲಿ ಕೆಲವು ಜನರ ಕೀಳು ಭಾವನೆಯ ಮೂಲಕ ಇಡೀ ಸಮಾಜದ ಮೇಲೆ ದುಷ್ಪರಿಣಾಮವನ್ನು ಉಂಟು ಮಾಡುವ ಜನರ ಸಹವಾಸ ಬಹಳಷ್ಟು ಮಾರಕ ರೂಪದಲ್ಲಿ ಚಿತ್ರಿತವಾಗಿದೆ. ಇಂಥ ಅಸಂಸ್ಕೃತರು, ಅನಾಗರಿಕರು ದೇಶವನ್ನು ಹಾಳು ಮಾಡುವ ಕೀಳರಿಮೆಯ ಜನರನ್ನು ಕವಿ ದ್ವೇಷ ಮನೋಭಾವನೆಯಿಂದ ನೋಡುವ ವಿಚಾರಶೀಲತೆ ಈ ಕವನದಲ್ಲಿ ಅಡಕವಾಗಿದೆ.

ನೋಡಬಾರದಪ್ಪ ಈ ಹೊಲಗೇರಿ
ಕೈ ಕತ್ತಿ ನೆತ್ತ ಸೂರ್ಯನ್ನೇ ಕುಡಿದು
ಬುಡುಬಡುಸಿರೆ ಗಿಡಕೆ ಬಿಗಿದ ದೇಹ ತುಂಡು,ತುಂಡು,
ಚಾಮುಂಡಿ ಪೂಜೆಗೆ ಇದೇ ಕೆಂಡ ರಕ್ತ
ಕೂಡಲೆ ಹದ್ದುಗಳು ಬಾಯಿ ಎದ್ದಿದರು ಅವರ
ಬೆದರಿ ಸದ್ದಿಲ್ಲದೆ ನಾಯಿಗಳ ನಾಲಿಗೆಯ
ಇಳಿಬಿಟ್ಟರು ಅವರ ಗುದ್ದಿ ಹಂದಿಗಳು
ಡೊಳ್ಳ ತುಂಬಿದರು ಮೈಹೆಟ್ಟಿ ಹೆಟ್ಟಿ ತೇರು
ಎಳೆದರು, ಎಳೇದದ್ದೇ ಎಳೆದದ್ದು!" (ಇಲ್ಲಿ ಸಲ್ಲುವವರು)[೨೦]

ಕವಿಯು ಈ ಕವನದ ಮೊದಲನೆಯ ಸಾಲಿನಲ್ಲಿ ಜಿಗುಪ್ಸೆಯ ಮನೋಭಾವನೆಯನ್ನು ತಾಳುತ್ತಾನೆ. ಏಕೆಂದರೆ ನಮ್ಮ ದೇಶವು ಹದಗೆಡಲು ಇಂದಿನ ರಾಜಕೀಯ ವಿದ್ಯಮಾನಗಳೇ ಕಾರಣೀಭೂತವಾಗಿವೆ. ತಮ್ಮ ಸ್ವಾರ್ಥತನದಿಂದ ಪ್ರಜೆಗಳನ್ನು ಬಲಿಕೊಡಲು ಹೇಸುವುದಿಲ್ಲ, ಹಣವನ್ನು ಕೊಳ್ಳೆ ಹೊಡೆಯುವ ಮನೋವೃತ್ತಿಯು ರಾಜಕೀಯ ವ್ಯಕ್ತಿಗಳ ವ್ಯಕ್ತಿತ್ವಕ್ಕೆ ಹಿಡಿದ ಕೈಗನ್ನಡಿಯಂತಿದೆ. ಬಡವರ ಬಗ್ಗೆ ಕಾಳಜಿ, ಅನುಕಂಪ, ಭ್ರಾತೃತ್ವದ ಭಾವನೆ ಕಡಿಮೆಯಾಗಿದೆ. ಇಂದಿನ ರಾಜಕಾರಣಿಗಳಲ್ಲಿ ಪ್ರಾಮಾಣಿಕತೆ, ಶಿಸ್ತುಬದ್ಧವಾದ ಕಾರ್ಯವಿಲ್ಲ. ಸರಕಾರದ ಹಣದ ದುರುಪಯೋಗ ತೆಗೆದು ಕೊಳ್ಳುವ ಬಗೆಯನ್ನು ಕವಿಯು ತುಂಬಾ ಗಂಭೀರತೆಯಿಂದ ಹೇಳುತ್ತಾರೆ.

"ಬಸ್ಸು ಪುಷ್ಪಕ ವಿಮಾನದಂತೆ
ಅಲ್ಲಲ್ಲಿ ನಿಂತು ಜನರು ಇಳಿಯುವುದು
ಏರುವುದು ನೋಡಿ ನೋಡಿ
ಎಷ್ಟೊಂದು ಸಹಿಸುವುದು?
ಗುರಿತಪ್ಪೀತೆಂಬ ಎಚ್ಚರದಲ್ಲಿ ಕೃತಿಗಿಳಿಯದೆ
ಪತ್ರಿಕೆಯಲ್ಲಿ ತಲೆ ಹಾಕಿದೆ
ಶಾಂತಿ–ಅಹಿಂಸೆ ಪಾಲಿಸಿವೆ!" (ಪರವಶ)[೨೧]

ಈ ಜೀವನವೇ ಒಂದು ಸುಂಟರಗಾಳಿಯಂತೆ. ನಾವು ಬದುಕಿನಲ್ಲಿ ಬರುವ ಯಾವ ಕಷ್ಟಗಳಿಗೆ ಹೆದರಬೇಕಾಗಿಲ್ಲ. ಸಮಾಜದಲ್ಲಿ ಒಂದೇ ರೀತಿಯಾದ ಜನರು ಇರುವದಿಲ್ಲ. ಜನರು ತಮ್ಮ ಸ್ವಾರ್ಥಕ್ಕಾಗಿ ಇನ್ನೊಬ್ಬರನ್ನು ಹತ್ತಿಕ್ಕುವ ಕೆಲಸ ಮೋಸ ಸಂಚಿನಿಂದ ತುಂಬಿ ತುಳುಕುತ್ತಿರುವ ಇಂದಿನ ಈ ಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ನೋಡಿ, ಕವಿ ಉಭಯ ಸಂಕಟದಲ್ಲಿ ಸಿಕ್ಕು ಹಾಕಿ ಕೊಳ್ಳುತ್ತಾನೆ. ನೆಮ್ಮದಿಯ ಜೀವನಕ್ಕೆ ಇಂದಿನ ಸಮಾಜ ಎಷ್ಟೊಂದು ಆತಂಕಕಾರಿಯಾಗಿದೆ.

'ನಾ ನಿನ್ನೂ ಸಣ್ಣವ—
ಕಣ್ಣೆದುರು ಕೈಮಾಡಿ ಕರೆಯುವ ನೀರು,
ಮದ್ಯ ಗಿಜಿಗಿಜಿ ಮಂದಿ
ಒಂದು ಮೂಲೆಯಲ್ಲಿ ಮುಳುಗಿ
ಇನ್ನೊಂದುರಲ್ಲಿ ಏಳುವರು,
ನೀರ ಚಿಮ್ಮುತ್ತ ಚೆಲ್ಲಾಟವಾಡುವವರು,
ತಳ ಕಂಡು ಮರಳುವವರು,
ಮೇಲೆ ಮೇಲೆ ಈಸುವರು,
ಬಂಡೆಯ ಮೇಲಿಂದ ಲಗ ಹೊಡೆಯುವವರು
ಮಜಾ ಎನಿಸಿ
ನಾನೂ ಹಾಗೆ ಮಾಡಲು ತಯಾರಾಗಿ
ನೀರಲ್ಲಿ ಇಳಿದೆ ಬಿಟ್ಟೆ." (ದಂಡೆಯಲ್ಲೇ ಈಸುವವನು)[೨೨]

ಅಜ್ಜ ಮೊಮ್ಮಗನಿಗೆ ನೀರಿನಲ್ಲಿ ಈಸುವದು ಬೇಡ ಎಂದು ಉಪದೇಶ ಮಾಡುವ ಈ ಮಾತಿನ ಅರ್ಥದಲ್ಲಿ ರಾಜಕೀಯದಲ್ಲಿ ಆಟ–ಮೇಲಾಟಗಳ ಚಿತ್ರಣ ವಿಶಿಷ್ಟ ರೂಪದಲ್ಲಿ ಕವಿ ಹೆಣೆದಿದ್ದಾರೆ. ಎಲ್ಲರೂ ದೊಡ್ಡವರು ಎನಿಸಿಕೊಳ್ಳಲು ಪ್ರಯತ್ನ ಮಾಡುವವರೆ. ಒಬ್ಬರನ್ನೊಬ್ಬರು ಕಾಲು ಹಿಡಿದು ಜಗ್ಗುವದು, ರೆಕ್ಕೆ ಮುರಿದ ಹಕ್ಕಿಯಂತೆ ಏಳಾಟ–ಬೀಳಾಟ ಇವು ನಡೆಯುವದು ಇಂದಿನ ರಾಜಕೀಯ ಸನ್ನಿವೇಶದಲ್ಲಿ ಸಾಮಾನ್ಯವೆ. ಅದಕ್ಕೆ ದೇಶದಲ್ಲಿ ಇಂಥ ರಾಜಕೀಯ ಕೀಳು ಮನೋಭಾವನೆಯ ಸ್ಥಿತ್ಯಾಂತರಗಳು ಸರಿಯಾದ ಕ್ರಮವಲ್ಲ, ಎಂದು ಭೀಮನಗೌಡರು ತಮ್ಮ ಮತ್ತೊಂದು ಕವನದಲ್ಲಿ ಹೀಗೆ ವಿವರಿಸುತ್ತಾರೆ.

"ಏನು ತಿಂದು ಏನು ಕುಡಿದು
ತ್ರಾಣ ಗಳಿಸಬೇಕು?
ಎಮ್ಮೆಯನ್ನಾದರೂ ಕೊಳ್ಳುವನೆ?
ಅದು ದೆವ್ವವಂತೆ
ಜರಸಿ ಆಕಳ? ಪರದೇಶಿ ಪಿಶಾಚಿಯಂತೆ
ಹೋಗಲಿ ಇದ್ದದ್ದನ್ನೇ ಆಸ್ಪತ್ರೆಗೆ ಒಯ್ದು

ಗರ್ಭಧಾರಣಾ ನೂತನ ತಂತ್ರ ಬಳಸಬಾರದೇಕೆ?
ತಾನಂತೊ ಡಿಪೋ ಕ್ಕೆ ಹೊಡೆಯುವ ಗಾಡಿ
ತನ್ನ ಆಶೆಗಳನ್ನೆಲ್ಲ ಅನ್ಯರ ಮೇಲೆ
ಆರೋಪಿಸುವುದಷ್ಟೇ ಗೊತ್ತು ಹೊರತು
ಚಿಗುರಿನ ಬಗೆಗೆ ಬೇರಿನ ಜವಾಬ್ದಾರಯೇ ಇಲ್ಲ
ಮಾಡುವದೇನು?
ಪಕ್ಕದ ಮನೆಯ ಕೋಳಿತತ್ತಿ ಕಳುವು ಮಾಡಿ
ಭಕ್ಷಿಸುವುದು.
ಶಾಲೆಯಲ್ಲಿ ಅಮೇರಿಕೆಯಿಂದ ಬಂದ
ಹಾಲಿನ ಪುಡಿ ತೂತು ಮಾಡಿ ಅವಕಾಶ ಸಿಕ್ಕಾಗೆಲ್ಲ
ನುಂಗುವದು." (ಆಕಳು ಮತ್ತು ಅಜ್ಜ)[೨೩]

ಜೀವನದಲ್ಲಿ ದುಡಿಯಲಾರದೆ, ಬದುಕನ್ನು ದುರಂತದ ಹಾದಿಗೆ ನೂಕಿದವನು. ಇವನು ಕೆಲಸ ಮಾಡದೆ ಅನ್ಯರನ್ನು ದ್ವೇಷಿಸುವದು, ಇನ್ನೊಬ್ಬರ ಬಗ್ಗೆ ಕೀಳಾಗಿ ಮಾತನಾಡುವದು, ದುಷ್ಟಬುದ್ದಿಯಿಂದ ಇಡೀ ಜೀವನದ ಮೌಲ್ಯಗಳನ್ನು ಹಾಳು ಮಾಡಿಕೊಂಡು ತಿರುಗುವದು. ಪ್ರಸ್ತುತ ಬದುಕಿನ ಚಿಂತನೆಯ ವಿಚಾರವನ್ನು ವ್ಯಕ್ತಪಡಿಸುವಲ್ಲಿ ಮನುಷ್ಯ ಸಂಸ್ಕೃತಿಯ ಬಗ್ಗೆ ಇರುವ ಜ್ಞಾನವನ್ನು ಕಳೆದುಕೊಂಡು, ಅಜ್ಞಾನ ಬದುಕಿನ ಚಿತ್ರಣ ಸಾಮಾಜಿಕ ನೀತಿಯನ್ನು ವಿವರಿಸುತ್ತದೆ.

"ಲಗಳಿ ಸಾಹುಕಾರ ಬಗ್ಗೆ ಕವನ ಬರೆದು
ನಾನೂ ಕವಿ ಆಗಬೇಕೆಂದು
ತಯಾರಿಕೆಯಲ್ಲಿ ಕುಳಿತಾಗ
ನಾನಿನ್ನು ಚಿಕ್ಕವನಿದ್ದಾಗ
ಬಿಳಿಧೋತರ ಖಾದಿ ನೆಹರುಶರ್ಟು ಗಾಂಧಿಟೋಪಿ
ನನಗೆ ತೊಡಿಸಿ ನಮ್ಮಪ್ಪ ಮಗ ಲಗಳಿ
ಸಾಹುಕಾರ ಆಗ್ಯಾನ
ಎಂದು ಸಂತೋಷಪಟ್ಟದ್ದು". (ಕವಿ. ಸಂಪಾದಕೀಯ)[೨೪]

ಈ ಕವನದಲ್ಲಿ ಮುಖ್ಯವಾಗಿ ಎದ್ದು ಕಾಣುವಂಥದು ಆದರ್ಶದ ಕನಸು. ಆದರೆ ವೈಭವದ ಈ ಸಂಭ್ರಮವನ್ನು ನೋಡಿದರೆ ಅದು ಸಮಾಜದ ಅಭಿವೃದ್ಧಿಯ ಸಂಕೇತವಾಗಿದೆ. ಅದಕ್ಕಾಗಿ ನೀನು ಸಿದ್ಧನಾಗು ಎನ್ನುವ ಆಶಾಭಾವನೆ ತಂದೆಯ ಮೂಲಕ ಕವಿ ಅಭಿವ್ಯಕ್ತಿಗೊಳಿಸಿರುವದು ವೈಶಿಷ್ಟ್ಯಪೂರ್ಣವಾಗಿದೆ. ವ್ಯವಹಾರಿಕ ಭಾಷೆಯಿಂದ ಕವಿತೆ ವಾಚ್ಯಾರ್ಥವನ್ನು ಧ್ವನಿಸುತ್ತದೆ.

“ಒಮ್ಮೆ ಅಕಸ್ಮಾತ್ ಮೊನ್ನೆ
ತುಂಟರ ಬಲಿಗೆ ಬಿದ್ದೆ
ಭಪ್ಪರೆ ಎಂದರು ತುಂಟರು
ಅಜ್ಞಾನಿಗಳನ್ನು ಸುಜ್ಞಾನಿಗಳಾಗಿಸಲು
ನನ್ನ ಉಪಯೋಗಿಸಬೇಕೆಂದರು
ಜನರಲ್ಲಿ ರಾಜಕೀಯ ಪ್ರಜ್ಞೆ
ಮೂಡಿಸಲು ಬಳಸಬೇಕೆಂದರು
ಜಿಡ್ಡುಗಟ್ಟಿದ ಜಾತ್ರೆಯಲ್ಲಿ ಬಂಡಾಯ ವೆಬ್ಬಿಸಲು
ಅತ್ಯಂತ ಪ್ರಯೋಜನಕಾರಿಯೆಂದರು ತುಂಟರು”
(ಕವಿತೆಯ ಕತೆ)[೨೫]

ಕವಿಯು ತುಂಬಾ ಕಸರತ್ತು ಮಾಡಿ ನವ್ಯ ಧಾಟಿಗೆ ಒಂದು ಸೇತುವೆ ಕಟ್ಟಿದ್ದಾನೆ. ಅದಕ್ಕೆ ಕೆಲವು ಸಾಹಿತ್ಯಗಳು ಕವಿತೆಗೆ ಪ್ರೋತ್ಸಾಹ, ಸ್ಪೂರ್ತಿ ನೀಡಿ ಹುರುದುಂಬಿಸುತ್ತಿದ್ದರು. ಕೆಲವರು ಇವರ ಆದರ್ಶದ ವ್ಯಕ್ತಿತ್ವವನ್ನು ನೋಡಿ ಇವರ ಸಾಮಾಜಿಕ, ರಾಜಕೀಯ, ಪ್ರಜ್ಞೆಯನ್ನು ಜನರ ಮೇಲೆ ದಟ್ಟವಾದ ಪ್ರಭಾವ ಹಬ್ಬಿಸಲು ಬಳಸಿಕೊಳ್ಳಬೇಕು ಎಂದು ಪ್ರಯತ್ನ ಮಾಡಿದರು. ಆದರೆ ಕವಿಯ ಇಂಥ ಉಸಿರುಗಟ್ಟಿದ ವಾತಾವರಣದಲ್ಲಿ ದುಡಿಯಲು ಮುಂದಾಗಲಿಲ್ಲ. ತನ್ನದೆಯಾದ ವಿಚಾರದಲ್ಲಿ ಕೀಳರಿಮೆಯನ್ನು ಬಿಟ್ಟು ಅದಕ್ಕೇಲ್ಲ ಬದ್ಧನಾಗದೆ ಕವಿತೆಯನ್ನು ರಚಿಸಿರುವದು ಸಾಮಾಜಿಕ ನೈತಿಕತೆಯ ತಳಹದಿಯಾಗಿದೆ.

ಅದಕ್ಕೆ ಭೀಮನಗೌಡರು ತಮ್ಮ ಕಾವ್ಯದಲ್ಲಿ ಸಾಹಿತ್ಯದ ವಿಚಾರವಾಗಿ ಮತ್ತೊಂದು ಕವನದಲ್ಲಿ ಹೀಗೆ ವ್ಯಕ್ತಪಡಿಸಿದ್ದಾರೆ.

“ಚುಂಚು ಮೊಂಡಾಗಿ ಮೆತ್ತಗಿ ಕುಳಿತ ಕೋಗಿಲೆ
ಯಾವುದೊ ಸೈಕಾಲಜಿ ಹಾಡಿ
ಭವಿಷ್ಯ ಹೇಳಿ
ಕಿಸಬಾಯಿ ನೋವಾಗಿ
ಗಪ್ಪಾಗಿ ಚಿಂತಿಸುವ ನವ್ಯಕವಿ” (ಒಂದು ಚಿತ್ರ)[೨೬]

ಈ ಕವನದಲ್ಲಿ ಕವಿ ನಿಜವಾಗಿಯು ಸ್ವಾತಂತ್ರ್ಯ ಕಳೆದುಕೊಂಡಿಲ್ಲ. ಇಂದಿನ ಈ ಕೃತಕ ಜಗತ್ತಿನ ದುಂಬಾಲ ಬೀಳುವದು ಕವಿಯ ಜಾಯಮಾನವಲ್ಲ. ಭಾಷೆ, ಸಾಹಿತ್ಯ ಇವು ಕಾಲಕಾಲಕ್ಕೆ ಪರಿವರ್ತನೆಯಾಗುತ್ತವೆ. ಅದಕ್ಕೆ ತಾನೊಂದು ಸಾಹಿತ್ಯದ ಆಳದಲ್ಲಿ ಬೇರು ಬಿಟ್ಟಿದ್ದಾರೆ. ಇನ್ನೊಂದು ಸಾಹಿತ್ಯ ಪರಂಪರೆ ಜನ್ಮ ತಾಳಿದಾಗ ಕವಿ ಆ ಪರಂಪರೆಯ ಲಕ್ಷಣಗಳಿಗೆ ಹೊಂದಿಕೊಳ್ಳುವ ಸ್ವಭಾವದವರಲ್ಲ. ಅಲ್ಲಿಯ ಸಂವೇದನೆಗಳಿಗೆ ಕಟ್ಟು ಬಿದ್ದವರಲ್ಲ.

ಸ್ವಾಭಿಮಾನಿಗಳು ಇವರು.

"ಎದ್ದ ಮೇಲೆದ್ದ, ಕ್ರೌರ್ಯದ ವಿರುದ್ದ ಅವನೀಗ ಸನ್ನದ್ಧ
ಬರೊಬರಿ, ಬೇರನ್ನೇ ಕಳೆದುಕೊಂಡ ಮರ
ಯಾರ ಮೇಲೆ ಎರಗಿದರೇನು ಅನ್ಯಾಯ?
ಮುದುಡಿದ ಇಂದ್ರಿಯಗಳ ನಿಗಚುವಾಗ
ಯಾವ ನಗರ ನಾಶ ಹೊಂದಿದರೇನು ಮರುಕ?
ಸುಮ್ಮನಿದ್ದ ಸಹಪಾಠಿಗಳಿಗೆ ಕಂಪಾಸು
ಚುಚ್ಚುವದು ಯಾವ ಅಪರಾಧ?
ಮಾಸ್ತರ ಪುತ್ಥಳಿ ಕತ್ತೆಯ ಮೇಲೆ
ಮೆರೆಸುವದು ಯಾವ ಅಪಚಾರ?
ಎದ್ದ ಸುಂಟರಗಾಳಿ ಯಾವ ಅಸತ್ಯ" (ಮೃಗರಾಜ)[೨೭]

ಈ ಕವಿತೆಯ ಮೊದಲನೆಯ ಸಾಲು ನಮಗೆ ಶೂರನ ದಿಟ್ಟತನ ಪ್ರತಿಬಿಂಬಿಸುತ್ತದೆ. ಆದರೆ, ಸಮಾಜದಲ್ಲಿನ ವ್ಯವಸ್ಥೆಯ ಬಗ್ಗೆ ಇವನಿಗೆ ಕಾಳಜಿಯಿದೆ. ರಾಜಕೀಯ ದೃಷ್ಟಿಯಿದೆ, ಭೀತಿಯಿದೆ, ಆದರೆ ಒಂದು ರೀತಿಯಾದ ಶೋಷಣೆ ಅನ್ಯಾಯಕ್ಕೆ ಒಳಗಾದವರ ನೋವಿನ ಅಲೆಯಿದೆ. ಎಂಬುವುದು ಕವಿಯ ಆಶಯದ ನಿಲುವಿದೆ, ನೋಡಿಯೂ ನೋಡಿದಂತೆ ಸುಮ್ಮನಿರುವದು ಹೇಡಿಯ ಲಕ್ಷಣ. ಅಭಿಮಾನದ ಪ್ರಶ್ನೆಯು ಗಂಭೀರವಾಗಿದೆ, ಕೊನೆಗೆ ಸುಂಟರಗಾಳಿಯ ಹಾಗೆ ಧೈರ್ಯ ಸಾಹಸದಿಂದ ಹೋರಾಡಿದ ಸಮಾಜದ ಉದ್ಧಾರಕ್ಕೆ ಶ್ರಮಿಸಿದ್ದು ಆಶಾದಾಯಕವಾಗಿದೆ.

ಹೀಗೆ ಭೀಮನಗೌಡರ ಅವರು ಹಲವು ಕವನಗಳಲ್ಲಿ ರಾಜಕೀಯ, ಸಾಮಾಜಿಕ ಪ್ರಜ್ಞೆಯ ನಿಲುವುಗಳನ್ನು ಎದುರಿಸುತ್ತೇವೆ. ಅವರ 'ಹುಡುಗಾಟದ ಹಾಡು' ಕವನ ಸಂಕಲನದಲ್ಲಿ ಮನುಷ್ಯ ಸಮಾಜದಲ್ಲಿ ಬದುಕುವ ಸಂದರ್ಭದಲ್ಲಿ ಆಗುವ ಆತಂಕಗಳು, ಜನರ ರೀತಿ–ನೀತಿಗಳನ್ನು, ಅವರ ಚಾರಿತ್ರ್ಯವನ್ನು ನಾವು ಗಮನಿಸಬಹುದು.

'ತುಡುಗಿ' ಕವನ ಸಂಕಲನದಲ್ಲಿ ಒಂದು ಚಿತ್ರ ಕವಿತೆಯಲ್ಲಿ ತಪ್ಪುಮಾಡುವ ವ್ಯಕ್ತಿಯ ನೈತಿಕತೆಯ ವಿಷಯ ಅಡಕವಾಗಿದೆ. ಅವರ 'ಹೋಮಾ ಎಂಬ ಪಕ್ಷಿ' ಕವಿತೆಯಲ್ಲಿ ರಾಜಕೀಯ ವೈಚಾರಿಕತೆಯು ಪ್ರಸ್ತುತ ದೇಶದಲ್ಲಿ ಅದರ ಅಸ್ತಿತ್ವ ಹೇಗಿದೆ ಎಂದು ಕವಿ ಮಾರ್ಮಿಕವಾಗಿ ಚಿತ್ರಿಸಿದ್ದಾರೆ.

೩.೩ ನಿಸರ್ಗ ಪ್ರಜ್ಞೆ

ನಿಸರ್ಗ–ಎನ್ನುವುದೊಂದು ಸಮ್ಮೋಹಕ ಶಕ್ತಿ. ಇತರ ಎಲ್ಲ ವಸ್ತುಗಳಿಂದಲೂ

ವಿಷಯಗಳಿದಂದಲೂ ಮನಸ್ಸನ್ನು ಕ್ಷಣ ಕಾಲವಾದರೂ ಬಿಡಿಸಿ ಒಂದೆಡೆ ಸೇರಿಸುವ ಶಕ್ತಿಯುಳ್ಳದ್ದು. ಅದು ನಮ್ಮ ಮನಸ್ಸನ್ನು ತೊಳೆದು ಸಂಸ್ಕಾರಗೊಳಿಸುತ್ತದೆ ಎಂದು ನಮ್ಮ ಕವಿಗಳ ನಂಬಿಕೆಯಾಗಿದೆ.

ಆದ್ದರಿಂದ ಕವಿ ಭೀಮನಗೌಡರ ಅವರು ಬರೀ ನಿಸರ್ಗದ ವರ್ಣನೆ ಕವಿಯಲ್ಲ. ಅವರ ಕವಿತೆಗಳನ್ನು ಗಮನಿಸಿಕೊಂಡಾಗ, ಅವರ ಪ್ರಯೋಗಶೀಲತೆ, ಚಿಂತನಶೀಲತೆ ಅನನ್ಯವಾದುದು. ಏಕೆಂದರೆ ಪ್ರಕೃತಿಯ ಸೌಂದರ್ಯದ ಚಿತ್ರಣವನ್ನು ಬಳಸಿಕೊಂಡು ಪ್ರತಿಮೆ, ಸಂಕೇತ, ಪ್ರತ್ಯೇಕಗಳ ಮೂಲಕ ಒಂದು ಬಗೆಯ ಹೊಸ ಆವಿಷ್ಕಾರವನ್ನು ನೀಡುವದರ ಜೊತೆಗೆ ಪರಿಸರದ ಮುಖ್ಯ ವಸ್ತುವನ್ನು ಆಶಯವಾಗಿ ಇಟ್ಟು ಕೊಳ್ಳುತ್ತಾರೆ.

ಅವರ ಪ್ರಥಮ ಸಂಕಲನವಾದ 'ತುಡುಗಿ' ಯಲ್ಲಿ ನಿಸರ್ಗದ ಹರಿವು ಹೆಚ್ಚಿನ ಪ್ರಮಾಣದಲ್ಲಿ ಕಂಡು ಬರುತ್ತದೆ.

"ನಡೆಯ ಬೇಕೆನಿಸಿದರೆ ಬರಿ
ಸಂಜೆಯ ತಂಗಾಳಿಯ ಜೊತೆ
ನಗಬೇಕೆನಿಸುವುದು ಬರಿ
ಗಿಡಗಳ ಜೊತೆ ಜಗಳವಾಡುವುದು
ಗಿಳಿಗಳ ಜೊತೆ ಅಳುವುದು
ಹೊಳೆಗಳ ಜೊತೆ." (ಬದುಕು ಮತ್ತು ನಾನು)[೨೮]

ತಮ್ಮ ಬದುಕಿನ ವೈಯಕ್ತಿಕ ಅನುಭವದ ಆಳಗಲದ ಉದ್ದಕ್ಕೂ ನೋವು, ನಲಿವು, ಚಿತ್ಕಾರತೆ ತುಂಬ ಸೊಗಸಾಗಿ ಚಿತ್ರಣರೂಪದಲ್ಲಿ ನಿಲ್ಲುತ್ತವೆ. ಭಯ, ಭೀತಿಗಳ, ನಡುವಿನ ಸುಳಿಯಲ್ಲಿ ಪರಿಸರದ ಕಲ್ಪನೆ ತಂಗಾಳಿ, ಗಿಡ, ಗಿಳಿಗಳು, ಹೊಳೆ, ಮೂಲಕವೇ ತಳಮಳದ ಚಿತ್ರಣ ಮೂಡುತ್ತದೆ. ಇವುಗಳ ಹಿನ್ನಲೆಯಲ್ಲಿ ಮನುಷ್ಯ ಬದುಕಿನ ನೋವಿನ ಅನುಭವದ ಸಂಕೇತಗಳು ಬೆಳೆದು ನಿಲ್ಲುತ್ತವೆ.

'ಇಷ್ಟೆಲ್ಲ ಯಾಕೆ ಗೊತ್ತೇ?
ನನಗೆ ನೀ ಬೇಕು
ನಿನ್ನೊಳಗಿನ ಗಾಳಿ ಬೇಕು
ಗಿಡ-ಗುಡ್ಡ ಬೇಕು
ಹೊಳೆ ಬೇಕು
ಮುಗಿಲು ಬೇಕು
ಆ ಚಂದ್ರ ಬೇಕು" (ಬೇಡ ಈ ಸೋಗು)[೨೯]

ಈ ಕವನದಲ್ಲಿ ಕವಿಯು ಪ್ರೀತಿಯ ಧ್ವನಿಯನ್ನು ಅಭಿವ್ಯಕ್ತಿಗೊಳಿಸಿದರು

ಅವಳನ್ನು ಬಯಸುವ ಕಾತರಿಸುವ ಪ್ರಿಯತಮನ ಲವಲವಿಕೆಯಿದೆ. ಗಿಡ, ಗುಡ್ಡ, ಹೊಳೆ, ಇವುಗಳ ಹಿನ್ನಲೆಯಲ್ಲಿ, ಅವಳ ಜೀವನದ ಸುಖ ಮತ್ತು ಸಮೃದ್ಧಿಯ ಬಾಳಿನ ಪ್ರತ್ಯೇಕತೆ ಇಲ್ಲಿ ಇಂಥ ಸೌಂದರ್ಯದ ಬೆಳಕನ್ನು ಕಾಣುವ ವಿಶೇಷತೆಯಿದೆ.

ಇಂದಿನ ಸಮಾಜದಲ್ಲಿ ಸಂಸಾರಿಕ ಜೀವನವನ್ನು ತೊರೆದು ಹೇಡಿಗಳಾಗಿ ನಿಂತಿರುವ ಜನರಿಗೆ, ಪ್ರಕೃತಿ ಚಿತ್ರದ ಮೂಲಕವೇ ನಿರೂಪಿಸುವ ಕವನ ಹೇಡಿ ಅತ್ಯಂತ ಪರಿಣಾಮಕಾರಿಯಾಗಿದೆ.

"ನೋಡು ಆ ಹಕ್ಕಿ ಆ ತನೆಯ ಮೇಲೆ
ನೋಡು ಆ ಮಿಡತೆ ಆ ರವುದೆ ಮೇಲೆ
ನೋಡು ಜೋಳದ ತೆಕ್ಕೆ ಮಾಂಸ ತಕ್ಕೆ ನಿಲುವು
ತಕ್ಕೆ ನೋಟ,
ಗಾಳಿಗಲುಗಿ ಬಗಿದರೆ ಸಾಕು
ಕತ್ತು ಮುತ್ತಿನ ತನೆ
ಕುಕ್ಕಿದರೆ ಸೋರುವದು ಚೊಕ್ಕ ಹಾಲು
ಗಮ್ಮೆಂದು ವಾಸನೆ ಮೂಗು ಹೊಕ್ಕರಂತೂ
ಚಲ್ಲಾಪಿಲ್ಲಿ ಸೀನು
ತೊಟ್ಟಿಲವೂ ಆಗಿ ತೊಗುವುದು ಪೈರು
ಕುಳಿತು ನೀನು ಹಕ್ಕಿಯ ಲಾಲಿ ಕೇಳು
ನೀನೂ ಹಾಡು!" (ಹೇಡಿ) [೩೦]

ಹೇಡಿ ಕವಿತೆಯು ಅತ್ಯಂತ ಪರಿಣಾಮಕಾರಿಯಾಗಿ ಹೇಳುವದರ ಜೊತೆಗೆ ಪ್ರಕೃತಿ ಚಿತ್ರದ ಸೌಂದರ್ಯವನ್ನು ತಮ್ಮ ಬದುಕಿನ ಅಂತರಂಗದ ಕಾಳಜಿಯನ್ನು ಸೂಚಿಸಲು ಯಶಸ್ವಿಯಾಗಿದೆ. ಕಾವ್ಯದಲ್ಲಿ ಅಡಕವಾಗಿರುವ ಬದುಕಿನ ಹೆಜ್ಜೆಗಳು ವಸ್ತುವಿನ ಜೊತೆಗೆ ಪ್ರಕೃತಿ ರೂಪಕಗಳು ಮಾರ್ಮಿಕವಾದ ಶೈಲಿಯಲ್ಲಿ ಹೊರಹೊಮ್ಮುತ್ತವೆ.

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ವಿಷಯವೆಂದರೆ, ಅನುಭವ ಯಾವುದೇ ಇದ್ದರೂ ಅದರ ಸಂಕೀರ್ಣತೆಯನ್ನು, ಅದರ ವಿಶಿಷ್ಟತೆಯನ್ನು, ಅದರಲ್ಲಿಯ ವ್ಯಂಗಾತ್ಮಕ ವಿರೋಧಗಳನ್ನು ತಿಳಿಗಣ್ಣಿನಿಂದ ಸ್ಪಷ್ಟವಾಗಿ ನೋಡುವ ದಿಟ್ಟತನ ಕವಿಗಿದೆ.

"ನನಗೆ ಚಿಕ್ಕಿ-ಚಂದಪ್ಪದಂತೆ
ಮೆರೆಯುವುದು ಬೇಕಾಗಿಲ್ಲ
ದೇವಕನ್ಯೆ ಸಾಧ್ಯವೇ ಇಲ್ಲ
ಆ ದುಂಡು ಲೋಕವ ಮರೆತು
ಅರ್ಧಾಂಗಕ್ಕಿದ್ದ ಏರಿಳಿತಕ್ಕೆ

ನನ್ನಾಕೆ ಅಗಸವಾದರೆ ಸಾಕು

ಜಿಗುಟಿರುವತನಕ ಬೆಸೆಯಬೇಕು." (ನಗ್ತಾನ ಮಗ)[೩೧]

ಕವಿ ಇಲ್ಲಿ ಸಂಸಾರ ಬದುಕಿನ ಚಿತ್ರಣದಲ್ಲಿ ಜೀವನದ ದುಃಸ್ಥಿತಿಯನ್ನು ಕಂಡು, ಬೇರೆಯುವರು ಹೀಯಾಳಿಸುವದನ್ನು ತನ್ನ ಸಮಾಜದ ಸುತ್ತಲೂ ಜನರು ನಡೆದುಕೊಂಡ ರೀತಿ ವಿಚಿತ್ರಮಯವಾಗಿದೆ. ಇಲ್ಲಿ ಬದುಕನ್ನು ನಡೆಸಲು ಸಮರ್ಥ ವ್ಯಕ್ತಿಯಾಗಲು ಕವಿಯು ಪರಸ್ಪರ ಗಂಡ ಹೆಂಡತಿಯರ ನಡುವೆ, ಹೊಂದಾಣಿಕೆಯ ಬೆಸೆಯುವಿಕೆಯನ್ನು ಪ್ರಕೃತಿ ಸೌಂದರ್ಯದ ಮೂಲಕ ಅಭಿವ್ಯಕ್ತಗೊಳಿಸಿದ್ದಾನೆ

ಮತ್ತೊಂದು ಕವಿತೆಯಲ್ಲಿ ನಿಸರ್ಗದ ಬಳಕೆಯ ಚಿತ್ರಣ ಗಮನಾರ್ಹವಾಗಿರುವದನ್ನು ಹೀಗೆ ಹೇಳಿದ್ದಾರೆ.

"ಮಾತು ಮಾತಿಗೆ ಮುತ್ತಿನ ರೆಕ್ಕೆ ಹರಡಿತ್ತು

ನಿನ್ನಯ ಆಟವದು ಎಂಥ ಮಾಟವಯ್ಯ

ನಮ್ಮಪ್ಪ ಕೊಟ್ಟ ಕುದುರೆಯ ಹತ್ತಿ

ಹಸಿರು ಗದ್ದೆಯಲ್ಲಿ ನುಸುಳಿದ್ದೆ ನುಸುಳಿದ್ದು

ಆಗುಡ್ಡ ಹೇಗೆ ಏರಿದೆ, ಹೇಗೆ ಹುಲಿಯ ಹೊಡೆದೆ

ಕೊಳವ ಜಿಗಿದೆ ಹೂವ ಹರಿದೆ

ಆ ಹೂವು ನನ್ನವಳಿಗೆ ಹೇಗೆ ಒಪ್ಪಿತುಗೊತ್ತೇ?

ನೋಡಿದ್ದೇ ಹಣಿನಂಥವಳ

ಮೇಲೆ ಹತ್ತಿಸಿಕೊಂಡು ಕುದುರೆ ಬಿಟ್ಟಿದ್ದು

ಆಹಾ! ವಿಜಯನಗರ ಸಾಮ್ರಾಜ್ಯವೆ." (ಆಲಮಟ್ಟಿ ಜಂಗಮರು)[೩೨]

ಕವಿ ಭೀಮನಗೌಡರು ತಮ್ಮ ಈ ಕವನದಲ್ಲಿ ರಸಿಕತೆಯನ್ನು ಮೂಡಿಸಿದ್ದಾರೆ. ಈ ಕವನವು ನಿಜವಾಗಿಯೂ ಅರ್ಥಗರ್ಭಿತವಾಗಿದೆ. ವಾಚ್ಯಾರ್ಥವು ಧ್ವನಿಸುತ್ತದೆ, ಅದು ಅಲ್ಲದೆ, ಒಳನೋಟದಲ್ಲಿ ತಮ್ಮ ವೈಯಕ್ತಿಕ ಬದುಕಿಗೆ ಗಮನ ಸೆಳೆಯುತ್ತಾರೆ. ವೈವಿಧ್ಯತೆಯನ್ನು ಸಹ ಇಲ್ಲಿ ಕಾಣುತ್ತಾರೆ ವಾಸ್ತವ ಬದುಕಿನ ಚಿತ್ರಣ ಕವನದ ಅಂತರ್ಮುಖಿಯಾಗಿ ಕಾಣಿಸಿಕೊಳ್ಳುತ್ತದೆ.

"ಆಹಾ! ಮಲ್ಲಿಗೆಯ ಮುದ್ದುಗಿಳಿಯೆ

ಸಾಗರವೇ ಆಗಸವೆ ಚಂದ್ರನೆ

ಇಂದ್ರನೆ ಆಹಾ ಕಾಡು ಹಂದಿಯೆ" (ಈ ಪಿಶಾಚಿ ಶಬ್ದಗಳು)[೩೩]

ಕವಿ ಇಲ್ಲಿ ಪ್ರೀಯತಮೆಯನ್ನು ಪ್ರಶಂಸೆ ಮಾಡುತ್ತಿದ್ದರು ಅವಳ ಬಗ್ಗೆ ಕಾಳಜಿಯಿದೆ. ಪ್ರೀತಿಯ ಸೆಳೆವಿನ ಸುತ್ತ ಗಿರಿಕೆಹೊಡೆಯುವ ಶಬ್ದಗಳು ಪ್ರೀತಿಯ ಸಾಂಕೇತವಾಗಿ ಅರ್ಥವನ್ನು ಕವಿ ನಿಸರ್ಗದ ಮೂಲಕ ತುಂಬುತ್ತಾನೆ. ಕೊನೆಗೆ ನಿರಾಸೆಯ ಮನೋಭಾವನೆಯನ್ನು ತಾಳುವದರ ಮೂಲಕ ಬದುಕಿಗೊಂದು ಮಾರ್ಗ ಹುಡುಕುವ

...ಗ್ರಂಥಾಲಯ,
ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ.

ಪ್ರಯತ್ನವಿದೆ.

"ಓಡುತ್ತೇನೆ
ನಿನ್ನ ಸುತ್ತಲ ಮರಗಳಿಗಾಗಿ
ನಿನಾಲಿಸಿ ಖಗಗಳಿಗಾಗಿ
ನೀನು ನೋಡಿದ ಮೋಡಗಳಿಗಾಗಿ ನದಿಗಳಿಗಾಗಿ." (ಓಡುತ್ತೇನೆ)[೩೪]

ಮನುಷ್ಯನ ಬದುಕು ಎಷ್ಟೊಂದು ವಿಚಿತ್ರ ಮಯವಾದದು. ಬದುಕು ಓಡುವವದರ ಜೊತೆಗೆ ಮನದ ಚಂಚಲ್ಯತೆಯನ್ನು ಚಿತ್ರಿಸಲು ನಿಸರ್ಗದ ಮಡಿಲನ್ನು ಸೆರೆ ಹಿಡಿಯುವ ಒಂದು ಪ್ರತಿಮೆಯ ಮೂಲಕ ಕವಿ ಇಲ್ಲಿ ನೈಸರ್ಗಿಕವಾಗಿ ಬದುಕಿನ ಚಿತ್ರಣವನ್ನು ಪ್ರತಿಬಿಂಬಿಸಿದ್ದಾರೆ.

"ನಿನ್ನ ಮೈಯಲ್ಲಿ ನರಗಳಿವೆಯಲ್ಲ
ಹಾಗಾದರೆ ಹಳ್ಳಿಗೆ
ಕಾಡು ತೋಪಿಗೆ
ಅಂಡಗಚ್ಚಿ ಹಾಕಿ ಹತ್ತುಮರ
ಕುಂಡೆ ಕೆತ್ತಿದರೂ ಬಿಡಬೇಡ
ಟೊಂಗೆ ಮುರಿದು ಬಿದ್ದರೂ ಹೆದರಬೇಡ.
ಹುಲಿ-ಹಂದಿ ಬಂದರು ಹೆದರಬೇಡ
ಉಡದ ಹಿಡಿತ ಗೊತ್ತಿಲ್ಲ
ಹಾಗೆ ಬೇಕಾದ ಗೊಂಚಲಕ್ಕೆ ಕೈಹಾಕು
ಹರಿ ತಿನ್ನು." (ಹಣ್ಣು ತಿನ್ನುವ ರೀತಿ) [೩೫]

130070

ಬದುಕಿನಲ್ಲಿ ಜೀವಿಸಬೇಕಾದರೆ ಅದಕ್ಕೊಂದು ಗಟ್ಟಿತನವಿರಬೇಕು, ಜಿಗುಟುತನಬೇಕು. ಕವಿ ಇಲ್ಲಿ ಮನುಷ್ಯ ಬದುಕಿನ ಸಾಧನೆಯ ಮಾರ್ಗಕ್ಕೆ ಆತ್ಮಸ್ಥೈರ್ಯ ತುಂಬುವದ ಜೊತೆಗೆ, ಪ್ರಕೃತಿಯ ವರ್ಣನೆಯೊಂದಿಗೆ ಪ್ರತ್ಯೇಕಗೊಳಿಸುತ್ತ ಹೋಗುವ ಕವಿಯ ವಿಚಾರ ನಿಜವಾಗಲು ಮನುಷ್ಯ ಬದುಕಿನ ಹಿಂದಿನ ಧ್ವನಿಯು ಇಲ್ಲಿ ಅಭಿವ್ಯಕ್ತಿಗೊಂಡಿದೆ.

"ಎಣ್ಣೆ ಬಣ್ಣದ ಹುಡುಗಿ
ಹಸಿರ ಸೀರೆಯುಟ್ಟು
ಪಾತರಗಿತ್ತಿ ಕಣ್ಣ ಪಿಳುಕಿಸಿ
ನಸುನಾಚಿ ಗುಲಾಬಿಗಲ್ಲ ತೋರಿಸಿ
ತೊಂಡೆಯ ತುಟಿಗಳ ಮೇಲೆ ಹಕ್ಕಿಗಳ ಕಿಲಕಿಲನೆ
ಸಂಪಿಗೆಯ ಕಂಪ ಉಸಿರಬಿಟ್ಟು

ತಟ್ಟಿದರೆ ಬೆಚ್ಚಿ
ಬೆಟ್ಟ ಮೊಲೆ ಬಿಚ್ಚಿ." (ಬೆಳಕಿನಲ್ಲಿ ಸೂರ್ಯ ಮತ್ತು ಭೂಮಿ)[೩೬]

ಪ್ರಕೃತಿಯವರ್ಣನೆಯೊಂದಿಗೆ ಈ ಭೂಮಿಯನ್ನು ಕವಿ ಮುಂಜಾವಿನ ಸಮಯ ನೋಡಿದಾಗ, ಆನಂದ ಭಾವನೆಯ ಹಿಂದೆ ಕವಿಯ ಆಶೆಯಲ್ಲಿ ಸೌಂದರ್ಯ ವರ್ಣನೆ ತುಂಬಾ ಅರ್ಥಪೂರ್ಣವಾಗಿದೆ. ಇಲ್ಲಿ ನಿಸರ್ಗದ ಬಳಕೆಯೊಂದಿಗೆ ಭೂಮಿಯನ್ನು ಕವಿ ವರ್ಣಿಸುತ್ತಾನೆ. ಭೂಮಿ-ಆಕಾಶ ಸಂಬಂಧ ಅನೊನ್ಯವಾದುದು. ಈ ಸೃಷ್ಟಿಯು ಜಗತ್ತಿನಲ್ಲಿ ಹೊಸ ಚೈತನ್ಯ ತುಂಬುವ ಒಂದು ಹೊಸ ನೋಟದ ಬಗ್ಗೆ ಮಾರ್ಮಿಕವಾಗಿ ಚಿತ್ರಿಸಿದ್ದಾರೆ.

ಕವಿ ಭೀಮನಗೌಡರ ಅವರು ನಿಸರ್ಗ ಚಿತ್ರಣವನ್ನು ಬಳಸಿಕೊಂಡು, ವರ್ತಮಾನದ ಬಿಕ್ಕಟ್ಟುಗಳನ್ನು, ವೈಪರೀತ್ಯಗಳನ್ನು ಅವುಗಳದೇ ಆದ ಸಂಕೇತ, ಪ್ರತಿಮೆ, ಪ್ರತೀಕಗಳ ಮೂಲಕ ಶೋಧಿಸಲು ಹೊರಟಿದ್ದು ಕವಿಯ ಕುತೂಹಲಕ್ಕೆ ಹಿಡಿದ ಕನ್ನಡಿ. ಹೀಗಾಗಿ ನವ್ಯದವರಂತೆ ಸೌಂದರ್ಯವನ್ನು ದೂರಮಾಡಿ, ಆ ಸೌಂದರ್ಯದ ಒಳಗಡಯೇ ಇರುವ ವಿಕಾರಗಳನ್ನು, ವಿಘ್ನಗಳನ್ನು ಕಂಡುಕೊಳ್ಳುವದು ಕವಿ ಭೀಮನಗೌಡರ ಅವರಿಗೂ ಮುಖ್ಯವಾಗುತ್ತದೆ. ಇದೊಂದು ನವೋದಯ-ನವ್ಯದವರಲ್ಲಿಯ ಭಾವ ಪಾತಳಿಯ ವ್ಯತ್ಯಾಸವಾದರೂ ವಿಘ್ನಗಳನ್ನು ಮೀರಿದ್ದು ಸೌಂದರ್ಯವಲ್ಲವೆ? ಇದನ್ನು ಜೀವಪಾತಳಿಯ ಸಹಜ-ಸರಳವೆಂದು ಎರಡೂ ಘಟ್ಟಗಳು ಅರಿಯದೇ ಹೋದದ್ದೂ ಇದೆ. ಹಾಗೆ ನೋಡಿದರೆ ನವೋದಯವರ ನಿಲುವೇ ನಿಜಕ್ಕೂ ಹತ್ತಿರವೆನಿಸುತ್ತದೆ. ಆದರೆ ಕವಿ ಭೀಮನಗೌಡರ ಅವರು ನವೋದಯದ ಸತ್ವವನ್ನು ಇಟ್ಟುಕೊಂಡೂ ನವ್ಯದ ಸಂಕೀರ್ಣತೆಯನ್ನು ಎದುರಿಸಲು ಹೊರಟಿದ್ದು ಜೀವನದ ಗಂಭೀರತೆಯನ್ನು ರುಜುವಾತುಗೊಳಿಸುತ್ತದೆ.

ಕವಿ ಭೀಮನೌಡರು ಪ್ರಕೃತಿಯ ಸಹಜ ಚಿತ್ರಣವನ್ನು ಬಳಸಿಕೊಂಡು, ಸಂಕೀರ್ಣಮಯವಾದ ಬದುಕಿಗೊಂದು ಮುನ್ನಡೆಯಲು ಬೇಕಾದ ವ್ಯವಸ್ಥೆಯನ್ನು ಯಾವರೀತಿಯಲ್ಲಿ ಅದನ್ನು ಕಂಡು ಕೊಳ್ಳಬೇಕು ಎಂಬುದನ್ನು ಕವಿ ಮುಂತಾದ ನಿಸರ್ಗದ, ಪ್ರತಿಮೆ, ಸಂಕೇತಗಳನ್ನು ಪೂರಕವಾಗಿ ಇಟ್ಟುಕೊಂಡು ಕವಿ ಕಾವ್ಯ ರಚಿಸಿದ್ದು ಗಮನರ್ಹವಾಗಿದೆ.

೩.೪ ಪ್ರೇಮ-ಕಾಮ

ಪ್ರೇಮ-ಕಾಮದಂಥ ವಸ್ತುಗಳು ಲೌಕಿಕ ಅಭಿವ್ಯಕ್ತಿಯಾದಂತೆ, ಅಲೌಕಿಕ ಅಭಿವ್ಯಕ್ತಿಯಾಗಿಯೂ ವರ್ಣನೆಗೊಂಡಿರುವದನ್ನು ಕಾಣುತ್ತೇವೆ. ಬೇಂದ್ರೆ, ಕುವೆಂಪು ಅಂಥ ಹಿರಿಯ ಕವಿಗಳಲ್ಲಿ ಇಂಥ ಆಶಯಗಳ ಆವಿಷ್ಕಾರಗಳನ್ನು ನೋಡಬಹುದು. ಆದರೆ

[illegible]

ಪಾಶ್ಚಾತ್ಯ–ಪೌರ್ವಾತ್ಯ ಕವಿಗಳ ಪರಿಕಲ್ಪನೆಯಲ್ಲಿ ಪ್ರೇಮ–ಕಾಮ–ಪ್ರೀತಿಯಂಥ ಅಂಶಗಳು ಭಿನ್ನ ನೆಲೆಯಲ್ಲಿಯೇ ವ್ಯಕ್ತಗೊಂಡಿವೆ. ಭಾರತೀಯರು ಮದುವೆಯಾಗಿ ಪ್ರೀತಿಸುವ ಬಗೆ, ಪಾಶ್ಚಾತ್ಯರು ಪ್ರೀತಿಸಿ ಮದುವೆಯಾಗುವ ರೀತಿ ಬೇರೆ ನಿಲುವಿನಿಂದಲೇ ಕೂಡಿಕೊಂಡಿದ್ದು. ಭಾರತೀಯ ಈ ಸೌಂದರ್ಯ ಪ್ರಜ್ಞೆ ಬರೀ ಕಾಮದಂಥ ವಿಕೃತಿಗೆ ತಿರುಗಿದ್ದು ಪಾಶ್ಚಾತ್ಯರ ಪ್ರಭಾವದಿಂದ ಎನ್ನುವದು ಸುಳ್ಳಲ್ಲ. ಪ್ರೇಮಕ್ಕಿಂತಲೂ ಕಾಮದಂಥ ವಸ್ತು ನವ್ಯದವರಲ್ಲಿ ಅಭಿವ್ಯಕ್ತಿಗೊಂಡಿದ್ದನ್ನು ನೋಡಿದರೆ ಅರ್ಥವಾಗುವ ಸಂಗತಿ. ಹೀಗಾಗಿ ಹೆಣ್ಣು ಒಂದು ಶೃಂಗಾರದ ಒಂದು ಪ್ರತೀಕವಾಗುವ ಬದಲು ಮನಸ್ಸಿನ ವಿಕೃತಿಯ ರೂಪವಾದದ್ದರಲ್ಲಿ ಮಾನವಿಕ ಅಧ್ಯಯನಗಳ ಸಾಕ್ಷಿಗಳಿವೆ. ಸೌಂದರ್ಯವೆಂಬ ತತ್ತ್ವ ನವೋದಯದವರಲ್ಲಿ ಪ್ರೇಮ–ಪ್ರೀತಿಯಾದದ್ದು ನವ್ಯದವರಲ್ಲಿ ಕೇವಲ ತೃಷೆಯನ್ನು ಶಮನಗೊಳಿಸುವ ಮಾರುಕಟ್ಟೆಯ ಸರಕಾದದ್ದು ವಿಪರ್ಯಾಸ. ತರಕಾರಿ ಸಾಮಾನುಗಳಂತೆ ಹೆಣ್ಣಿನ ಸೌಂದರ್ಯದ ಭಂಗಿಯನ್ನು ಚಿತ್ರಿಸಲು ಹೊರಟಿದ್ದು, ಅಲ್ಲದೆ ವ್ಯಯಕ್ತಿಕ ತುಮುಲಗಳನ್ನು ತೀರಿಸಿಕೊಳ್ಳುವ ಇಚ್ಚೆಯಲ್ಲಿ ಕಾಮದ ಘಾಟು ಹೊರಡಿಸಿದ್ದು ನವ್ಯದ ದೊಡ್ಡ ಮಿತಿಯೇ ಆಗಿ ಪರಿಣಮಿಸಿದ್ದು ಈಗ ಚರಿತ್ರೆಯಾದ ಸಂಗತಿ. ಆದರೆ ಇಲ್ಲಿ ಮುಖ್ಯವಾಗಿ ಹೇಳಬೇಕಾದದ್ದು ಭೀಮನಗೌಡರ ಅವರು ಪ್ರೇಮದಂಥ ಕೋಮಲ ಆಶಯಗಳನ್ನು ಬರೀ ಕಾಮದ ಕಣ್ಣಿನಿಂದ ನೋಡಲಿಲ್ಲ. ಬದಲಾಗಿ ಸೌಂದರ್ಯ ಪ್ರಜ್ಞೆಯಲ್ಲಿಯೇ ಪ್ರೇಮವನ್ನು ಅರಳಿಸುವ ಬಗ್ಗೆ ಎಲ್ಲಿಯೂ ತನ್ನ ಆದರ್ಶದ ಎಚ್ಚರಿಕೆಯನ್ನು ಕಳೆದುಕೊಳ್ಳುವದಿಲ್ಲ.

“ಈಸಲೇ ನೀರಲ್ಲಿ ಮೀನವಾಗಿ
ಹಾವು ಇರಬಹುದು
ಜಿಗಿಯಲೇ ಮರದಲ್ಲಿ ಮಂಗವಾಗಿ
ಕೆಳಗೆ ಬೀಳಬಹುದು
ಹಾರಲೇ ಮೇಲೆ ಪಾರಿವಾಳವಾಗಿ
ಗಿಡುಗ ಇರಬಹುದು
ಮರಳಿ ಬಂದರೂ ಅದೇ ಹರಯ ಹುಡುಗಿ
ಕೊಂಕು ನಕ್ಕಂತೆ
ಅದೇ ಕೆರೆ ಅದೇ ಗಿಡ ಅದೇ ಗಾಳಿ
ಕೈಮಾಡಿ ಕರೆದಂತೆ.” (ಬದುಕು ಮತ್ತು ನಾನು)[೩೭]

ಈ ಕವನದಲ್ಲಿ ಭೀತಿಯ ಅಭಿವ್ಯಕ್ತಿ ಇದೆ ಪ್ರೇಮಕ್ಕೆ ಹಾತೊರೆಯುವ ಲವಲವಿಕೆ ಇದೆ. ಉತ್ಸುಕತೆಯು ರಂಜಕತೆಯಿಂದ ಮೂಡಿದೆ. ಆದರೆ ಹಾವು ಎನ್ನುವದು ಒಂದು ಕಾಮದ ಸಂಕೇತವಾಗಿ ಮೂಡಿ ಬರುತ್ತದೆ. ಆದರೆ ಕವಿ ಸುವ್ಯವಸ್ಥಿತವಾದ ಒಂದು ರೂಪವನ್ನು ಇಲ್ಲಿ ಸ್ಪಷ್ಟಪಡಿಸುವದಿಲ್ಲ. ಹೀಗಾಗಿ ನಮ್ಮ ಆಲೋಚನೆಗೆ ಈ ಕಾವ್ಯ

ಮನಸ್ಸಿನ ತಳಮಳ, ಸಂಕೋಚದ ಭಾವನೆಯು ಸ್ಫುಟವಾಗಿ ಹುಟ್ಟಿಕೊಳ್ಳುವ ರೀತಿ ವಿಶಿಷ್ಟವಾಗಿದೆ.

"ಗುದ್ದಾಡಿ ಗುದಮುರಿಗೆ ಹಾಕಿ
ಎದೆಯೊಳಗೆ ಕೇಕೆ ಹೊಡೆದು
ಭಿಲ್ಲೆಂದು ಬಯಕೆ ಕಣ್ಣಾಗ ಪುಟಿದು
ನಿನ್ನ ಮುಖಕ್ಕೆ ಜಿಗದು ಮೈಯಲ್ಲಾ ತೊಳೆದಾಗ
ನೀ ನಕ್ಕಿ
ಮತ್ತೂ ನಕ್ಕಿ
ನಕ್ಕದ್ದು ಚಕ್ ಎಂದು ಕೇಸರಾಗ
ಸಿಕ್ಕು ಮತ್ತೆ ನಗುತ್ತಿದೆ" (ಬರಿ ಅನಿಸಿಕೆ)[೩೮]

ಈ ಕವನದಲ್ಲಿ ಹೃದಯಸ್ಪರ್ಶವಾದ ವಿಚಾರವಿದೆ. ಕಾಮ ಭಾವನೆಯು ಚಿಗುರುವ ಎಲೆಯಂತೆ ಚಿಗುರುವ ದಾಹವನ್ನು ಮನಸ್ಸಿನ ಅಂತರ್ಮುಖಿಯಲ್ಲಿ ನಿರಂತರ ನಡೆಯುವ ತಾಕಲಾಟವಿದೆ. ಅದನ್ನು ನಿಯಂತ್ರಿಸುವ ಕ್ರಮ ಮತ್ತು ಅದು ಒರತೆಯ ನೀರಿನಂತೆ ಜಿನುಗುವ ಕ್ರಿಯೆಯನ್ನು, ಕವಿ ಸೊಗಸಾದ ರೀತಿಯಲ್ಲಿ ಪ್ರತಿ ಸಾಲಿನಲ್ಲಿ ಅದರ ರಂಜಕತೆಯನ್ನು ಪ್ರತಿಬಿಂಬಿಸಿದ್ದಾರೆ.

"ಎಲ್ಲಾ ಬರಿ ಅನಿಸಿಕೆ
ಬಯಲ ರವುದೆಯಂಥ ಅನಿಸಿಕೆ
ಉರಿ ಹಚ್ಚಿ ಸುಟ್ಟು ಬಿಡಲೇ
ಇದೂ ಬರಿ ಅನಿಸಿಕೆ." (ಬರಿ ಅನಿಸಿಕೆ)[೩೯]

ಕವನದ ಶೀರ್ಷಿಕೆಯನ್ನು ನೋಡಿದರೆ ಬರಿಅನಿಸುವದು ನಮ್ಮ ಮನಸ್ಸಿಗೆ ಅಸ್ಪಷ್ಟತೆ. ಆದರೆ ಒಳನೋಟದಲ್ಲಿ ಪ್ರೀತಿಯ ಹುಡಕಾಟವಿದೆ, ಅದಕ್ಕೆ ಕವಿ ಇಲ್ಲಿ ಒಂದು ರೀತಿಯಾದ ಪುಷ್ಟೀಕರಿಸುವ ಕೆಲಸ ಮಾಡಿದ್ದಾರೆ. ಅದು ಗಾಳಿ ಬೀಸಿದರೆ ಹೋಗುವ ದೀಪವಲ್ಲ ಅದು ನಿರಂತರತೆಯ ಬೆಳಕು, ಎಂದು ಕವನದ ಹಿಂದಿನ ವಾಚ್ಯಾರ್ಥವನ್ನು ಗಮನಿಸಬೇಕಾಗುತ್ತದೆ.

"ಸಂಜೆ ಮುಂಜಾವುಗಳ ಚೈತನ್ಯ ತುಂಬಿ
ಚೊಕ್ಕ ಚಿನ್ನ ಬಣ್ಣದ ಜಿಂಕಿ
ಜಿಗಿ ಜಿಗಿಯುತ್ತ ಆಗಾಗ—ಆಗಾಗ ಬಂದಿ,
ನಿಂತಿ,
ಕುಂತಿ
ಈ ನನ್ನ ಮೆದೆಳ ಅಂಗಳದಲ್ಲಿ

ಮತ್ತೆ ಎದ್ದೆದ್ದು ಹೋಗಿದ್ದಿ
ಈಗಂತು ತಳವೂರಿಯ ಇದ್ದೀ." (ತುಡುಗಿ)[೪೦]

ಕವಿಯು ಈ ಕವನದಲ್ಲಿ ಪ್ರೀತಿ ಬೆಳೆಯುವ ರೂಪ, ಮತ್ತು ಅದಕ್ಕೊಂದು ಹೊಸದಾದ ತನ್ನದೆಯಾದ ಅಸ್ತಿತ್ವ ಕಂಡು ಕೊಳ್ಳುವ ಬಗೆ ವಿಚಿತ್ರವಾಗಿದೆ. ಕವಿ ಇಲ್ಲಿ ಅದರ ಹರಿವು ಎಷ್ಟು ವಿಶಾಲವಾಗಿದೆ ಅದರ ಸತ್ವಯುತವಾದ ಶಕ್ತಿ ಆಗಾಧವಾಗಿದೆ ಎಂದು ಹೇಳುವಲ್ಲಿ ಕವಿತೆಗೊಂದು ಹೊಸ ಚೈತನ್ಯ ತುಂಬುವರಿಂದ ಪ್ರೀತಿ ನೆಲೆಸುವಿಕೆ–ದೂರಾಗುವಿಕೆಯನ್ನು ಅದರ ಸಾಮ್ಯತೆಯನ್ನು ಹುಡುಕುವಲ್ಲಿ ಕವನ ಚಿತ್ರಿತವಾಗಿ ಮೂಡಿ ಬಂದಿದೆ.

ಕವಿ ಪ್ರೇಮ–ಕಾಮದ ನೆಲೆಯನ್ನು ಹುಡುಕುವದರೊಂದಿಗೆ ಅದು ಹುಟ್ಟುವ ರೀತಿ ಚಿಗುರುವ ದಾಹ ಹೇಗಿದೆ ಎಂಬುದನ್ನು ಹೀಗೆ ವರ್ಣಿಸಿದ್ದಾರೆ.

"ಬಂತು ಬಂತು
ಬಂತು ಓಣಿಯ ತುಂಬ ಇಡೀ
ಅಗಸಿಯ ತುಂಬ
ಕುಲಕುಲ ನಗುತ್ತ ಗುಲಾಬಿಯಂತೆ
ಕಣ್ಣ ಕಿಸಿಯುತ್ತ ಮುಳ್ಳಿನಂತೆ ಕೆಂಡಕಾರುತ್ತ
ಬಂತು ಹಂದಿಯ ಹಾಗೆ ಹಕ್ಕಿಯ ಹಾಗೆ
ಗಾಳಿಯ ಹಾಗೆ ಸುಂಟರ ಗಾಳಿಯ ಹಾಗೆ
ನಾಯಿಯ ಹಾಗೆ ಹಸಿವೆಯ ಹಾಗೆ
ಬಂತು ನಿನ್ನ ಜೊತೆ ಮಾತಾಡುವಾಗ
ನಿನ್ನ ಮೈ ಕೈ ದಟ್ಟಿಸುವಾಗ!" (ಪೆದ್ದ)[೪೧]

ಸೌಂದರ್ಯ ಯಾವಾಗಲೂ ನೋಡುವವರ ಕಣ್ಣಲ್ಲಿ ಇರುತ್ತದೆ ಎಂಬ ಮಾತು ನಿಜವೆನಿಸುತ್ತದೆ. ಕವಿ ಇಲ್ಲಿ ಒಂದು ಹೆಣ್ಣಿನ ಸೌಂದರ್ಯವನ್ನು ನೋಡುವಾಗ ಅದನ್ನು ಸವಿಯುವಾಗ ಈ ಅವ್ಯಕ್ತವಾದ ಪ್ರೇಮ ಹೇಗೆ ಅಂಕುರಿಸುತ್ತದೆ. ಅದು ನನ್ನವರು ತನ್ನವರು ಎಂಬ ಅರಿವೆ ಇರುವದಿಲ್ಲ ಅದು ಪರಸ್ಪರರ ಮಧ್ಯ ಹುಟ್ಟುತ್ತದೆ ಮತ್ತೆ ಮಾಯವಾಗುತ್ತದೆ. ಅದು ನೀರಿನ ಅಲೆಯಂತೆ ಅಪ್ಪಳಿಸುತ್ತಿರುತ್ತದೆ. ಹಕ್ಕಿ, ನಾಯಿ, ಹಂದಿ ಇವೆಲ್ಲವೂ ಪ್ರೇಮದ ಅರಿವು ಮೂಡಿಸುವವರ ಹಿನ್ನಲೆಯಾಗಿ ಬರುತ್ತವೆ.

ಭೀಮನಗೌಡರು ನಾಟಕೀಯವಾದ ಪ್ರೇಮದ ಪ್ರಸಂಗವನ್ನು ಈ ಕವನದಲ್ಲಿ ಹೀಗೆ ಚಿತ್ರಿಸಿದ್ದಾರೆ.

"ಓದುವದು ಕೇಳಬಾರೇ ಎಂದು
ಕೈ ಹಿಡಿಯ ಹೋದರೆ ನನ್ನ ತಲೆ ಕೆಟ್ಟಿದೆಯಂತೆ
ಒಲ್ಲೆಂದು ಒಲೆ ಮುಂದೆ ಕುಳಿತರೆ ಮಾಡಲೇನು

ಕಣ್ಣ ಪಿಳುಕಿಸುವ
ಆ ವಿದ್ಯಾರ್ಥಿನಿಯ ಚಂದ
ಮುಖದಲ್ಲಿ ಮೂಡುವ ಆ ಬೆಳಗು ಚೆಂದ."
(ಚೆಂದ)[೪೨]

ಕವಿ ಈ ಕವನದಲ್ಲಿ ಪ್ರೇಮದ ಉತ್ಸುಕತೆಯ ಭಾವನೆಯ ಒಳನೋಟದಲ್ಲಿ ಏಕಾಗ್ರತೆ ಕಳೆದುಕೊಂಡ ವ್ಯಕ್ತಿಯ ಚಿತ್ರಣ ಗಂಭೀರವಾಗಿದೆ. ಮನಸ್ಸು, ಹೃದಯದ ಗಟ್ಟಿತನವಿರಲಿ, ಮತ್ತು ಚಿತ್ತವೃತ್ತಿಯು ಸಂಯಮ ಕಳೆದುಕೊಳ್ಳದೆ ಏಕಾಗ್ರತೆ ಇರಲಿ, ಸಂತೋಷದಿಂದ ಮಾಡುವ ಕೆಲಸ ಮಹತ್ವಪೂರ್ಣವಾಗಿರುತ್ತದೆ. ಎಂಬುದು ಕವಿಯ ಕವನದ ಹಿಂದಿನ ಧ್ವನಿಯನ್ನ ಆಲೋಚಿಸಿದಾಗ, ಕೊನೆಯ ಸಾಲಿನಲ್ಲಿ ಅದರ ಅರ್ಥ ಸ್ಪಷ್ಟವಾಗುತ್ತದೆ.

"ಮೀನುಗಣ್ಣಿನಲ್ಲಿ ತೇಲಿಸಿದ್ದು
ಕಿಸಗಣ್ಣ ದಾಸಯ್ಯ ಬಾಗಿಲಿಗೆ ಬಂದಾಗ
ಗೋಪಾಳಕ್ಕೆ ತನ್ನ ರೊಟ್ಟಿ ನೀಡಿದ್ದು
ಒಟ್ಟು ನಿನ್ನ ತಲೆದಿಂಬು ಮಾಡಿದ್ದು." (ನಗ್ತಾನ ಮಗ)[೪೩]

ಪ್ರೇಮದ ರಹಸ್ಯವನ್ನು ಭೇದಿಸುವದು ಕಷ್ಟದ ಕೆಲಸ. 'ಮೀನು' ಎಂಬ ಅರ್ಥವನ್ನು ಸಾಂಕೇತಿಕ ರೂಪದಲ್ಲಿ ಕವಿಯು ಹಿಡಿದಿರಿಸಿದ್ದು ತುಂಬ ಅರ್ಥ ಗರ್ಭಿತವಾಗಿದೆ. ಅದು ಹುಟ್ಟುವ ಬಗೆಯನ್ನು ಹಾಗೂ ಅದು ಮುಂದೆ ಕಾಮದ ಭಾವನೆಯ ತಾಳಕ್ಕೆ, ಅದು ತನ್ನ ಶಿಲೆಯನ್ನು ವೃದ್ಧಿಸಿಕೊಳ್ಳುವ ದಿಟ್ಟತನವಿದೆ.

"ಯಾವು ಅಡಿಗಡಿಗ ಸೀತು ಶಿವಾ ಶೀವಾ,
ಕೆಮ್ಮಿ ಕ್ಯಾಕರಿಸಿ ಹಾ ಪ್ರಿಯೆ ಎನ್ನುತ್ತಾವೋ
ಹಾಗೇ ಜ್ವರ ಬಂದು ಹಾಸಿಗೆ ಹಿಡಿಯುತ್ತಾವೋ
ಯಾವು ಮುಂದಿನ ಜಿಡ್ಡ ಬಾಲಕ್ಕೆ ಮೂಗು ತುರುಕಿ
ಮೂಗಗುಂಟ ಗಂಗೆ ಪುಟಸುತ್ತ ಕಮ್ರೇಡರ ಜೊತೆ
ತೆಪ್ಪಗೆ ಸಾಗುತ್ತಾವೋ
ಯಾವು ತಲೆ ತಿರುಗಿ ಅಯ್ಯೋ ಆಯಿ
ಆವೋ ಬಾಯಿ ಬಾಬಾ ಎಂದು
ನೆಲಕ್ಕೆ ಬೀಳುತ್ತಾವೋ ಬಿದ್ದು ಏಳುತ್ತಾವೋ
ಎದ್ದು ಬೀಳೂತ್ತಾವೋ." (ಬಿಡದೀ ಮಾಯೆ)[೪೪]

ಪ್ರೇಮದ ಜ್ವರ ಬಹಳಷ್ಟು ಅಪಾಯಕಾರಿ ಎಂದು ಹೇಳುವ ಮಾತು ಸತ್ಯವೆನಿಸುತ್ತದೆ. ಹಾಳುಸೆಗಡಿಯನ್ನು ಸಂಕೇತವಾದ ಅರ್ಥದಲ್ಲಿಟ್ಟುಕೊಂಡು, 'ಜ್ವರ' ಎಂಬ

ಶಬ್ದ ಪ್ರೇಮದ ಹುಚ್ಚಿನಿಂದ ತಪ್ಪಿಸಿಕೊಳ್ಳಲಾರದು. ಮನಸ್ಸಿನ ಒಂದು ರೀತಿಯಾದ ವೇದನೆಯ ರೂಪ ಇಲ್ಲಿ ಚಾಚಿಕೊಂಡಿದೆ. ರೇಷ್ಮೆ ಹುಳು ತಾನೇ ತನ್ನ ಬಾಯಿ ರಸದಿಂದ ಹೆಣಿದಿರುವ ಬಲೆಯಲ್ಲಿ ತಾನೇ ಬಿದ್ದು ಹೊರಬರಲಾರದೆ ಬಂಧನದಲ್ಲಿ ಬಂದಿಯಾಗುತ್ತದೆ. ಪ್ರೀತಿಯಲ್ಲಿ ಸೋಲು–ಗೆಲವು ಇರುವದು ಅದನ್ನು ಜಯಸುವ ಹೋರಾಟ ಮಾಡುವ ನಿರಂತರತೆಯನ್ನು ಕವಿ ಇಲ್ಲಿ ಪ್ರತಿಬಿಂಬಿಸುತ್ತಾರೆ. ಆದರೆ ಕವನದ ಶಿರ್ಷಿಕೆಯನ್ನು ನೋಡಿದಾಗಲೇ ಇಡೀ ಕವನದ ಒಂದು ತಿರುಳು ಅದರಲ್ಲಿ ರಹಸ್ಯಮಯವಾಗಿ ಕಾಣಿಸಿಕೊಳ್ಳುತ್ತದೆ.

"ನೋಡಿದ ಅಜ್ಜ ದರದರ ಎಳೆದುಕೊಂಡು
ಬಯ್ಯುತ್ತ
ಹೀಗೆ ಈಸಾಡುವಾಗ ಈರ್‍ಯಾ
ಹೇಗೆ ಕಾಲು ಮುರಿದು ಕೊಂಡ,
ಮಾರ್‍ಯಾ ಮೀನದ ಬಾಯಲ್ಲಿ ಮಾಯವಾದ
ಪಾರ್‍ಯಾ ದೆವ್ವಕ್ಕೆ ಬಲಿಯಾದ
ಇತ್ಯಾದಿ ವಿವರಿಸಿ ಮತ್ತೆ ಪ್ರತಿ ಬಂಧಿಸಿಟ್ಟ."

(ದಂಡೆಯಲ್ಲಿ ಈಸುವವನು)[೪೫]

ಕೆಲವೊಂದು ಸಂದರ್ಭದಲ್ಲಿ ಮನುಷ್ಯ ಹೇಗೆ ವರ್ತನೆ ಮಾಡುತ್ತಿರುತ್ತಾನೆ, ಎಂಬುದು ತಿಳಿಯುವದು ಕಷ್ಟ ಪ್ರೇಮ ಸೆಳೆದುಕೊಳ್ಳುವ ನೋಟವು ಹೇಗೆ ಇರುತ್ತದೆ. ಮೀನ ಇದು ಪ್ರೇಮದ ವಸ್ತುವಾಗಿದೆ. ಕವನದ ಪ್ರತಿ ಸಾಲಿನಲ್ಲಿ ಉಪದೇಶ ಮಾತಿನ ಹಿನ್ನಲೆಯಲ್ಲಿ ಬದುಕನ್ನು ದುರಂತಮಯದ ಕಡೆಗೆ ಸಾಗುವ ಚಿತ್ರಣವನ್ನು ಕವಿ ಸುಂದರವಾಗಿ ವಿವರಿಸಿದ್ದಾನೆ. ಆದರೆ ಪ್ರೇಮದ ಒಂದು ಸ್ಥಿತಿ ಗತಿಯ ಬಗ್ಗೆ ಮನವರಿಕೆಯ ಮಾತುಗಳು ನಮ್ಮ ಮನಸ್ಸಿನ ಆಳವನ್ನು ತಟ್ಟುತ್ತವೆ.

ಮನಸ್ಸಿನ ಸ್ವಭಾವದ ಚಿತ್ರಣವನ್ನು ಕವಿ ಹೀಗೆ ಪ್ರಸ್ತಾಪಿಸುತ್ತಾರೆ.

"ಪುಸ್ತಕ ತೆರೆದೆ
ಅದೇ ಕಥೆ:
ಹಿತ್ತಲಲ್ಲಿ ಕುಣಿ
ಕುಣಿ ಕುಣಿಗೆ ಬೀಜ
ದಿನದಿನಕೆ ಮೊಳೆತು, ಕುಡಿ ಎಲೆ ಎಸಳು
ಬಳ್ಳಿ ಸಾಗಿತ್ತು ಸುತ್ತಲೂ,
ಮಧ್ಯ ಬಂದಾಗ ಗದ್ದಲಕೆ ಮಗನು,
ಸಾಗಿತ್ತು ಗೋಡೆಯ ಗುದ್ದಿಗೆ
ಹೆಗ್ಗಣ ಹಲ್ಲಿಗೆ,
ಲೇ ಲತ್ತೆ ಬಿದ್ದಾವು.

ಹೋಗಾಚೆ ಸುಮ್ಮನೆ
ಅದೇ ಕಥೆ." (ಅದೇ ಕಥೆ)[೪೬]

ಈ ಕವಿತೆಯಲ್ಲಿ ಪ್ರೇಮದ ಛಾಯೆಯು ತುಂಬ ಸೊಗಸಾಗಿ ಮೂಡಿ ಬರುತ್ತದೆ. ನಾವು ಹೇಗೆ ಬೆಳೆಯುತ್ತೇವೆ ಜೀನವದಲ್ಲಿ ಹಾಗೆ ಹೊಸ ಹೊಸ, ಬಯಕೆಗಳು, ಆಸೆ ಆಕಾಂಕ್ಷೆಗಳು ಬೆಳೆಯುತ್ತವೆ. ಅದಕ್ಕೆ ಕವಿ ಇಲ್ಲಿ ಜಗತ್ತಿನ ಸುತ್ತಲಿನ ಜನರು ಪ್ರೇಮದ ಗೂಢಾಚಾರದಲ್ಲಿ ಸಿಕ್ಕು ನರಳುವ ಚಿತ್ಕಾರದ ಬಗ್ಗೆ ಧ್ವನಿಪೂರ್ಣವಾಗಿದೆ. ಆದರೆ ಪ್ರೇಮ-ಕಾಮವನ್ನು ಹತ್ತಿಕ್ಕುವ, ಭಯ-ಭೀತಿ ಈ ಕವನದ ಕೊನೆಗೆ ಸಾಲಿನಲ್ಲಿ ರಹಸ್ಯ ಬಿಚ್ಚಿಕೊಳ್ಳುತ್ತದೆ.

ಪ್ರೇಮವೆಂಬ ಶಬ್ದ ಅಮೂರ್ತವಾದದ್ದು ಇದರ ಆರಂಭ ಅಂತ್ಯ ವಿಚಿತ್ರವಾದದು, ಆಕರ್ಷಣೆ, ವಿಕರ್ಷಣೆಯ ರೂಪ ಇಲ್ಲಿ ಅಡಗಿಕೊಂಡಿದೆ. ನಲ್ಲ ನಲ್ಲೆಯರ ಮಧ್ಯ ರಸಿಕತೆಯ ಭಾವನೆಯು ಮೂಡುವ ಹಂತದಲ್ಲಿ ಅದು ಬೆಸೆದುಕೊಂಡಿಲ್ಲ ಕಳಚಿಕೊಂಡಿದೆ ಆದರೆ ನಲ್ಲನು ವಿಚಲಿತನಾಗಲಿಲ್ಲ. ಪ್ರಯತ್ನವಾದಿ, ಮನಸ್ಸು ಬಂಡೆಕಲ್ಲಿನಂತೆ ಮಾಡಿಕೊಂಡು ದುಂಬಾಲು ಬೀಳುವದು ಅವನ ಜಾಯಮಾನ ಆದರೂ ಕೊನೆಯವರೆಗೂ ಎರಡು ಹೃದಯಗಳ ಸಂಗಮವಾಗಲಿಲ್ಲ ಎಂದು ಕವಿ ಕವನದ ಕೊನೆಯಲ್ಲಿ ಆಶ್ಚರ್ಯವನ್ನ ವ್ಯಕ್ತಪಡಿಸುತ್ತಾನೆ.

ಒಟ್ಟಾರೆ ಭೀಮನಗೌಡರ ಅವರ ಕಾವ್ಯದಲ್ಲಿ ಬರುವ ಪ್ರೇಮ-ಕಾಮ ಕುರಿತಂತೆ ಅಭಿವ್ಯಕ್ತಿಯ ಧೋರಣೆಯ ಹೆಜ್ಜೆಗಳನ್ನು ಅವಲೋಕಿಸಿದಾಗ, ನೈಸರ್ಗಿಕ, ಸಮರ್ಥ, ಸಂಕೇತ, ಪ್ರತಿಮೆಗಳನ್ನು ಬಳಸಿ ನವೋದಯ ಕವಿಗಳಿಗಿಂತಲೂ ಪೂರ್ಣ ಭಿನ್ನವಾಗಿ ಅತ್ಯಂತ ಸಂಯಮದಿಂದ ನಿರೂಪಿತವಾಗಿರುವುದು ಇಲ್ಲಿಯ ಕವಿತೆಯ ಆಶೆಯಗಳಲ್ಲಿ ಕಾಣುತ್ತದೆ.

ಅಡಿ ಟಿಪ್ಪಣಿಗಳು

೧. ತುಡುಗಿ. ಎಚ್.ಎಸ್.ಭೀಮನಗೌಡರ ಪು–೧೯ ಅಕ್ಷರ ಪ್ರಕಾಶನ ಸಾಗರ. ೧೯೭೩

೨. ತುಡುಗಿ. ಎಚ್.ಎಸ್.ಭೀಮನಗೌಡರ ಪು–೨೧ ಅಕ್ಷರ ಪ್ರಕಾಶನ ಸಾಗರ. ೧೯೭೩

೩. ತುಡುಗಿ. ಎಚ್.ಎಸ್.ಭೀಮನಗೌಡರ ಪು–೨೪ ಅಕ್ಷರ ಪ್ರಕಾಶನ ಸಾಗರ. ೧೯೭೩

೪. ತುಡುಗಿ. ಎಚ್.ಎಸ್.ಭೀಮನಗೌಡರ ಪು–೪೭ ಅಕ್ಷರ ಪ್ರಕಾಶನ ಸಾಗರ. ೧೯೭೩

೫. ಹುಡುಗಾಟದ ಹಾಡು. ಎಚ್.ಎಸ್.ಭೀಮನಗೌಡರ ಪು–೨೯ ಲೋಕ ವಿದ್ಯಾ ಪ್ರಕಾಶನ ಸಂಕೇಶ್ವರ ೧೯೭೭

೬. ನೆಲ ಹಿಡಿಯುವ ಮೊದಲು, ಎಚ್.ಎಸ್.ಭೀಮನಗೌಡರ ಪು–೨೬ ಸ್ನೇಹಾ ಪ್ರಕಾಶನ ಬೆಳಗಾವಿ ೧೯೮೪

೭. ನೆಲ ಹಿಡಿಯುವ ಮೊದಲು, ಎಚ್.ಎಸ್.ಭೀಮನಗೌಡರ ಪು–೨೯ ಸ್ನೇಹಾ ಪ್ರಕಾಶನ ಬೆಳಗಾವಿ ೧೯೮೪

೮. ತುಡುಗಿ ಎಚ್.ಎಸ್.ಭೀಮನಗೌಡರ ಪು–೫೨ ಅಕ್ಷರ ಪ್ರಕಾಶನ ಸಾಗರ– ೧೯೭೩

೯. ಹುಡುಗಾಟದ ಹಾಡು ಎಚ್. ಎಸ್. ಭೀಮನಗೌಡರ ಪು–೮ ಲೋಕ ವಿದ್ಯಾ ಪ್ರಕಾಶನ ಸಂಕೇಶ್ವರ ೧೯೭೭

೧೦.ಹುಡುಗಾಟದ ಹಾಡು ಎಚ್.ಎಸ್.ಭೀಮನಗೌಡರ ಪು–೨೦ ಲೋಕ ವಿದ್ಯಾ ಪ್ರಕಾಶನ ಸಂಕೇಶ್ವರ ೧೯೭೭

೧೧.ಹುಡುಗಾಟದ ಹಾಡು ಎಚ್.ಎಸ್.ಭೀಮನಗೌಡರ ಪು–೨೭ ಲೋಕ ವಿದ್ಯಾ ಪ್ರಕಾಶನ ಸಂಕೇಶ್ವರ ೧೯೭೭

೧೨.ನೆಲ ಹಿಡಿಯುವ ಮೊದಲು ಎಚ್.ಎಸ್.ಭೀಮನಗೌಡರ. ಪು–೩೭ ಸ್ನೇಹ ಪ್ರಕಾಶನ ಬೆಳಗಾಂವಿ. ೧೯೮೪

೧೩.ಹುಡುಗಾಟದ ಹಾಡು. ಎಚ್.ಎಸ್.ಭೀಮನಗೌಡರ. ಪು–೩೧. ಲೋಕ ವಿದ್ಯಾ ಪ್ರಕಾಶನ ಸಂಕೇಶ್ವರ. ೧೯೭೭.

೧೪.ಹುಡುಗಾಟದ ಹಾಡು. ಎಚ್.ಎಸ್.ಭೀಮನಗೌಡರ. ಪು–೩೩. ಲೋಕ ವಿದ್ಯಾ ಪ್ರಕಾಶನ. ಸಂಕೇಶ್ವರ. ೧೯೭೭.

೧೫.ನೆಲ ಹಿಡಿಯುವ ಮೊದಲು. ಎಚ್.ಎಸ್.ಭೀಮನಗೌಡರ ಪು-೫. ಸ್ನೇಹ ಪ್ರಕಾಶನ. ಬೆಳಗಾವಿ ೧೯೮೪.

೧೬.ಹುಡುಗಾಟದ ಹಾಡು. ಎಚ್.ಎಸ್.ಭೀಮನಗೌಡರ. ಪು-೩. ಲೋಕ ವಿದ್ಯಾ ಪ್ರಕಾಶನ ಸಂಕೇಶ್ವರ. ೧೯೭೭.

೧೭.ತುಡುಗಿ. ಎಚ್.ಎಸ್.ಭೀಮನಗೌಡರ. ಪು-೬೪. ಅಕ್ಷರ ಪ್ರಕಾಶನ ಸಾಗರ. ೧೯೭೩

೧೮.ನೆಲ ಹಿಡಿಯುವ ಮೊದಲು. ಎಚ್.ಎಸ್.ಭೀಮನಗೌಡರ. ಪು-೧೭. ಸ್ನೇಹ ಪ್ರಕಾಶನ ಬೆಳಗಾವಿ ೧೯೮೪

೧೯.ತುಡುಗಿ. ಎಚ್.ಎಸ್.ಭೀಮನಗೌಡರ. ಪು-೩೩. ಅಕ್ಷರ ಪ್ರಕಾಶನ ಸಾಗರ. ೧೯೭೩

೨೦.ಹುಡುಗಾಟದ ಹಾಡು. ಎಚ್.ಎಸ್.ಭೀಮನಗೌಡರ. ಪು-೧೭. ಲೋಕವಿದ್ಯಾ ಪ್ರಕಾಶನ ಸಂಕೇಶ್ವರ. ೧೯೭೭

೨೧. ನೆಲ ಹಿಡಿಯುವ ಮೊದಲು. ಭೀಮನಗೌಡರ. ಪು-೩೩ ಸ್ನೇಹ ಪ್ರಕಾಶನ ಬೆಳಗಾಂವಿ. ೧೯೮೪

೨೨.ಹುಡುಗಾಟದ ಹಾಡು. ಭೀಮನಗೌಡರ. ಪು-೨೧ ಲೋಕ ಪ್ರಕಾಶನ ಸಂಕೇಶ್ವರ. ೧೯೮೪

೨೩.ಹೋಮಾ ಎಂಬ ಪಕ್ಷಿ. ಭೀಮನಗೌಡರ. ಪು-೨೯. ಮಾಲಗತ್ತಿ ಆಫ್ ಸೆಟ್ ಬೆಳಗಾವಿ. ೧೯೮೭

೨೪.ಹುಡುಗಾಟದ ಹಾಡು. ಭೀಮನಗೌಡರ. ಪು-೩೬. ಲೋಕವಿದ್ಯಾ ಪ್ರಕಾಶನ ಸಂಕೇಶ್ವರ. ೧೯೭೭

೨೫. ನೆಲಹಿಡಿಯುವ ಮೊದಲು. ಭೀಮನಗೌಡರ. ಪು-೧ ಸ್ನೇಹ ಪ್ರಕಾಶನ ಬೆಳಗಾಂವಿ. ೧೯೮೪

೨೬.ತುಡುಗಿ. ಭೀಮನಗೌಡರ. ಪು-೩೯. ಅಕ್ಷರ ಪ್ರಕಾಶನ ಸಾಗರ. ೧೯೭೩

೨೭.ಹೋಮಾ ಎಂಬ ಪಕ್ಷಿ. ಭೀಮನಗೌಡರ. ಪು-೨ ಮಾಲಗತ್ತಿ ಆಫ್‌ಸೆಟ್ ಪ್ರಿಂಟರ್ಸ. ಬೆಳಗಾವಿ. ೧೯೮೭.

೨೮.ತುಡುಗಿ. ಎಚ್.ಎಸ್.ಭೀಮನಗೌಡರ. ಪು-೨೨ ಅಕ್ಷರ ಪ್ರಕಾಶನ ಸಾಗರ ೧೯೭೩

೨೯.ತುಡುಗಿ. ಎಚ್.ಎಸ್.ಭೀಮನಗೌಡರ. ಪು-೬೩ ಅಕ್ಷರ ಪ್ರಕಾಶನ ಸಾಗರ ೧೯೭೩

೩೦.ತುಡುಗಿ. ಎಚ್.ಎಸ್.ಭೀಮನಗೌಡರ. ಪು-೩೬ ಅಕ್ಷರ ಪ್ರಕಾಶನ ಸಾಗರ ೧೯೭೩

೩೧.ತುಡುಗಿ. ಎಚ್.ಎಸ್.ಭೀಮನಗೌಡರ. ಪು-೬೦ ಅಕ್ಷರ ಪ್ರಕಾಶನ ಸಾಗರ ೧೯೭೩

೩೨.ಹುಡುಗಾಟದ ಹಾಡು. ಭೀಮನಗೌಡರ. ಪು-೦೯ ಲೋಕ ವಿದ್ಯಾ ಪ್ರಕಾಶನ ಸಂಕೇಶ್ವರ ೧೯೭೭

೩೩.ಹುಡುಗಾಟದ ಹಾಡು. ಭೀಮನಗೌಡರ. ಪು-೧೧ ಲೋಕ ವಿದ್ಯಾ ಪ್ರಕಾಶನ ಸಂಕೇಶ್ವರ ೧೯೭೭

೩೪.ಹುಡುಗಾಟದ ಹಾಡು. ಭೀಮನಗೌಡರ. ಪು-೨೯ ಲೋಕ ವಿದ್ಯಾ ಪ್ರಕಾಶನ ಸಂಕೇಶ್ವರ ೧೯೭೭

೩೫.ಹುಡುಗಾಟದ ಹಾಡು. ಭೀಮನಗೌಡರ. ಪು-೪೧ ಲೋಕ ವಿದ್ಯಾ ಪ್ರಕಾಶನ ಸಂಕೇಶ್ವರ ೧೯೭೭

೩೬.ಹುಡುಗಾಟದ ಹಾಡು. ಭೀಮನಗೌಡರ. ಪು-೫೨ ಲೋಕ ವಿದ್ಯಾ ಪ್ರಕಾಶನ ಸಂಕೇಶ್ವರ ೧೯೭೭

೩೭.ತುಡುಗಿ. ಭೀಮನಗೌಡರ. ಪು-೨೩ ಅಕ್ಷರ ಪ್ರಕಾಶನ ಸಾಗರ ೧೯೭೩

೩೮.ತುಡುಗಿ. ಭೀಮನಗೌಡರ. ಪು-೪೧ ಅಕ್ಷರ ಪ್ರಕಾಶನ ಸಾಗರ ೧೯೭೩

೩೯.ತುಡುಗಿ. ಭೀಮನಗೌಡರ. ಪು-೪೨ ಅಕ್ಷರ ಪ್ರಕಾಶನ ಸಾಗರ ೧೯೭೩

೪೦.ತುಡುಗಿ. ಭೀಮನಗೌಡರ. ಪು-೪೯ ಅಕ್ಷರ ಪ್ರಕಾಶನ ಸಾಗರ ೧೯೭೩

೪೧.ತುಡುಗಿ. ಭೀಮನಗೌಡರ. ಪು-೫೮ ಅಕ್ಷರ ಪ್ರಕಾಶನ ಸಾಗರ ೧೯೭೩

೪೨.ತುಡುಗಿ. ಭೀಮನಗೌಡರ. ಪು-೫೭ ಅಕ್ಷರ ಪ್ರಕಾಶನ ಸಾಗರ ೧೯೭೩

೪೩.ತುಡುಗಿ. ಭೀಮನಗೌಡರ. ಪು-೬೧ ಅಕ್ಷರ ಪ್ರಕಾಶನ ಸಾಗರ ೧೯೭೩

೪೪.ಹುಡುಗಾಟದ ಹಾಡು. ಭೀಮನಗೌಡರ. ಪು-೧ ಲೋಕವಿದ್ಯಾ ಪ್ರಕಾಶನ ಸಂಕೇಶ್ವರ. ೧೯೭೭

೪೫.ಹುಡುಗಾಟದ ಹಾಡು. ಭೀಮನಗೌಡರ. ಪು-೨೨ ಲೋಕವಿದ್ಯಾ ಪ್ರಕಾಶನ ಸಂಕೇಶ್ವರ. ೧೯೭೭

೪೬.ಹುಡುಗಾಟದ ಹಾಡು. ಭೀಮನಗೌಡರ. ಪು-೨೫ ಲೋಕವಿದ್ಯಾ ಪ್ರಕಾಶನ ಸಂಕೇಶ್ವರ. ೧೯೭೭.

ಅಧ್ಯಾಯ ೪

ಭೀಮನಗೌಡರ ಇತರ ಸಾಹಿತ್ಯ ಸಮೀಕ್ಷೆ

ಅಧ್ಯಾಯ ೪

ಭೀಮನಗೌಡರ ಇತರ ಸಾಹಿತ್ಯ ಸಮೀಕ್ಷೆ

ಭೀಮನಗೌಡರ ಸೃಜನಶೀಲ ವ್ಯಕ್ತಿತ್ವ ಹಿರಿದಾದದ್ದು. ಏಕೆಂದರೆ ನಾಲ್ಕು ಕವನ ಸಂಕಲನಗಳನ್ನು ನಮ್ಮ ಕನ್ನಡ ಸಾಹಿತ್ಯಕ್ಕೆ ಕೊಡುಗೆಯಾಗಿ ನೀಡಿದ್ದಾರೆ. ಅವರು ಕ್ರಿಯಾಶೀಲ ಬರಹಗಾರರು ಹೌದು. ಅದಕ್ಕಾಗಿ ಕೆಲವು ಪ್ರಮುಖ ಲೇಖಕರ ಕೃತಿಗಳ ವಿಮರ್ಶೆ ಮಾಡಿದ್ದಾರೆ. ಅವುಗಳು ಪತ್ರಿಕೆಗಳಲ್ಲಿ ಪ್ರಕಟಿತ ಲೇಖನಗಳು. ಅವುಗಳು ಬಿಡಿ ಬಿಡಿಯಾದ ಲೇಖನಗಳಾಗಿ ರೂಪುಗೊಂಡಿವೆ. ಈ ವರೆಗೆ ಸುಮಾರು ೧೫ ಲೇಖನಗಳು ಹೊರ ಬಂದಿವೆ. ಅವುಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ. ಮತ್ತು ಹೊಸ ವಿಚಾರಗಳಿಂದ ಅವುಗಳನ್ನು ಇಲ್ಲಿ ಅಭಿವ್ಯಕ್ತಿಗೊಳಿಸದ್ದನ್ನು ನೋಡಬಹುದು.

೪.೧ ವಿಮರ್ಶಾ ಲೇಖನಗಳು

ಪಿ. ಲಂಕೇಶರ 'ಸಿದ್ಧತೆ' : 'ಸಿದ್ಧತೆ ವಸ್ತುವಿನ ದೃಷ್ಟಿಯಿಂದ ಸಾಂಪ್ರದಾಯಿಕವಾಗಿ ತೋರಿದರೂ ಅಭಿವ್ಯಕ್ತಿಯ ಕ್ರಮದಲ್ಲಿಯ ಹೊಸತನ ಆಶ್ಚರ್ಯಕರವಾಗಿದೆ. ಸನ್ನಿವೇಶ ಹಾಗೂ ಪಾತ್ರಗಳಿಗೆ ತಕ್ಕಂತೆ ಒಂದು ಒಳ್ಳೆಯ ಕುಟುಂಬಕ್ಕೆ ಸೀಮಿತಗೊಳ್ಳುವ ಆಧುನಿಕ ಜೀವನದ ಒಂದು ಅಭಿವ್ಯಕ್ತಿಯಾಗಿ 'ನಾಟಕ' ಸಮರ್ಥವಾಗಿದೆ. ರಂಗಪ್ಪ ಪ್ರಸ್ತುತ ಪರಿಸ್ಥಿತಿಯಲ್ಲಿ ಬದುಕಿನಲ್ಲಿ ಘಾಸಿಯಾಗುವ ಮಧ್ಯವಯಸ್ಕರನ್ನು, ಲಿಖಿತ ಸಾಂಪ್ರಾದಾಯಿಕ ನಂಬಿಕೆಯಿದ್ದರೂ, ವಿಫಲಳಾಗುವ ಗೃಹಿನಿಯನ್ನು ಮತ್ತು ರಾಮು ಯಾವ ನಂಬಿಕೆಯ ಚೌಕಟ್ಟಿಗೂ ಒಳಗಾಗದೆ ಅಂತರ್ಪಿಶಾಚಿಯಂತಾಗಿರುವ ತರುಣರನ್ನು ಪ್ರತಿನಿಧಿಸುತ್ತಾರೆ. ಈ ಮೂವರಲ್ಲಿ ನಡೆದ ಘರ್ಷಣೆ ಮತ್ತು ಜಗಳದ ಒಂದು ಪ್ರಭಾವದಿಂದ ನಾಟಕ ಪ್ರಮುಖ ಸಂವೇದನೆಯನ್ನು ಧ್ವನಿಸುತ್ತದೆ ಎಂದು ಭೀಮನಗೌಡರು ಹೇಳುತ್ತಾರೆ.

'ರಂಗಪ್ಪ ಕೇಂದ್ರ ವ್ಯಕ್ತಿ ಇವನ ಸಂಬಂಧದಲ್ಲಿಯೇ ಉಳಿದವರ ವ್ಯಕ್ತಿತ್ವವೂ ಬಿಚ್ಚಿಕೊಳ್ಳುತ್ತದೆ. ರಂಗಪ್ಪ ಅರವತ್ತು ಮುಟ್ಟುತ್ತಿರುವ ಮನುಷ್ಯ ಒತ್ತಿಟ್ಟ ಆಶೆಗಳ ಗುಂಗಿನಲ್ಲಿಯೇ ದಿನಗಳೆದು ಇದ್ದಕ್ಕಿದ್ದಂತೆ 'ಲೆ' ಎಂದು ಪ್ಯಾಕಟ್ಟುಗಳನ್ನು 'ಧಡ್' ಎಂದು ಬೀಳಿಸಿದಾಗ ನಮಗಾಗುವುದು ಅವನ ಅಸಮಾಧಾನದ ಜನ್ಮಾಂತರದ ಕರ್ಮ ಎಂದಾಗ ತೋರುವ ಹೆಂಡತಿಯ ಮೇಲಿನ ಕೋಪದ ಸಂಸಾರದಲ್ಲಿ ಆಸ್ಥೆವಹಿಸದ ನಡತೆಯ ಮತ್ತು ಪಲಾಯನದ ಅರಿವು ಮೂಡಿ ಬರುತ್ತದೆ.'[೧] ರಂಗಪ್ಪ ಈ ನಾಟಕದ ಕೇಂದ್ರ ಬಿಂದು. ವಯಸ್ಸು ಜಾಸ್ತಿಯಾಗಿವೆ ಒಳ್ಳೆದಕ್ಕೆ ಬದುಕಿಗಾಗಿ ಹೋರಾಡಿದರು ಯಾವ ಅರ್ಥವು ಸಿಗದೆ ತೋಳಲಾಡಿದ್ದಾನೆ.

ಇದರಿಂದೆಲ್ಲ ಒಂದಿನ ಒಳ್ಳೇದಾಗುತ್ತೆ ಅಂತ ತಿಳಿದಿದ್ದೆ, ಈ ಕಷ್ಟದಲ್ಲಿ ಈ ದುಃಖ, ನಿಟ್ಟುಸಿರು, ಹುಡುಗಾಟ ನಗೆ ಚಪ್ಪಾಳೆಯಲ್ಲಿ ಕೊನೆಗೆ ಸತ್ಯ ಕಾಣಬಹುದು

ಅಂತ ಮಾಡಿದ್ದೆ. ನಾನೆಲ್ಲಿಗೂ ಹೊಗೋಕೆ ಆಗ್ಲಿಲ್ಲ ಅವನಿಗೀಗಿರುವ ಒಂದೇ ಒಂದು ಹಾದಿ ಭೂತವಾಗಿರುವದರಿಂದ ರಂಗಪ್ಪನ ಸುಪ್ತವಾದ ಪ್ರಜ್ಞೆ ಒಮ್ಮೆ ಸ್ಫೋಟಗೊಳ್ಳುತ್ತದೆ. ರಂಗಪ್ಪನಿಗೆ ಡಾನ್ಸ ತುಂಬಾ ಸೊಗಸು.

ಬರಬರುತ್ತ ರಂಗಪ್ಪನ ವ್ಯಕ್ತಿತ್ವ ವಿಚಿತ್ರರೂಪ ತಾಳುತ್ತದೆ ಹೆಂಡತಿಯ ಪ್ರೀತಿಯಿಂದ ದೂರವಾಗುತ್ತಾನೆ. ಹೀಗೆ ನಾಟಕ ಎರಡು ಮಟ್ಟಗಳ ಮೇಲೆ ಮುಂದುವರೆಯುತ್ತದೆ ಭೂತ ಮತ್ತು ವರ್ತಮಾನ ಇವೆರಡರ ತಿಕ್ಕಾಟದಲ್ಲಿ ಮೂವರೂ ಭವಿಷ್ಯ ನಿರ್ಮಿಸಲು ಅಸಮರ್ಥರಾಗುವದು ಮುಖ್ಯವಾಗಿದೆ. ಅವಳ ಕಣ್ಣು ಚಿನ್ನಾಗಿದ್ದು ಅಲ್ಲ? ಮೈ ಸುಂದರವಾಗಿತ್ತು ಡಾನ್ಸಿಗೆ ಹೇಳಿ ಮಾಡಿಸಿದ ಹಾಗಿತ್ತು ಎಂಬ ರಂಗಪ್ಪನ ಅವಾಸ್ತವ ಧೋರಣೆಯ ವಿರುಧ್ಧವಾಗಿ ಲಲಿತ ವಾಸ್ತವದ ಸಂಕೇತವಾಗುವುದು, ನನಗದೆಲ್ಲ ಹೇಳಬೇಡಿ ಎಂದಾಗ ರಾಮು ಒಳಗೆ ಹೋಗೋ ಎಂಬಲ್ಲಿ ಅವಳ ಮಾತು ಹೊರಬರುವದು. ಅವಳ ವೈಯಾರದ ಮಾತುಗಳು ರಂಗಪ್ಪನ ವಕ್ರದೃಷ್ಟಿಗೆ ಆತಂಕವಾಗಿ ಕಾಣುವದು ಸಹಜವೇ, ಒಂದು ಸಲ ಹೊರಟಾಗ ತೆಲೆ ನೋವು ಅಂದೆ ಸಾವಿರ ನೆಪ ಹೇಳಿ ಕಟ್ಟಿ ಹಾಕಿದೆ ಎಂದು ಮನಸ್ಸಿಗೆ ರಂಗಪ್ಪ ಬೇಜಾರ ಮಾಡಿಕೊಳ್ಳುತ್ತಾನೆ.

ಎರಡು ಮನಸ್ಸುಗಳ ನಡುವೆ ತಿಕ್ಕಾಟ ನಡೆದು ದ್ವೇಷಭಾವನೆ ಹೇಗೆ ಜಾಗೃತವಾಗುತ್ತದೆ ಎಂಬುದಕ್ಕೆ ರಂಗಪ್ಪ ರಾಮು ಸಂಬಂಧವೆ ಸಾಕ್ಷಿ. ಈ ಭಾವನೆಯು ಯಾವ ಮಟ್ಟಕ್ಕೇರುತ್ತದೆಂದರೆ ಅವರಿಬ್ಬರು ತಂದೆ–ಮಗ ಎಂದು ಗೊತ್ತು ಹಿಡಿಯುವದು ಕಷ್ಟವಾಗುತ್ತದೆ. ತಂದೆ–ಮಗನ ನಡುವೆ ವಾದ–ವಿವಾದ ಸುರಿಮಳೆಯಾಗುತ್ತದೆ. ರಾಮುನಿಗೆ ದೈವದಲ್ಲಿ ನಂಬಿಕೆಯಿಲ್ಲ. ಇಲ್ಲಿ ಎಲ್ಲಾ ಗೊತ್ತಿರೋಥರ ಇದೆ–ಯಾವುದೋ ಗೊತ್ತಿಲ್ಲ ಎಂದು ತಂದೆಗೆ ಹೋಗ್ತೇನಿ ಎನ್ನುತ್ತಾನೆ, ರಾಮುನಿಗೆ ಒಂದು ದೌರ್ಬಲ್ಯವಿದೆ "ನಾನು ಫೇಲಾಗಿದ್ದೇನೆ ಅಂತ ಬೈತೀರಿ ನೀವು ಯಾವ ಪರೀಕ್ಷೆಯೂ ಪಾಸಾಗಿಲ್ಲ" ನಂಬಿಕೆಯನ್ನು ಕಳೆದುಕೊಂಡ ರಾಮುನಿಗೆ ಪರೀಕ್ಷೆ, ಕ್ಲಾಸು, ಹುಟ್ಟಿದ ಹಬ್ಬ ಎಲ್ಲವೂ ಅರ್ಥಹೀನವಾಗಿ ಕಾಣುತ್ತವೆ. ಈ ಅವಿವೇಕತನ ಅಸಂಗತ ನಾಟಕದ ಎರಡು ಉದ್ದೇಶಗಳನ್ನು ನಿರ್ವಹಿಸುತ್ತದೆ. ಒಂದು ಬದುಕಿನ ಪರಮಸತ್ಯವಿಲ್ಲದೆ ಬದುಕುತ್ತಿರುವ ವ್ಯಕ್ತಿಗಳ ಅಸಂಬದ್ಧತೆಯನ್ನು ವ್ಯಕ್ತ ಮಾಡುತ್ತದೆ. ಎರಡು ಧಾರ್ಮಿಕ ನಂಬಿಕೆಯಿಂದ ದೂರವಾಗಿ ಸಂಕಟಪಡುವ ಬದುಕು ಇವರದಾಗುತ್ತದೆ.

ಹೀಗಾಗಿ ಅವಿವೇಕದ ದುಷ್ಪರಿಣಾಮ ವಾತಾವರಣವನ್ನು ಗೊಂದಲಗೊಳಿಸುವದರಲ್ಲಿ ಸಂಸಾರಿಕ ಹಾಗೂ ಸಾಮಾಜಿಕ ಸಂಬಂಧವು ಅವನತಿಯ ಕಡೆಗೆ ಸಾಗಿಸುತ್ತವೆ. ಸಂಪೂರ್ಣವಾಗಿ ಬದುಕನ್ನು ಅನುಭವಿಸಲು ಆಗದ ರಂಗಪ್ಪನಿಗೆ ಪಲಾಯನ ಅನಿವಾರ್ಯವಾಗಿ ಮನೆಯಿಂದ ಹೊರಟು ನಿಂತಾಗ. ಬೀಗದ ಕೈ ಕಳೆದು ಇನ್ನೂ ಎಷ್ಟೋ ಅಂಶಗಳು ಟ್ರಂಕು ಸೇರುವದು ಗಮನಾರ್ಹವಾದ ಅಂಶಗಳಲ್ಲಿ ಸೇರಿಕೊಳ್ಳುತ್ತವೆ. ತಾನು ಬದುಕನ್ನು ತೊರೆದರೂ ಬದುಕು ಅನವನ್ನು ತೊರೆಯುವದಿಲ್ಲ.

ಬೀಗದ ಕೈ ಮುರಿಯಲು ಹಾರಿ ಸಿಗುವದಿಲ್ಲ. ಕಲ್ಲು ತೆಗೆದುಕೊಂಡು ಅದನ್ನು ಒಡೆಯುವದರಲ್ಲಿ ರಾಮು ರಂಗಪ್ಪನಿಗೆ ವಾದಿಸುವನು ಇದು ರಂಗಪ್ಪನ ಸ್ಥಿತಿಯನ್ನು ಇನ್ನಷ್ಟು ಕೆಡಿಸಿ ನಾಟಕದಲ್ಲಿ ನಿರಾಸೆ ಪರಮಾವಧಿ ಮುಟ್ಟುತ್ತದೆ. ರಂಗಪ್ಪನ ಬದುಕು ಬರಡಾಗುತ್ತದೆ ವೇದನೆಯು ಹೆಚ್ಚಾಗುತ್ತದೆ.

ಕೊನೆಗೆ ಕನಸಿನಲ್ಲಿ ಪೈಲಾಯನಗೈಯಲು ಮಾಡುವ ಸಿದ್ಧತೆ ಸಾವಿಗೆ ಸಿದ್ಧತೆಯಾಗಿಬಿಡುತ್ತದೆ. ರಂಗಪ್ಪನ ಪ್ರಾಣ ಚೆಂಗನೆ ಹಾರಿ ಹೋಗುತ್ತದೆ. ಆಗ ರಾಮುವಿಗೆ ಅನುಕಂಪವಿಲ್ಲ ಮಾನವೀಯತೆಯನ್ನೇ ಕಳೆದುಕೊಂಡು ರಾಮು ತಂದೆಯ ಸಾವಿನ ಬಗ್ಗೆ ಚಿಂತಿಸುವದಿಲ್ಲ. ಗಾಢವಾದ ನಿದ್ರೆಗೆ ರಾಮು ಜಾರಿಕೊಂಡು ಬಿಡುತ್ತಾನೆ. "ಇಂದು ಮನುಷ್ಯ ಇರುತ್ತಾನೆ ಮತ್ತೆ ಸಾಯುತ್ತಾನೆ ಹುಟ್ಟಾನೆ" ಎಂಬ ರಾಮುವಿನ ಮಾತಿನೊಂದಿಗೆ ನಾಟಕ ಕೊನೆಗೊಳ್ಳುತ್ತದೆ ಎಂದು ಭೀಮನಗೌಡರು ವ್ಯಕ್ತಪಡಿಸುತ್ತಾರೆ.

ಲಂಕೇಶರ ಉಳಿದ ಕೃತಿಗಳ ತಲೆ ಬರಹದಂತೆ ಇಲ್ಲಿ 'ಸಿದ್ಧತೆ' ಎಂಬುದೂ ಅರ್ಥಪೂರ್ಣವಾಗಿದ್ದರೂ, ಅದನ್ನು 'ಪೆಟ್ಟಿಗೆ' ಎಂದು ಬದಲಾಯಿಸಿದ್ದು ನಾಟಕದ ರಚನೆಯ ದೃಷ್ಟಿಯಿಂದ ಗಮನಾರ್ಹವಾದದ್ದು 'ಸಿದ್ಧತೆ' ಗತಿ, ಕ್ರಿಯೆ ಜೀವಂತಿಕೆ, ಶೋಧನೆ ಮುಂತಾದ ಅರ್ಥಗಳನ್ನೊಳಗೊಂಡರೆ. 'ಪೆಟ್ಟಿಗೆ' ಸ್ಥಿರತೆ ನಿರ್ಜೀವತೆಗಳನ್ನು ನಿರ್ದೇಶಿಸುತ್ತದೆ. ಅದಕ್ಕೆ ನಾಟಕದ ಶೀರ್ಷಿಕೆಯನ್ನು ಪಿ.ಲಂಕೇಶರು ಕೆಲವು ವರ್ಷಗಳ ನಂತರ ಪೆಟ್ಟಿಗೆ ಎಂದು ಬದಲಾಯಿಸಿದ್ದು ಗಮನಾರ್ಹವಾಗಿದೆ.

ಒಟ್ಟಾರೆಯಾಗಿ ನಾಟಕದ ಪ್ರಾರಂಭದಿಂದ ರಂಗಪ್ಪನ ಬದುಕಿನ ಚಿತ್ರದೊಂದಿಗೆ ಆರಂಭವಾದ ನಾಟಕ ಕೊನೆಗೂ ಅದು ಸಂಸಾರದ ದ್ವಂದ್ವ ಪರಿಸ್ಥಿತಿಯಲ್ಲಿ ಕೊನೆಗೊಳ್ಳುವದು ವೈಶಿಷ್ಟ್ಯಪೂರ್ಣವಾಗಿದೆ. "ಆದರೆ, ವಾಸ್ತವ ಬದುಕು ಅನಿವಾರ್ಯವಾಗಿ ಭೂತಕ್ಕೂ ಹೋಗದೆ ವರ್ತಮಾನವನೋ ಬಿಡದೆ ಅಸಹಾಯಕತೆಯನ್ನು ಅನುಭವಿಸುವದು ಇಲ್ಲಿ ಮುಖ್ಯ. ರಂಗಪ್ಪನ ಈ ಪ್ಯಾಸ್ಸಿವ್ ಕ್ರಿಯೆಯಿಂದ ಹುಟ್ಟುವ ಸಂವೇದನೆ ಕುತೂಹಲವಲ್ಲ ಈ ಕ್ಲೇಶ ನಾಟಕ ಕೊನೆಗೊಳ್ಳುವವರೆಗೂ ಬದಲಾಗುವದಿಲ್ಲ. ಸಂಕೀರ್ಣ ಪ್ರತಿಮೆಗಳ ಮೂಲಕ ಸಂಕೇತಗಳ ಮೂಲಕ ದಾಟಿ ದುರಂತಮಯವಾಗಿ ತೀವ್ರಗೊಳ್ಳುತ್ತದೆ. ಪೆಟ್ಟಿಗೆ ತಲೆ ಬರಹ ಈ ಧಾಟಿಯಲ್ಲಿ ಧ್ವನಿಸುತ್ತದೆ"[೨]

ಆದ್ದರಿಂದ ಪೆಟ್ಟಿಗೆ ಎಂದು ಪಿ.ಲಂಕೇಶರು ಹೆಸರು ಬದಲಾಯಿಸಿರುವದು ಸಮಂಜಸವೆನಿಸುತ್ತದೆ ಎಂದು ಭೀಮನಗೌಡರು ಅಭಿಪ್ರಾಯ ಪಟ್ಟಿದ್ದಾರೆ.

ಸುಮತೀಂದ್ರರ ಪ್ರೇಮಪದ್ಯಗಳು

ಸುಮತೀಂದ್ರರ ಪ್ರೇಮ ಪದ್ಯಗಳನ್ನು ಓದುತ್ತಿದ್ದಂತೆ ನಮ್ಮ ಮನಸ್ಸಿಗೆ ಒಂದು ರೀತಿಯಾದ ದುಃಖವೆನಿಸುತ್ತದೆ. ಒಂದು ರೀತಿಯಾದ ಅನುಭವದ ವಿಚಾರವು

ತಿಳಿಯುತ್ತದೆ. ಪ್ರೇಮ ಕವನಗಳಲ್ಲಿ ಇರಬೇಕಾದ ಉತ್ಸಾಹ, ಅಭಿವ್ಯಕ್ತಿಯ ಮೂಡಿ ಬರುವ ಪ್ರತಿಮೆ-ಸಂಕೇತಗಳು ದೊರೆಯುತ್ತವೆ. ಅವರ ಅವರ ಭಾವನೆಗಳಿಗೆ ಹೆಚ್ಚಿನ ಅವಕಾಶ ಇರುವದಿಲ್ಲ.

ಪ್ರೇಯಸಿಯನ್ನು ಒಳಗೊಂಡ, ಅವಳ ಬಗೆಗೆ ಪ್ರತಿಕ್ರಿಯೆಗಳೆನಿಸದೆ ನಾಯಕನ ಮನಸ್ಸಿಗೆ ಒಂದು ರೀತಿಯಾದ ಹೊಳೆಯುವಿಕೆಯು ಇರುತ್ತದೆ. ಇಲ್ಲಿಯ ನಾಯಕ ಪ್ರೇಮದ ವೈಭವವನ್ನು ಮೆರೆಯುವ ತತ್ವವನ್ನು ವಾಸ್ತವಿಕ, ಹಾಗೂ ಕನಸಿನ ಲೋಕಗಳೆರಡನ್ನೂ ಸಾಧಿಸಿ ಉತ್ಕಟವಾದ ಪ್ರೇಮವನ್ನು ಅನುಭವಿಸಬೇಕು ಅನಿಸುತ್ತದೆ. ಅದಕ್ಕೆ ಅರುಂಧತಿ ದಮಯಂತಿ ಉಲೂಪಿಯ ಆದರ್ಶಪ್ರೇಮವನ್ನು ನೈಜತೆಯಲ್ಲಿ ಪಡೆಯುವದಕ್ಕೋಸ್ಕರ ಕಂಡೆ. ಆಕಾಶದಲ್ಲಿರುವ ಅರುಂಧತೆಯ, ನಿನ್ನ ಕಡೆಗೆ ಕೈ ಚಾಚಿದೆ ಎಂದು ಕನಸಿನಲ್ಲಿ ನಲ್ಲೆಯ ಬಗ್ಗೆ ರಸಿಕತೆಯ ಭಾವನೆಯಿಂದ ಹಂಬಲಿಸುತ್ತಾನೆ. ಹೃದಯಕ್ಕೆ ಧೈರ್ಯ ತುಂಬುತ್ತಾನೆ, ವಾದಿಸುತ್ತಾನೆ ಆದರೆ ಎಲ್ಲ ಬರಿ ಮಾತಿನಲ್ಲಿ ಇದ್ದು ಅನಿವಾರ್ಯವಾಗಿ ಕನಸುಕಟ್ಟುತ್ತಾನೆ.

"ಸಂಪ್ರದಾಯದ ಮೋಡಿಯಲ್ಲಿರುವಾಗ ನಿನಗದೇ ಸುಖವೆಂಬ ಭ್ರಾಂತಿ ಸಹಜ." ಎಂದು ಪ್ರೇಯಸಿಯನ್ನು ಅರ್ಥ ಮಾಡಿಕೊಂಡು ನನಗೂ ಪಂಜರದ ಕೊರಗು ಎಂಬ ಪರಿವಿಯಿದ್ದು ಸಾಯುವ ಮುಂಚೆ ಬದುಕನ್ನು ಸ್ವರ್ಗಮಾಡಿ ಅನುಭವಿಸುವುದು ಪೂರ ನಮ್ಮ ಕೈಯಲ್ಲಿರಲು ಏಕೆ ಚಿಂತೆ? ಎಂಬ ಧೈರ್ಯ ಹೊಂದಿಯೂ ಹಳೆಯದೆಲ್ಲವ ಕೆಡವಿ ನೀನೊಮ್ಮೆ ನನ್ನೊಡನೆ ಬಂದು ಬಿಡು. ಎಂದು ಕೊನೆಗೆ ಆದೇಶವಿತ್ತು ಕನಸು ಕಟ್ಟುತ್ತಾ ಕೂಡುವದು ನಾಯಕನ ಪ್ಯಾಸ್ಸಿವ್ ವ್ಯಕ್ತಿತ್ವದ ಒಂದು ಲಕ್ಷಣ'[೩] ದೈವವನ್ನು ನಂಬಿಕೊಂಡಿದ್ದ ಅವನು ತನ್ನ ವ್ಯಕ್ತಿತ್ವದ ಬಗ್ಗೆ ಚಿಂತಿಸುತ್ತಿದ್ದಾನೆ. ರಾತ್ರಿ ಹಾಸಿಗೆಯಲ್ಲಿ ನಿದ್ದೆ ಹತ್ತದೆ ಬಿದ್ದುಕೊಂಡು ಈ ಯುವಕ ಹತ್ತಾರು ಕನಸು ಕಾಣುತ್ತಿದ್ದಾನೆ. ಇದು ಒಂದು ರೀತಿಯಾದ ನಾಟಕೀಯ ಹಾಗೂ ಜಾಣ್ಮೆಯ ನಿರೂಪಣೆಯಿಂದ ಕುತೂಹಲವೆನಿಸುತ್ತವೆ. ಅದಕ್ಕೆ ಕವಿ ಹೀಗೆ ಹೇಳುತ್ತಾನೆ ಪ್ರಿಯೆ ಉಸಿರು ಗಟ್ಟುವ ವಾತಾವರಣವಿದು ಕಟ್ಟಳೆಗಳು ತುಂಬಿಕೊಂಡಿವೆ ಎಂದು ಕಲ್ಪನಾ ಲೋಕದಲ್ಲಿ ತೇಲುತ್ತಾನೆ. ನನ್ನ ಹೃದಯ ಕಳುವು ಮಾಡಿದೆಯಾ ಕೊಡು ಈಗ ಎನ್ನುವಲ್ಲಿ ಮೋಜು ನಡೆಯುತ್ತದೆ. ಅನೇಕ ಭಾವ ಭಂಗಿಗಳಲ್ಲಿ ನಾಯಕನ ಕನಸುಗಾರಿಕೆಯ ವಿವಿಧ ಮುಖಗಳು ಎದ್ದು ಕಾಣುತ್ತವೆ. ಇಷ್ಟೇ ಇದ್ದರೂ ಸಮಸ್ಯೆಯೇ ಇರಲಿಲ್ಲ ನಿರಾಯಾಸವಾಗಿ ಸುಮತೀಂದ್ರರು ರಮ್ಯಕವಿಗಳು ಎಂದು ಕರೆಯಬೇಕಾಗುತ್ತದೆ.

ಹೀಗೆ ಕೆಲವು ಕಡೆ ನಾಯಕನಿಗೆ ಕನಸಿನ ಸ್ವರ್ಗದಲ್ಲಿ ತೇಲಿಸಿ, ತನ್ನ ವ್ಯಕ್ತಿತ್ವದ ಹಾಗೂ ಪರಿಸರ, ಪರಿಜ್ಞಾನ ಇರುವ ಸಂಗತಿ ಇಣುಕುವುದರಿಂದ ಓದಗನು ಬಹುಶಃ ಗೊಂದಲದಲ್ಲಿ ಬೀಳುತ್ತಾನೆ. 'ಒಲಿದ ಹೆಣ್ಣನು ಹೊತ್ತ ಹೋರಾಡಿ ಗೆಲ್ಲಲಿಕೆ! ನನಗಿಲ್ಲ ದಿವ್ಯಧನುಸ್ಸು ಕಾಮಧೇನು ಇಷ್ಟಿದ್ದೂ ಕನಸನ್ನೇ ಆಶ್ರಯಿಸುವುದರಲ್ಲಿ ಏನಾದರೂ

ಅರ್ಥವಿರಬೇಕಲ್ಲವೆ. ವಸ್ತುವಿದೆಯನ್ನುವುದು ಶಬ್ದ, ಸ್ಪರ್ಶ ರೂಪರಸಗಂಧಗಳಿಂದ ಎನ್ನುವ ಬುದ್ಧಿವಂತಿಕೆಯಿದ್ದರೂ ನಿನ್ನಂತೆ ಹೀರಲು ಸಾರ ಬಿಡಲಿಲ್ಲ. ನಾನೊಂದು ಬೇರೆ ಎಂಬಲ್ಲಿ ನಾಯಕನ ಕನಸುಗಾರಿಕೆಯ ಇನ್ನೊಂದು ಮುಖವಾಗಿ ಅಸಹಾಯಕತೆಯನ್ನು ಕಾಣಬಹುದು'[೪] ಒಂದು ದೃಷ್ಟಿಯಿಂದ ಅಸಾಹಾಯಕತೆಯು ಸುಮತೇಂದ್ರರ ಪ್ರೇಮ ಪದ್ಯಗಳ ವಸ್ತುವನ್ನು ನಾವು ಕಾಣಬಹುದು ಅವರ ಬಹುಪಾಲು ಕವನಗಳು ಅಸಹಾಯಕತೆಯ ಹಿನ್ನಲೆಯಲ್ಲಿ ಹೆಣಿದುಕೊಂಡು ಬಂದಿರುವದನ್ನು ಕಾಣುತ್ತೇವೆ.

ಅಸಹಾಯಕತೆಗೆ ಸಮರ್ಪಕವಾದ ಸಮರ್ಥನೆಯು ಹೆಚ್ಚು ನಿರ್ದಿಷ್ಟ ನಿರೂಪಣೆ ಪಡೆದ ಎರಡನೆಯ ಸಂಕಲನ. ಕಪ್ಪು ದೇವತೆಯಲ್ಲಿ ದೊರಕುತ್ತದೆಯೋ ನೋಡಬೇಕು. 'ಮನೆಯೊಳಗೆ ಮನೆಯೊಡೆಯನಿಲ್ಲ' ಕವನದಲ್ಲಿ ಕವಿ ವಾಸ್ತವ ಪ್ರಜ್ಞೆಗೆ ಹೆಚ್ಚು ಮಹತ್ವ ಕೊಟ್ಟಿರುವುದು ಗಮನಾರ್ಹವಾಗಿದೆ. 'ನೀನು,' ಉಲೂಪಿ' ಇತ್ಯಾದಿ ಕವನಗಳಲ್ಲಿ ಕನಸುಗಾರಿಕೆಯ ಹುಟ್ಟಿಕೊಂಡು ಬಂದಿದೆ. 'ನೆನಪು', ಮತ್ತು 'ಗಾರ್ಗನ್' ಕವನಗಳು ಮಾತ್ರ ಗಮನಾರ್ಹವಾಗಿವೆ. ಹೃದಯದ ಲಕ್ಷ್ಮೀ ನಿನ್ನನು ಹಿಡಿದೆ ಮತ್ತೆ ಸುಭದ್ರೆ ಪ್ರೀತಿಗೆ ನಡೆದ ಅವಳನ್ನು ಸೌಂದರ್ಯವನ್ನ ಪ್ರಶಂಸೆಯಿಂದ ಕರೆಯುವಾಗ, ನೀನೇ ಉಲೂಪಿ ಬಾರೇ ಎಂದೆ. ಸಾಕು ಬೃಹನ್ನಳೆ ಮಲಗಿರಿ ಎಂದಳು. ಕಡೆಗೂ ನಾನೇ ಗತಿ ನಿಮಗೆಂದಳು ಎನ್ನುವಾಗ ಓದುಗನ ದೃಷ್ಟಿ ನಾಯಕನ ವ್ಯಕ್ತಿತ್ವದ ಕಡೆಗೆ ಹರಿಯುತ್ತದೆ. ನಾಯಕನು ಅರ್ಜುನನ್ನು ಮಾದರಿಯಾಗಿಟ್ಟುಕೊಂಡು ಆತನ ಸಿದ್ಧಾಂತವನ್ನು ವಾಸ್ತವದಲ್ಲಿ ಅಳವಡಿಸಲು ಉದ್ದೇಶಿಸಿ ಅರ್ಜುನನ ಸ್ಥೈರ್ಯ ಕಳೆದುಕೊಂಡು ಸೋಲುತ್ತಾನೆ. ಆದರೂ ಕನಸು ಕಟ್ಟುವದನ್ನು ಮರೆಯುವದಿಲ್ಲ. ಹೀಗಾಗಿ ವಾಸ್ತವವನ್ನು ಮರೆಯದೆ ಕನಸನ್ನು ಮರೆಯದೆ ಉಭಯ ಸಂಕಟದಲ್ಲಿ ಪರಿತಪಿಸುವುದು ವ್ಯಕ್ತಿತ್ವದ ಘನತೆ ಹೆಚ್ಚಿಸುವಂಥದು.

ಸುಮತೀಂದ್ರರ ಪ್ರೇಮ ಪದ್ಯಗಳನ್ನು ಇಡೀಯಾಗಿ ನೋಡಿದರೆ ಮಾತ್ರ ಅಲ್ಲಿಯ ಧೋರಣೆಗೆ ಮಹತ್ವದ ಅರ್ಥ ಪಡೆದುಕೊಳ್ಳುತ್ತದೆ. ಹೀಗಾಗಿ ಕನ್ನಡ ಕಾವ್ಯಕ್ಷೇತ್ರದಲ್ಲಿ ಸುಮತೀಂದ್ರ ಅವರು ತಮ್ಮದೇಯಾದ ಕೊಡುಗೆಯನ್ನು ನೀಡಿದ್ದಾರೆ ಎಂದು ಭೀಮನಗೌಡರು ತಮ್ಮ ನಿಲುವನ್ನು ಸ್ಪಷ್ಟಪಡಿಸಿದ್ದಾರೆ.

ಭಾಗ್ಯ ಲಕ್ಷ್ಮೀ ಅವರ ಬೆರಳ ಸಂದಿಯ ಬದುಕು

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಬರೆಯುವ ಕವಿಗಳಿಗೇನು ಬರಗಾವಿಲ್ಲ, ಆದರೆ ಕಠಿಣವಾದುದನ್ನು ಸಾಧಿಸಲು ಹೋಗಿ ಸಿಕ್ಕು ಹಾಕಿಕೊಂಡ ಕವಿಗಳೇ ಹೆಚ್ಚಾಗಿದ್ದಾರೆ. ಕಾವ್ಯಾಂಶದಲ್ಲಿ ಸರಳತೆಯನ್ನು ತರಲು ಪ್ರಯತ್ನಿಸಿ ಗಂಡಾಂತರ ಪರಸ್ಥಿತಿಯಲ್ಲಿ ಒದ್ದಾಡುವ ಸ್ಥಿತಿಯ ದವಡೆಯಲ್ಲಿ ಸಿಕ್ಕು ಹಾಕಿಕೊಂಡಿದ್ದಾರೆ. 'ಇಂಥ ತರುಣ ಕವಿಗಳೇ' ಹೆಚ್ಚಾಗಿದ್ದಾರೆ. ಅದಕ್ಕೆ ಭೀಮನಗೌಡರು ಬಹಳಷ್ಟು ವಿಷಾದದಿಂದ ಇಲ್ಲಿ ನಿರೂಪಿಸುತ್ತಾರೆ. ಇಂಥ ಒಂದು

ಸಂದಿಗ್ಧ ಸನ್ನಿವೇಶದಲ್ಲಿಯೇ ಪ್ರಕಟವಾದ ಒಂದು ಸಂಕಲನ ಭಾಗ್ಯ ಲಕ್ಷ್ಮೀಯವರ 'ಬೆರಳಸಂದಿಯ ಬದುಕು' ಗಂಡಾಂತರದಿಂದ ಪೂರ್ಣ ಮುಕ್ತವಾಗಿಲ್ಲವೆನಿಸಿದರೂ, ವಿಶಿಷ್ಟ ಸಂವೇದನೆಗಳ ಮಿನುಗುವಿಕೆಯಿಂದ ಆಸಕ್ತಿದಾಯಕವಾಗಿದೆ.

ಯುವಕರ ಕೈಯಲ್ಲಿ ಸಿಕ್ಕು ಬೇಸರಹಿಡಿಸುವಷ್ಟು ಗೊಂದಲದಲ್ಲಿ ಕಾಮ-ಪ್ರೇಮವೇ, ಪ್ರಸ್ತುತ ಸಂಕಲನದ ಪ್ರಮುಖ ವಸ್ತು. ಅದನ್ನು ಒಬ್ಬ ಯುವತಿ ನಿರೂಪಿಸುತ್ತಿದ್ದಾಳೆ ಎಂದರೆ ಏನಾದರೂ ಹೊಸ ನಿಲುವು ಹೊಂದಿದ್ದಾಳೆಯೇ ಎಂದು ಕುತೂಹಲ ಮಾಡುತ್ತದೆ. ಭಾಗ್ಯ ಲಕ್ಷ್ಮೀಯವರ ಸ್ಪರ್ಧಾತ್ಮಕ ಮನೋಭಾವವನ್ನು ನಾವು ಮೆಚ್ಚುವಂತದು. 'ಕವನಗಳನ್ನು ಓದುತ್ತ ಹೊದಂತೆ ನಾವು ಮುಖ್ಯವಾಗಿ ಕಾಣುವದು, ಒಬ್ಬ ಸಂವೆದನಶೀಲ ಯುವತಿಯ ಹೃದಯ ಬಿಚ್ಚುವದನ್ನು, ಯೌವನದ ಸೆಳೆವಿಗೆ ಸಿಕ್ಕು ತತ್ತರಿಸಿ ಪ್ರೇಮಿಯ ಜೊತೆಗಿನ ದೈಹಿಕ ಸಂಸಾರಿಕ ಸುಖಕರ ಬಯಕೆಗಳು ಚಿಮ್ಮುವದನ್ನು ಅಕ್ಕ ಮಹಾದೇವಿಗೆ ವ್ಯತಿರಿಕ್ತವಾಗಿ ಬರುವ ಈ ನಿಲುವನ್ನ ಬಹಿರಂಗವಾಗಿ ಹಾಗೂ ಸೈದ್ಧಾಂತಿಕವಾಗಿ ಸ್ವೀಕರಿಸುವ ಸ್ತ್ರೀಯರು ನಮ್ಮಲ್ಲಿ ಎಷ್ಟು ಜನ ಸಿಗುತ್ತಾರೆ? ಆದ್ದರಿಂದಲೇ ಸಂಸ್ಕೃತಿ-ಸಂಪ್ರದಾಯ-ಪಾತಿವೃತ್ಯ ಪರದೆಯೊಳಗೆ ಮುಖವಾಡ ಧರಿಸಿ ನಾಟಕವಾಡುವ ಜನರ ಮಧ್ಯ ತನ್ನ ಪ್ರಾಮಣಿಕ ಆಸೆ-ಆಕಾಂಕ್ಷೆಗಳಿಗೆ ಸಮರ್ಥನೆ ಕೊಡಲು ಯತ್ನಸಿಸುವಲ್ಲಿ ನಾಯಕಿ ಏಕಾಕಿತನವನ್ನನುಭವಿಸುವುದು ಮಹತ್ವವಾಗಿದೆ."[೫]

ಅದಕ್ಕಾಗಿ ಸಂಕಲನದ ವೈಶಿಷ್ಟ್ಯ ಬಹಳ ಮುಖ್ಯವಾಗಿದೆ. ಕವನಗಳು ಹೆಣ್ಣುತನದ ಜ್ಞಾನದಿಂದ ಪರಿಸರದ ಹಿನ್ನಲೆಯಲ್ಲಿ ಹುಟ್ಟಿಬರುವದರಿಂದ ಸಂವೇದನೆಗಳಿಗೆ ಅರ್ಥ ಬರುತ್ತದೆ. ಹೀಗಾಗಿ ಬೆರಳಸಂದಿಯ ಬದುಕು ಹೆಚ್ಚು ಆಸಕ್ತಿ ಹುಟ್ಟುಸುವ ಹಾಗೂ ಕವಿಯಿತ್ರಿಯ ಮುಂದಿನ ಬೆಳವಣಿಗೆಯ ಬಗ್ಗೆ ಭರವಸೆ ಮೂಡಿಸುವ ಕೃತಿ ರಾಘವೇಂದ್ರರಾವ್ ಹಾಗೂ ಜಯದರ್ಶನ ಅವರ ಅಭಿಪ್ರಾಯಗಳಲ್ಲಿ ಈ ಕವಿಯಿತ್ರಿ ಬಗ್ಗೆ ನೋಡಿದಾಗ, ಅನುಭವ ಕ್ಷೇತ್ರಗಳ ವಿಸ್ತಾರಣೆ ಮಾತ್ರ ಮುಂದಿನ ಬೆಳವಣಿಗೆಗೆ ಕಾರಣ ಎಂಬ ರಾಘವೇಂದ್ರರಾವ್, ಅವರ ಮಾತುಗಳನ್ನು ನೋಡಿದಾಗ ಭಾಗ್ಯ ಲಕ್ಷ್ಮೀಯವರ ಕಾವ್ಯದ ಮುಂದಿನ ಹೆಜ್ಜೆಗಳನ್ನು ಕಾದು ನೋಡುವ ಲವಲವಿಕೆ ಕಂಡು ಬರುತ್ತದೆ.

ಕವಿ ಅರವಿಂದ ನಾಡಕರ್ಣಿ: ಕೆಲವು ಅನಿಸಿಕೆಗಳು

ನಮ್ಮ ಕನ್ನಡ ಕಾವ್ಯ ಕ್ಷೇತ್ರದಲ್ಲಿ ಅರವಿಂದ ನಾಡಕರ್ಣಿ ಅವರು ಈಗಾಗಲೇ ಎಲ್ಲರಿಗೂ ಸುಪರಿಚಿತ ಹೆಸರು. ಅವರ ಕಾವ್ಯದ ಬಗ್ಗೆ ಸಾಕಷ್ಟು ಲೇಖನಗಳು ಪ್ರಕಟವಾಗಿವೆ. ನಾನು ಅವರ ಬಗ್ಗೆ ಬರೆಯುದೆಂದರೆ ತೊಂದರೆ ಕೆಲಸವೇ ಎಂದು ಭೀಮನಗೌಡರ ಅವರು ಮೊದಲು ಸ್ವಲ್ಪ ಭೀತಿಗೆ ಒಳಗಾಗುತ್ತಾರೆ. ಆದರೂ ಕೊನೆಗೆ ಧೈರ್ಯವನ್ನು ತುಂಬಿಕೊಳ್ಳುತ್ತಾರೆ. ಕೆಲವೊಂದು ಲೇಖನಗಳನ್ನು ಓದಿ ನೋಡಿ ಬೆಲೆಗಟ್ಟುವ ಗೋಜಿಗೆ

ಹೋಗದೆ ಅದು ನನ್ನ ಸಾಮರ್ಥ್ಯವು ಅಲ್ಲ ಎಂದು ಕೆಲವು ಅನಿಸಿಕೆಗಳನ್ನು ಮಾತ್ರ ಇಲ್ಲಿ ವ್ಯಕ್ತಪಡಿಸಿದ್ದಾರೆ.

ಅರವಿಂದರು ನವ್ಯ ಪಂಥದ ಒಬ್ಬ ಪ್ರಮುಖ ಕವಿಯಾಗಿ ಕಾಣಿಸಿಕೊಳ್ಳುತ್ತಾರೆ. ನವ್ಯ ಎಂದಾಕ್ಷಣ ಕೆಲವರು ಮೂಗುಮುರಿಯುತ್ತಾರೆ. ಪುಸ್ತಕವನ್ನು ದೂರತಳ್ಳುತ್ತಾರೆ ಅಂಥವರಿಗೆ ಏನಾದರೂ ಭಿನ್ನವಾದ ವಿಶಿಷ್ಟವಾದ ಪ್ರತ್ಯುತ್ತರ ಅರವಿಂದರ ಕಾವ್ಯದಲ್ಲಿ ಸಿಗಬಹುದು ಎಂದು ಪುಟಗಳನ್ನು ತಿರುವುತ್ತಾ ಹೋದಂತೆ, ಬದುಕಿನ ಸಾಮಾಜಿಕ ಆರ್ಥಿಕ ಪ್ರಾಮಾಣಿಕ ಕಳಕಳಿ ಅಭಿವ್ಯಕ್ತಿಯಲ್ಲಿ ಸರಳತೆ ಹಾಗೂ ಅರ್ಥಪೂರ್ಣವಾದ ಅಂಶಗಳನ್ನು ನಾವು ನೋಡುತ್ತ ಹೋಗುತ್ತೇವೆ.

ಅರವಿಂದರ ಕಾವ್ಯ ಬೇರೆ, ನವ್ಯ ಕಾವ್ಯದಂತೆ ಪಾಶ್ಚಾತ್ಯರ ದಟ್ಟವಾದ ಪ್ರಭಾವಕ್ಕೆ ಒಳಗಾಗಿದ್ದಾನಯೇ ಅಥವಾ ತನ್ನ ಮೂಲಭೂತ ಪರಿಸರದ ಪರಿಜ್ಞಾನವನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡಿದ್ದಾನೆಯೇ? ಹಾಗಾದರೆ ಪರ ಪ್ರಭಾವದೊಂದಿಗೆ ತನ್ನ ಅಭಿವ್ಯಕ್ತಿಯಲ್ಲಿ ಸಂಘರ್ಷಣೆಯನ್ನು ತಂದಿದ್ದಾನೆಯೇ? ತನ್ನ ಸ್ವಂತ ಅನುಭವದ ಹಿನ್ನಲೆಯಲ್ಲಿ ಕಾವ್ಯವನ್ನು ಗಟ್ಟಿಗೊಳಿಸಿದ್ದಾನೆಯೇ? ಹಲವಾರು ಪ್ರಶ್ನೆಗಳು ನಮ್ಮನ್ನು ಕಾಡುತ್ತವೆ. 'ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವಕ್ಕೆ ಸಿಕ್ಕು ಅತ್ಯಾಧುನಿಕ ನಾಗರಿಕತೆಯ ಪ್ರತ್ಯೇಕವಾಗಿ ನಿಂತ ಮುಂಬಯಿ ನಗರದಲ್ಲಿ ಕವಿ ಅರವಿಂದರು ಅನೇಕ ವರ್ಷಗಳನ್ನು ಕಳೆದವರು. ಅಲ್ಲಿಯ ಬದುಕಿನ ಒಳ-ಹೋರಗುಗಳನ್ನು ನಿಕಟವಾಗಿ ಅನುಭವಿಸಿದವರು. ಸ್ವಾಭಾವಿಕವಾಗಿ ತಮ್ಮ ಅನುಭವವನ್ನೇ ಅಭಿವ್ಯಕ್ತಿಯಲ್ಲಿಳಿಸಿ ಕವನಗಳಲ್ಲಿ ನಾಗರಿಕ ಪ್ರಜ್ಞೆಯ ಕವಿಯಾಗಿ ಮೆರೆಯುತ್ತಾರೆ. ಎಂಬ ಸರಳವಾದ ಅಭಿಪ್ರಾಯಕ್ಕೆ ಬರುವಂತಿಲ್ಲ. ಯಾಕೆಂದರೆ ಕವಿಯ ಪ್ರಜ್ಞೆಯ ವರ್ತಮಾನ ನಿರಂಬಳವಾದುದಲ್ಲ, ಅದಕ್ಕೆ ಭೂತದ ನಂಟು ಇದೆ. ಹಳ್ಳಿಯ ಪ್ರತೀಕದ ಮೂಲಕ ಕವಿಯು ಹಲವಾರು ನೆನಪಿನ ಪ್ರತಿಮೆಗಳ ಮೂಲಕ ಈ ಭೂತ ತನ್ನ ಅಸ್ತಿತ್ವವನ್ನ ಪ್ರತಿಷ್ಠಾಪಿಸಲು ಪ್ರಯತ್ನಿಸುತ್ತದೆ.'[೬] ಭಾರತೀಯ ಬದುಕಿನ ಪ್ರಸ್ತುತ ಸಂದರ್ಭದಲ್ಲಿ ಈ ಒಂದು ಸಂಘರ್ಷ ಅತ್ಯಂತ ಮಹತ್ವದ್ದೇ. ಈ ಸಂಘರ್ಷಕ್ಕೆ ರಂಗ ಭೂಮಿಯಾಗುವ ಕವಿಯ ಮನಸು ಅತ್ಯಂತ ಉತ್ಸುಕತೆಯನ್ನು ಹುಟ್ಟಿಸುತ್ತದೆ ಅದು ಇಲ್ಲಿಯೇ. ಅರವಿಂದರ ಕಾವ್ಯದಲ್ಲಿ ಮುಖ್ಯವಾಗಿ ಕಾಣಿಸಿಕೊಳ್ಳುವ ಅಂಶ ಎಂದರೆ ವೈಚಾರಿಕ ನೆಲೆ ಬಹಳಷ್ಟು ಕವನಗಳ ಹಿನ್ನಲೆಗೆ ವೈಚಾರಿಕತೆಯ ಹರಿವು ಕಂಡು ಬರುತ್ತದೆ.

ವೈಚಾರಿಕತೆಯು ಕಾವ್ಯದಲ್ಲಿ ಅರವಿಂದರು ಅನಿಸಿಕೆ, ಅನಿವಾರ್ಯವನ್ನು ಸೊಗಸಾಗಿ ಬಳಸಿದ್ದಾರೆ. ಕಾವ್ಯದಲ್ಲಿ ಬುದ್ಧಿಯ ಬೆಳವಣಿಗೆಯ ಜೊತೆ ಭಾವವೂ ವಿಕಾಸಗೊಳ್ಳುವ ಬಗೆಯಲ್ಲಿ ಕವನಗಳ ಓದುಗರಿಗೆ ಸಂಕಲನದಿಂದ ಸಂಕಲನಕ್ಕೆ ಹೆಚ್ಚು ಪುಷ್ಟಿ ನೀಡುತ್ತಾ ಹೋಗುತ್ತವೆ. ಕವಿಯು ವರ್ತಮಾನದ ಮಡುವಿನಲ್ಲಿ ಜಿಗಿದು ಪ್ರಸ್ತುತ ಬದುಕಿನ ವಿಶಿಷ್ಟ ಸಂವೇದನಗಳ ಅಲೆಗಳಲ್ಲಿ ಈಸುವನು. ಕವಿ ಆಧುನಿಕ ವೈಚಾರಿಕ ಕ್ಷೇತ್ರವನ್ನು ಅಭ್ಯಾಸದ ಮೂಲಕ ನಿಕಟವಾಗಿಸಿಕೊಂಡವರು. ಹೀಗಾಗಿ ಮುಖ್ಯ ಕಾಳಜಿ

ಕೇಂದ್ರಿಕೃತವಾಗಿರುವದು ವ್ಯಕ್ತಿಯ ಮೇಲೆ ಈ ದೃಷ್ಟಿಕೋನದಿಂದ ಇಡೀ ವ್ಯವಸ್ಥೆಯ ಜೊತೆಗಿನ ಸಂಬಂಧವನ್ನು ಪರೀಕ್ಷೆಗೆ ಒಳಪಡಿಸುತ್ತಾರೆ.

ಭಾರತೀಯ ಬದುಕನ್ನು ಆಕ್ರಮಿಸಿದ ಆಧುನಿಕ, ಔದ್ಯೋಗಿಕ, ಯಾಂತ್ರಿಕೃತ ಬಂಡವಾಳಶಾಹಿ, ವ್ಯವಸ್ಥೆ ಹೇಗೆ ಮನುಷ್ಯನ ಮನುಷ್ಯತ್ವವನ್ನು ಕೊಲ್ಲುತ್ತದೆ. ಸನಾತನ ಮೌಲ್ಯಗಳನು ಗಾಳಿಗೆ ತೂರುತ್ತದೆ ಎಂದು ಕವಿ ಭೀಮನಗೌಡರ ಸ್ಪಷ್ಟವಾಗಿ ನಿರೂಪಿಸಿದ್ದಾರೆ. ಆದ್ದರಿಂದ ಅರವಿಂದರ ಕವನಗಳ ಅಭಿವ್ಯಕ್ತಿ ಬಹಳ ಮಾರ್ಮಿಕವಾಗಿ ಮೂಡಿದೆ. ಯಾವುದೇ ಒಂದು ಒಳ್ಳೆಯ ಪ್ರಗತಿಪರ ವ್ಯವಸ್ಥೆಯ ವ್ಯಕ್ತಿಯ ಬೆಳವಣಿಗೆ ನಿರಾಕರಿಸಲಾರದು ಬದಲು ಅವನ ಸರ್ವಾಂಗೀನ ವ್ಯಕ್ತಿತ್ವಕ್ಕೆ ಪೋಷಕವಾಗಿ ಅವನ ಎಲ್ಲ ಶಕ್ತಿಗಳು ಅರಳಲು ಅವಕಾಶ ಮಾಡಿಕೊಡಬೇಕು. ಇದು ಕವಿ ಅರವಿಂದರ ಆಳವಾದ ನಂಬಿಕೆ ಆದರೆ ಇಂದಿನ ಭಾರತದಲ್ಲಿ ಕಾಲಿರಿಸಿದ ಪಾಶ್ಚಾತ್ಯ ಸಂಸ್ಕೃತಿ ಮನುಷ್ಯನನ್ನು ನಿರ್ಲಕ್ಷಿಸಿ ತಾನು ಶ್ರೀಮಂತಿಕೆಯಿಂದ ಕೊಬ್ಬಿದೆ. ಇದು ಕವಿಗೆ ನಿರಾಸೆ ಹುಟ್ಟಿಸಿದೆ ಭವ್ಯವಾದ ಆಕಾರದಲ್ಲಿ ಬೆಳೆದ ಆಧುನಿಕ ನಾಗರಿಕತೆಯ ಮಧ್ಯ ಸಿಕ್ಕ ಮಾನವ ಅಸಹಾಯಕನಾಗಿ ಒದ್ದಾಡುವ ಸ್ಥಿತಿಯನ್ನ ನೋಡಿ ಕವಿ ಬಹಳ ಮಾರ್ಮಿಕವಾಗಿ ಚಿತ್ರಿಸಿದ್ದು ಗಂಭೀರವಾಗಿದೆ.

“ಲಾಲಸೆಯ ಆಕಾಶ ಸೌಧದಡಿ
ಮಾನವ್ಯತೆ
ಮೂಟೆಗಂಟಾಗಿ ಅಲೆಯುತಿದೆ
ಕಿವುಡ ಮೂಕರ ನಡುವೆ”[೭]

ತನ್ನ ನೈಜರೂಪವನ್ನೇ ಬಿಟ್ಟು ಕವನಗಳಲ್ಲಿ ಮುಖ್ಯವಾಗಿ ಮನುಷ್ಯನ ಬಗ್ಗೆ ನಿಸರ್ಗ ಸೌಂದರ್ಯಕ್ಕೆ ಮಾರು ಹೋಗಿ. ಅಮ್ಮನ ನೆನಪಿನಲ್ಲಿ, ಭವಾನಿಯ ವ್ಯಕ್ತಿತ್ವದಲಿ, ರಾಯರ ಪ್ರತಿಮೆಯಲ್ಲಿ ಅದನ್ನು ಕಂಡು ಆತ್ಮತೃಪ್ತನಾಗುತಾನೆ ಪ್ರಸ್ತುತ ಕ್ರಾಂತಿಕಾರಿ ದೃಷ್ಟಿಯಿಂದ ನಿರಾಕರಿಸುವ ಯೊಗ್ಯವಾದ ಉಳಿಗ ಮಾನ್ಯ ಪದ್ಧತಿಯಲ್ಲಿಯೂ ನಿಜವಾದ ಮನುಷ್ಯತ್ವವನ್ನು ಕಂಡಿದ್ದಾನೆ ಕವಿ.

ಇವರ ಕವನಗಳು ವೈಯಕ್ತಿಕ ನೆಲೆಯ ಮೇಲೆ ಅಭಿವ್ಯಕ್ತಗೊಂಡಂತಿದ್ದರು. ಅನೇಕ ಕಡೆ ಬಳಸಲಾದ ಪ್ರತಿಮೆಗಳ, ಹಿನ್ನಲೆಯಿಂದ ಕವಿಯಲ್ಲಿ ಒಂದು ವಿಚಾರದ ಕಡೆಗೆ ಕವಿಯ ಮನಸ್ಸು ತೇಲಿ ಹೋಗುತ್ತದೆ.

ನವ್ಯ ತಂತ್ರವನ್ನು ಮೈಗೂಡಿಸಿಕೊಂಡು ಅರವಿಂದರ ಕಾವ್ಯ ತೋರಿಕೆಗೆ ವ್ಯಕ್ತಿನಿಷ್ಟತೆಯಿಂದಲೇ ಆರಂಭವಾಗುವದು. ಆದರೆ ನಂತರ ಅಂತರಂಗದ ಸುಪ್ತವಾಗಿದ್ದ ವಸ್ತುನಿಷ್ಟತೆ ಕಾವ್ಯಕ್ಕೆ ಒಂದು ಮಹತ್ವದ ಅಂಶವನ್ನು ತಂದು ಕೊಡುತ್ತದೆ. ಕವನಗಳಲ್ಲಿ ನಾಯಕ ಒಬ್ಬ ಸಾಮನ್ಯ ವ್ಯಕ್ತಿಯಾಗಿ ಬುದ್ದಿವಂತರ ಮಧ್ಯಮ ವರ್ಗದ ಪ್ರತಿನಿಧಿ ಆಧುನಿಕ ಭಾರತದ ಮೂರ್ತರೂಪ ಮುಂತಾದವು ಹೆಳಿಕೆ ಕೇವಲ ಔಪಚಾರಿಕವೆನಿಸುತ್ತವೆ. ಯಾಕೆಂದರೆ

ಇವೆಲ್ಲ ಗುಣಲಕ್ಷಣಗಳನ್ನು ಹೊಂದಿಯೂ ಈ ನಾಯಕ ಅಷ್ಟಕ್ಕೆ ನಿಲ್ಲದೆ ಭೂತದಿಂದ ವರ್ತಮಾನದ ವರೆಗೆ ಹಬ್ಬಿದ ಕಾಲವು ಚೆನ್ನಾಗಿ ಬೆಳೆದುನಿಂತು. ಇತಿಹಾಸದ, ಮಾನವ ವಿಕಾಸದ ಮೂರ್ತರೂಪವಾಗಿ ಕಾಲಕ್ರಮೇಣ ದೊಡ್ಡ ಸಾಂಕೇತವಾಗಿ ಬೆಳೆದು ನಿಲ್ಲುವ ಅನುಭವ ಅರವಿಂದರ ಕಾವ್ಯದ ಗರ್ಭದಲ್ಲಿ ಕಂಡು ಬರುತ್ತೆದೆ. ಒಂದು ಕಡೆಗೆ ಹನೇಹಳ್ಳಿ ಇನ್ನೊಂದು ಕಡೆಗೆ ಮುಂಬಯಿ ನಗರ ಇವೆರಡರ ಮಧ್ಯ ಹಗ್ಗದ ಮೇಲೆ ಕಸರತ್ತು ಮಾಡುತ್ತ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವ ಹೋರಾಟದ ಬದುಕಿನ ಚಿತ್ರಣ ನಡೆಯುತ್ತದೆ. ನಾಯಕ ಕಾಲದ ಎದುರಿಗೆ ದುರ್ಬಲನಾಗಿ ಸೋಲನ್ನನುಭವಿಸುವುದು ನಮ್ಮ ಇಡೀ ನಾಗರಿಕತೆಗೆ ಹಿಡಿದ ಕನ್ನಡಿಯಾಗಿ ಅರ್ಥವ್ಯಾಪ್ತಿಯನ್ನು ಪಡೆಯುತ್ತದೆ. ಈ ದೃಷ್ಟಿಯಿಂದ, ಅರವಿಂದ ನಾಡಕರ್ಣಿ ಅವರ ಕಾವ್ಯ ಹಿಂದಿನ ಆಸೆಯ ಅರಿವಿಗೆ ಬಂದು ಅವರೊಬ್ಬ ಕನ್ನಡದ ಬಹುಮುಖ್ಯ ಕವಿಯೆಂದು ಧಾರಳವಾಗಿ ಹೇಳಲು ಸಂತೋಷವೆನಿಸುತ್ತದೆ.

ಅನುಭವದಿಂದ ಕೃತಿಯ ವರೆಗೆ

ಭೀಮನಗೌಡರ ಅವರ ಕವಿಯಾದ ಸ್ವಾನುಭವದ ಮೆಲಕು ಹಾಕುವ ಅನುಭವದಿಂದ ಲೇಖನ ಕೃತಿಯವರೆಗೆ ಅತ್ಯಂತ ವೈಶಿಷ್ಟ್ಯಪೂರ್ಣವಾಗಿದೆ ಎಂದು ಹೇಳಿದ್ದಾರೆ. "ಅನುಭವದಿಂದ ಕೃತಿಯವರೆಗೆ" ಈ ಶಿರ್ಷಿಕೆ ಒಳ್ಳೆಯ ಕಾವ್ಯಮಯವಾಗಿದೆ. ಆದ್ದರಿಂದ ನಮ್ಮನ್ನು ಬಹುಶಃ ಹಾದಿ ತಪ್ಪಿಸುವಂತೆ ಕಾಣುತ್ತದೆ. ಅನುಭವವೆಂದರೆ ಯಾವ ಅನುಭವ? ಕೃತಿಯೆಂದರೆ ಯಾವ ಕೃತಿ? ಮೇಲುನೋಟಕ್ಕೆ ಎರಡೂ ಒಂದೇ ಎಂಬ ಗೊಂದಲ ಆಮೇಲೆ ಹೊಳೆಯುತ್ತದೆ–ಓಹೋ, ಈ ಶೀರ್ಷಿಕೆಯ ಹಿಂದೆ ನಾನೊಬ್ಬ ಸಾಹಿತಿ ಅಥವಾ ಕವಿ ಎಂಬ ಪೂರ್ವ ಕಲ್ಪನೆಯು ಕವಿಗೆ ಇದ್ದಂತೆ ನಮಗೆ ತೋರುತ್ತದೆ.

ಭೀಮನಗೌಡರ ರವರು ಈ ವಿಷಯದಲ್ಲಿ ಬಹಳಷ್ಟು ಗೌಣರೂಪದಲ್ಲಿ ನಮ್ಮ ಮನಸ್ಸನ್ನು ಕಂಡೊಯ್ಯುವ ಕೆಲಸ ಮಾಡಿದ್ದಾರೆ. ಕೆಲವು ಸಾಲುಗಳನ್ನು ಬರೆದ ತಪ್ಪಿಗೆ ನೀವು ನನ್ನನ್ನು ಕವಿ ಎಂದು ಕರೆದಿದ್ದೀರಿ. ನನ್ನ ಅನುಭವ ಮತ್ತು ಕೃತಿಗಳ ಬಗ್ಗೆ ಕುತೂಹಲ, ಆಸಕ್ತಿ ತೋರಿಸಿದ್ದೀರಿ ಅದು ನಿಮ್ಮ ಸದ್ಭಾವನೆ. ಕವಿಯ ಕೆಲಸ ತುಂಬಾ ಹೊಣೆಗಾರಿಕೆಯಿಂದ ಕೂಡಿರುತ್ತದೆ. ತನ್ನ ವಿಶಿಷ್ಟ ರಹಸ್ಯಮಯವಾದ ಶಕ್ತಿಯಿಂದ ವ್ಯಕ್ತಿಯನ್ನು ಸಮಾಜವನ್ನು ಇಡೀ ಜಗತ್ತನ್ನು ತಟ್ಟಬಲ್ಲ ಅಲುಗಾಡಿಸಬಲ್ಲ ಇಂಥ ಯಾವುದೋ ಒಂದು ನಿರೀಕ್ಷೆಯಲ್ಲಿ ಕುತೂಹಲದಿಂದ ನೋಡುತ್ತಿರುವ ನೀವು ನನ್ನ ಮಾತುಗಳನ್ನು ಕೇಳಿ ನಿಮಗೆ ನಿರಾಸೆಯಾಗಿದ್ದರೆ ಕ್ಷಮಿಸಬೇಕು. ಎಂದು ಗೌಡರು ಧಾರಾಳವಾಗಿ ಹೇಳುತ್ತಾರೆ. ಪ್ರೀತಿಯಿಂದ ಆಮಂತ್ರಣ ಬಂದಿದೆ ಅವರ ಮುಂದೆ ನನ್ನ ನಿಷ್ಠುರತೆ ದುರ್ಬಲಗೊಂಡದ್ದಕ್ಕೆ ಮಾತ್ರ ಒಪ್ಪಿಕೊಂಡು ನಿಮ್ಮ ಮುಂದೆ ಕಾಣಿಸಿಕೊಂಡಿದ್ದೇನೆ. 'ಅನುಭವ ಎಂದ ಕೂಡಲೇ ನಿಮಗಿಂತ ಭಿನ್ನ ವಿಶಿಷ್ಟ ಅಥವಾ ಮಹಾ ಎನ್ನುವಂಥದ್ದನ್ನು ನೀವು ನೀರಿಕ್ಷಿಸಬಹುದು. ಹಾಗೆ ನೋಡಿದರೆ ಅತ್ಯಂತ ಸಾಮಾನ್ಯ ನಿಮಗಿಂತಲೂ ಕಡಿಮೆ ಅನುಭವವುಳ್ಳವನು ನಾನು ಬದುಕಿನಲ್ಲಿ

ಯಾವ ಮಹಾ ಸಾಧನೆಯನ್ನು ಯಶಸ್ಸನ್ನು ಗಳಿಸಿದವನು ಇನ್ನು ಬದುಕಿನ ಅನುಭವದ ಬಗ್ಗೆ ಏನು ಹೇಳಲಿ? ಹಾಗಾದರೆ ನೀನು ಎಂಥ ಕವಿ? ಎಂದು ಪ್ರಶ್ನಿಸಿದರೆ ಅಲ್ಪ ಸ್ವಲ್ಪ ಕಾವ್ಯಾಸಕ್ತಿಯ ಪ್ರತಿಷ್ಟೆಗಾದರೂ ನಾನು ಉತ್ತರಿಸುವದಷ್ಟೇ. ಕಾವ್ಯ ಕೇವಲ ಮಹಾ ಅನುಭವಿಕರ ಸ್ವತ್ತಲ್ಲ ಸಾಮಾನ್ಯನೂ ಇದರ ವೈಶಿಷ್ಟ್ಯ ಸೃಷ್ಟಿಯ ಸುಖದಿಂದ ವಂಚಿತನಾಗಬೇಕೆಂದು ನಿಯಮವೇನಿಲ್ಲ.'[೮]

ಕವಿ ಇಲ್ಲಿ ಕಾವ್ಯ ರಚಿಸಲು ಸುಕವಿ, ವರಕವಿ ಎಂಬ ಹೆಸರು ಬೇಕಾಗಿಲ್ಲ, ಒಬ್ಬ ಸಾಮಾನ್ಯ ಕವಿಯು ತನ್ನ ಸೃಜನಶೀಲ ವ್ಯಕ್ತಿತ್ವದಿಂದ ಒಳ್ಳೆಯ ಕಾವ್ಯ ರಚಿಸಬಹುದು ಎಂದು ಕವಿಯ ಅಭಿಪ್ರಾಯವಾಗಿದೆ. ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರಿಗೂ ಕವನ ಬರೆಯುವ ಹಕ್ಕಿದೆ, ಎಂದು ಕವಿಯ ಆಶಯ. ಅವರು ಇಲ್ಲಿ ಪೂರ್ವಾಗ್ರಹಪೀಡಿನಾಗುವದಿಲ್ಲ.

ಕವಿಗೆ ಕಾವ್ಯ ಸೃಷ್ಟಿಯ ಬಗ್ಗೆ ಸಂಪೂರ್ಣ ಸ್ವಾತಂತ್ರ್ಯವಿರಬೇಕಾದದ್ದು ಅಗತ್ಯ. ಹೀಗೆಂದ ಮಾತ್ರಕ್ಕೆ ಕಲೆಗಾಗಿ ಕಲೆ ಸೂತ್ರದ ನೇರವಾದ ಅರ್ಥವನ್ನು ನಾನು ನೀಡುವದಿಲ್ಲ. ಪರಿಸರದ ಬದುಕಿನ ನಿಕಟ ಸಂಬಂಧವನ್ನು ಕಳಚಿಕೊಂಡರೆ ಕಾವ್ಯ ಏನಾದೀತು? ಸಮಕಾಲೀನ ಸಂವೇದನೆಗಳಿಗೆ ತಕ್ಕಂತೆ ಸ್ಪಂದಿಸಬೇಕು. ತನ್ನ ಶೈಲಿ ನಿರೂಪನೆ ವಿಧಾನದಿಂದ ಪರಿಣಾಮಕಾರಿ ಎನಿಸಬೇಕು ನಮ್ಮ ದೇಶದಲ್ಲಿ ವಿಜ್ಞಾನ ಇದೀಗ ಕಾಲಿಟ್ಟು ಧಾರ್ಮಿಕ ಭಾವನೆ ವಿಚಲಿತಗೊಂಡಿದೆ. ಬಿರುಗಾಳಿಗೆ ಸಿಕ್ಕ ಹಡಿಗಿನಂತೆ ಕೇವಲ ಪ್ರಾಯೋಗಿಕತೆಯಲ್ಲಿ ಕಾಲ ಕಳೆಯುವದಕ್ಕಿಂತ ಒಂದು ನೈತಿಕ ಆಸಕ್ತಿಯ ಹುಡುಕಾಟದಲ್ಲಿ ಧಾರ್ಮಿಕತೆಗೆ ಪರ್ಯಾಯವಾಗುವ ಒಂದು ಶಕ್ತಿಯನ್ನು ಪಡೆಯಬೇಕಾದ ಈ ಸಂದರ್ಭದಲ್ಲಿ ಸಾಹಿತ್ಯ–ಕಾವ್ಯವನ್ನು ಅವಲಂಬಿಸಿದರೆ ತಪ್ಪೇನಿಲ್ಲ ಎನ್ನುತ್ತಾರೆ ಭೀಮನಗೌಡರು.

"ಕವಿಯು ಸರ್ವತಂತ್ರನೆಂಬ ಮಾತು ಸರ್ವವಿಧಿತವಾಗಿದ್ದರೂ, ಸೃಷ್ಟಿಯ ಕ್ಷಣದಲ್ಲಿ ಮಾತ್ರ ಕಾವ್ಯ ಇತಿಹಾಸ ಪ್ರಜ್ಞೆಯ ಒಂದು ಅಂಗವಾಗಿ ಉಳಿಯುವದನ್ನು ನಾವು ಮನಗಾನಬೇಕು. ಈ ಸಂದರ್ಭದಲ್ಲಿ ಟಿ.ಎಸ್.ಇಲಿಯೆಟ್ ನ ಮಾತು ನೆನೆಯಬಹುದು. ಅವನ ಪ್ರಕಾರ ಕವಿ ಒಂದು ಮಾಧ್ಯಮ ಅಷ್ಟೇ ಕಾವ್ಯ ಕವಿಯ ವ್ಯಕ್ತಿತ್ವದ ಅಭಿವ್ಯಕ್ತಿಯಲ್ಲ ಏಕೆಂದರೆ ಕವಿಗೆ ವ್ಯಕ್ತಿತ್ವ ಇರುವದಿಲ್ಲ. ಒಂದು ಕಡೆ ಕುವೆಂಪು ಅವರು ಈ ರೀತಿ ಹೇಳಿದ್ದಾರೆ. ಅಂತರಾತ್ಮನ ದಿವ್ಯ ವಾಣಿಯ ಮಂಜುಳಗಾನಕ್ಕೆ ನಿಮಿತ್ಯ ಮಾತ್ರ ವಾದ ಕೊಳ್ಳಲಾಗವನು ಆತನೇ ಕವಿ"[೯] ತನ್ನ ಜನಾಂಗದ ಒಂದು ಭಾಗವಾಗಿ ಕವಿ ಪರಿಣಮಿಸುತ್ತಾನೆ. ಕವಿ ಬರೆದಿದ್ದೆಲ್ಲವೂ ಒಮ್ಮೆಮ್ಮೆ ಸ್ವೀಕೃತವಾಗುವುದಿಲ್ಲ. ಕಾಲಕ್ಕನುಸಾರವಾಗಿ ಕವಿಯ ಮೂಲಕ ಅಭಿವ್ಯಕ್ತಿಗೊಳ್ಳಬೇಕಾದ ಜನಾಂಗ ಪ್ರಜ್ಞೆಯೂ ಕೂಡ ತನ್ನ ವ್ಯಕ್ತಿತ್ವವನ್ನು ಹುರಿಗೊಳಿಸಬೇಕಾದ ಅಗತ್ಯ ಕವಿಗೆ ಖಂಡಿತವಾಗಿಯೂ ಇರುತ್ತದೆ ಎಂದು ಹೇಳಬೇಕಾಗುತ್ತದೆ.

ಈ ದೃಷ್ಟಿಯಿಂದ ನಿರೂಪಣಾ ವಿಧಾನ ಆಯಾ ಕಾಲಕ್ಕೆ ತಕ್ಕಹಾಗೆ ಪ್ರಮುಖ ಸ್ಥಾನವನ್ನು ಪಡೆಯುತ್ತದೆ. ಇಂದು ಕಾವ್ಯ ಕೇವಲ ಪಂಡಿತ ವರ್ಗದ ಸ್ವತ್ತಾಗದೇ ಜನಸಾಮಾನ್ಯನ ನೆಲದಲ್ಲಿ ಇಳಿದು ಅವನ ಮನಸ್ಸನ್ನು ಅರಿತುಕೊಂಡು. ತನ್ನ ಕಲೆಗಾರಿಕೆಯಿಂದ

ಕೌಶಲ್ಯದಿಂದ ಮನುಷ್ಯನ ರಚನಾತ್ಮಕ ಶಕ್ತಿಯನ್ನು ಪ್ರಚೋದಿಸಿ ತನ್ನ ವೈಶಿಷ್ಟ್ಯವನ್ನು ಮೆರೆಯಬೇಕಾದದ್ದು ಇಂದಿನ ಕಾವ್ಯದ ಪ್ರಮುಖ ಹೊಣೆಯಾಗಿದೆ. ಇಂಥ ಮನದ ಇಂಗಿತವನ್ನು ವ್ಯಕ್ತಪಡಿಸುವ ಕೃತಿಗಳು ಹೊರಬರಬೇಕಾಗಿದೆ. ನಮ್ಮ ಬದುಕು ಯಶಸ್ವಿಯಾಗಿ ಕಾಣಬೇಕಾದೆ ಎಂದು ಭೀಮನಗೌಡರು ಅಭಿಪ್ರಾಯಪಡುತ್ತಾರೆ.

ಚನ್ನವೀರ ಕಣವಿ ಅವರ 'ಕಾಮನ್ ಸೆನ್ಸ' ಕಾವ್ಯ

ನವೋದಯದಿಂದ ಹಿಡಿದು ಇಂದಿನ ವರೆಗೂ ಅವ್ಯಾಹತವಾಗಿ ಕವನ ರಚಿಸುತ್ತ ಬಂದಿರುವ, ಕಣವಿಯವರ ವೈವಿಧ್ಯಮಯವಾದ ಕಾವ್ಯವನ್ನು ನಮ್ಮ ಕನ್ನಡ ಸಾರಸ್ವತ ಲೋಕಕ್ಕೆ ನೀಡಿದ ಕೀರ್ತಿ ಕಣವಿಯವರದು. ರಮ್ಯವನ್ನು, ನವ್ಯವನ್ನು ಮೇಳೈಸಿಕೊಂಡು 'ಸಮನ್ವಯ' ಕವಿಯಾಗಿದ್ದಾರೆ ಎಂದು ಕೆಲವರು ಕರೆದರೆ ಕಣವಿಯವರನ್ನು 'ಭಾವಗೀತಾತ್ಮಕ ವಾಸ್ತವತೆಯ ಕವಿ' ಎಂದು ಇನ್ನು ಕೆಲವರು ಕರೆದರು.

ಅವರವರ ಭಾವನೆ ನೋಡುವರ ದೃಷ್ಟಿಯಿಂದ ಅವರನ್ನು ಹಾಗೆ ಕಂಡರು. ಆದರೆ ಕೀರ್ತಿನಾಥ ಕುರ್ತಕೋಟಿ ಅವರ ಒಂದು ಮಾತು ಮುಖ್ಯವೆನಿಸುತ್ತದೆ. 'ಮುಖ್ಯವಾಗಿ ಕಣವಿಯವರ ಕಾವ್ಯ ಆತ್ಮ ಚರಿತ್ರೆಯಿಂದ ಕೂಡಿದ್ದು. ಅಂದರೆ ಸ್ವಾನುಭವವೇ ಅದರ ಜೀವಾಳವಾಗಿದೆ. ಮುಗ್ಧಸಂಸ್ಕೃತಿಯ ಗ್ರಾಮೀಣ ಪರಿಸರದಿಂದ ಶಹರದ ನಾಗರಿಕ ಪರಿಸರಕ್ಕೆ ಕಾಲಿಟ್ಟ ವ್ಯಕ್ತಿ ಅನುಭವ ಸಂಸ್ಕೃತಿಯನ್ನು ಎದುರಿಸಿ, ಎರಡರ ಮಧ್ಯ ಆಯ್ಕೆಗಾಗಿ ತಡಕಾಡಬೇಕಾಗುತ್ತದೆ. ನಿಸರ್ಗದ ಮಡಿಲಲ್ಲಿ ತನ್ಮಯತೆಯಿಂದ ತುಂಬು ಹೃದಯದಿಂದ, ಬಾಲ್ಯವನ್ನು ಸೂರೆಗೊಂಡ ಕವಿಗೆ ನಾಗರಿಕ, ಹೊಸ ಪರಿಸರ, ಒಂದು ಆಹ್ವಾನವಾಗಿ ಪರಿಣಮಿಸಿ ಕವಿಯನ್ನು ಸಹ ಸ್ಪಂದಿಸಲು ಒಪ್ಪಂದಕ್ಕೆ ಅಣಿಗೊಳಿಸಲು ಪ್ರಯತ್ನಿಸುತ್ತದೆ.'[೧೦] ಹೀಗಾಗಿ ಕಣವಿಯವರ ಹೃದಯ ಮುಖ್ಯವಾಗಿ ನಿಸರ್ಗದ ಬಗ್ಗೆ ಮಿಡಿಯುತ್ತಿದ್ದದು. ಆಧುನಿಕತೆಯ ಬಗ್ಗೆ ಅವರು ಬೆನ್ನು ತಿರುಗಿಸಿದವರು ಎಂಬ ಮಾತು ಸ್ವಲ್ಪ ಸಮರ್ಪಕ ಎನಿಸುತ್ತದೆ. ಅವರ ಕೆಲವು ಕವನಗಳಲ್ಲಿ ನಿಸರ್ಗ ಸೌಂದರ್ಯವು ವೈವಿಧ್ಯಮಯವಾಗಿ ಬರುತ್ತವೆ. ಅದು ಸತ್ಯವಾಗಿದೆ ಅದು ಅವರ ಸ್ವಾಭಿಮಾನದ ಒಂದು ಭಾಗವಾಗಿ ಬರುತ್ತದೆ. ಪ್ರೀತಿ ವಾಲ್ಸ್ಯದಂತೆ ಕಣವಿ ಅವರು ಇಲ್ಲಿ ವಿಶ್ವಾಸ ಒಂದು ಜಟಿಲ ಪ್ರಶ್ನೆಯಾಗಿ ಉಳಿದಿರುವದು ನಾಗರಿಕ ಪ್ರಜ್ಞೆ ಪರಿಣಾಮವಾಗಿ ಇರಬೇಕು.

ವಸ್ತು ಯಾವುದೇ ತೆಗೆದುಕೊಂಡರೂ ಕಣವಿಯವರ ಕಾವ್ಯದಲ್ಲಿ ಪ್ರತಿಸಲ ಎಚ್ಚರ ಕಂಡು ಬರುತ್ತದೆ. ಹೊಸ ಅನುಭವಗಳ ಬಗ್ಗೆ ಬರೆಯುವಾಗ ಹಿನ್ನಲೆಯಾಗಿ ನೈಸರ್ಗಿಕತೆಯ, ಮುಗ್ಧತೆಯ ಅಂಶಗಳು ಅನೇಕ ಕವನಗಳಲ್ಲಿ ಕಂಡು ಬರುತ್ತವೆ. ನಿಸರ್ಗದ ಬಗ್ಗೆ ಬರೆಯುವಾಗಲೂ ಆಧುನಿಕ ಪ್ರಜ್ಞೆ ಜಾಗೃತವಾಗಿರುವದನ್ನು 'ಮಧ್ಯಾಹ್ನದ ಮಜಲು' ಕವನಗಳಲ್ಲಿ ಕಾಣಬಹುದು. ಹಲವಾರು ಆಧುನಿಕ ಕವನಗಳಲ್ಲಿ ವ್ಯಂಗ್ಯ, ವಿಡಂಬನೆಯ, ಧಾಟಿ ಇದ್ದರೂ ಅಂಥದೇ ದಾಟಿ ನಿಸರ್ಗದ ಬಗೆಗಿನ ಕೆಲವು ಕವನಗಳಲ್ಲಿ ಕಂಡು

ಬರುತ್ತವೆ. ಆಧುನಿಕತೆಗೆ ಕವಿ ತನ್ನ ಮನಸ್ಸನ್ನು ಮುಚ್ಚಿಕೊಳ್ಳುವದಿಲ್ಲ, ವಿಶ್ಲೇಷಣೆ ವಿವರಗಳಲ್ಲಿ ಇದು ಸೂಚ್ಯವಾಗಿ ಕಂಡುಬರುತ್ತದೆ. ಆದರೆ ಅದರ ಜೊತೆ ಗಾಢವಾದ ಸಂಬಂಧ ಸಾಧ್ಯವಾಗಿದೆ. ಏಕೆಂದರೆ ಕವಿಯಲ್ಲಿ ಹೊಂದಾಣಿಕೆ ಗುಣಇರುವದು ಅಲ್ಲಿ ಸ್ಪಷ್ಟವಾಗುತ್ತದೆ.

ಕಣವಿಯವರಲ್ಲಿ ಕಂಡು ಬರುವ ವಿಶಾದಕ್ಕೆ ಮೂಲ ಕಾರಣವನ್ನು ಇಲ್ಲಿ ಗುರುತಿಸಬಹುದು. ಆಧುನಿಕತೆಯೆಂದರೆ, ಸಮುದಾಯದ ಹೆಸರಿನಲ್ಲಿ ವಸ್ತು ಸಂಸ್ಕೃತಿಯನ್ನು ಪ್ರದರ್ಶಿಸುವದೇ ಆಗಿದೆ, ವಸ್ತು ಉತ್ಪಾದನೆ, ಹಣಗಳಿಕೆ ಬದುಕಿನ ಉದ್ದೇಶವಾಗಿದೆ ಹೊರತು ವ್ಯಕ್ತಿ ಇಲ್ಲಿ ಗೌನವಾಗಿದ್ದಾನೆ. ರೇಲ್ವೇ ಗಾಡಿಯ ಸಂಬಂಧದಲ್ಲಿ ವ್ಯಕ್ತಿಯ ಅನಿಸಿಕೆಗಳಿಗೆ ಯಾವ ಬೆಲೆಯೂ ಇಲ್ಲ ನಿಲ್ದಾಣದಿಂದ ನಿಲ್ದಾಣಕ್ಕೆ ಓಡುತ್ತಿರುವಾಗ ಯಾರು ಹತ್ತುವವರು ಯಾರು ಇಳಿಯುವವರು ಮುಖ್ಯವಲ್ಲವೇ ಅಲ್ಲ. ಸಮುದಾಯವನ್ನು ಮುಂದೆ ತಳ್ಳಿಕೊಂಡು ಹೋಗುವ ಗಾಡಿ ಆಧುನಿಕತೆಗೆ ಒಂದು ಒಳ್ಳೆಯ ಪ್ರತೀಕ. ಇದರಲ್ಲಿ ಒಂದು ಪ್ರಚಂಡ ಶಕ್ತಿ ಅಡಗಿರುವದೆಂಬ ಕಾರಣಕ್ಕಾಗಿ ಗಾಡಿಯ ಬಗ್ಗೆ ಕುತೂಹಲ ಆದರೆ ವ್ಯಂಗ್ಯ ಭಾವನೆಯೂ ಇದೆ. ಇಡೀ ಬದುಕೇ ಒಂದು ಪಯಣ ಎಂಬ ಸಾಂಪ್ರದಾಯಿಕ ರೂಪಕದೊಡನೆ ಬೆರೆತಿರುವದರಿಂದ ವ್ಯಂಗ್ಯಕ್ಕೆ ವಿಶೇಷವಾದ ಅರ್ಥ ಒದಗಿದೆ. ಇಡೀ ಕವನ ಒಂದು ರೀತಿಯ ಅಸಂಗತ ಭಾವನೆಯನ್ನು ಅಚ್ಚರಿಗೊಳಿಸಲು ಒಂದು ದಾರಿಯಾಗಿದೆ.

ಪರಿವರ್ತನೆಗಾಗಿ ಕವಿಯಲ್ಲಿ ಕಾತರವಿದೆ ಅದನ್ನು ನಾವು ಈ ಕವನದ ಮೂಲಕ ನೋಡಬಹುದು.

“ವರ್ತನೆಯ ನರ್ತನಕ್ಕೆ ಪರಿವರ್ತನೆಯ ಸೊಬಗು
ಕಂಡ ವೃತ್ತಗಳ ಝುರಿ ತೊರೆದು ನಡುವೆ
ಹಸುರಿಗೆ ಗದ್ಯರುದ್ಯಾನ”[೧೧]

ಈ ಪರಿವರ್ತನೆಯು ನೈಸರ್ಗಿಕ ಅಂಶಗಳಿಗೆ ಪೋಷಕವಾಗಿ ಹೊಂದಿಕೊಂಡೇ ಬರಬೇಕು. ಎಂದು ಕವಿಯ ಅಪೇಕ್ಷೆ ಇಲ್ಲವಾದರೆ, ಅದು ಜೀವಂತ ಗತಿ ವ್ಯಕ್ತಿಯನ್ನು ನಿರ್ಲಕ್ಷಿಸಿ ಅವನ ಆರೋಗ್ಯಪೂರ್ಣವಾದ ಬೆಳವಣಿಗೆಗೆ ಸಹಾಯಕವಾಗಲಾರದು ಆಧುನಿಕತೆಯಿಂದ ಏನು ಪ್ರಯೋಜನ? ಅಂದರೆ, ಆಧುನಿಕತೆ, ವೈಜ್ಞಾನಿಕತೆ ನಿರರ್ಥಕ ಎಂಬ ಭಾವನೆ ಕಣವಿಯವರ ಕಾವ್ಯದ ಆಶಯವಲ್ಲ. ಆಧುನಿಕ ವಸ್ತು ಸಂಸ್ಕೃತಿಯಲ್ಲಿ ಮೂಲ ವ್ಯಕ್ತಿ ದೌರ್ಜನ್ನಕ್ಕೆ ಒಳಗಾಗಿದ್ದು, ವ್ಯಕ್ತಿತ್ವದ ವಾಸ್ತವಿಕ ಆಶಯಗಳು ಕುಗ್ಗಿದ್ದು ಕವಿಗೆ ಮರೆಯಲಾಗದ ಅಂಶ. ಈ ವಿನಾಶಕಾರಿ ಕೆಲಸಗಳಿಗಾಗಿ ಮಾತ್ರ ಆಧುನಿಕತೆ ಕಣವಿಯವರ ಕೆಂಗಣ್ಣಿಗೆ ಪಾತ್ರವಾಗಿದೆ. ಆದರೆ ಕವಿಗೆ ಅದರ ಜ್ಞಾನವಿದೆ ಈ ವಿಕೃತಿಯೇ ಸತ್ಯವಾದದು ಅಲ್ಲ ಎಂಬುದು ಬದಲಾವನೆಯ ಬಗೆಗೆ ಆತ್ಮ ವಿಶ್ವಾಸ ಇದೆ. ಆದ್ದರಿಂದಲೇ ಅವರಿಗೆ ಕಾಲದ ಬಗ್ಗೆ ಗೌರವ ಇದೆ. ಕಣವಿಯವರ ಕಾಲ ಮನುಷ್ಯನ ನಿರ್ಣಾಯಕ ಶಕ್ತಿಯನ್ನು ಅವಲಂಬಿಸಿದ್ದು ಎನಿಸುತ್ತದೆ. ಪ್ರಕೃತಿ ಪುರುಷ ಈ ಶಕ್ತಿಗಳನ್ನೊಳಗೊಂಡಿದ್ದು ಕಾಲ ಅದರ ರಹಸ್ಯಮಯವಾದ ರಚನಾತ್ಮಕ ಜೀವಂತಿಕೆಯ

ಗುಣದ ಬಗೆಗೆ ಕವಿಗೊಂದು ಭರವಸೆ ಆಸೆಯೂ ಹಿರಿದಾಗಿದೆ.

ಅವರ ಜೀರ್ಣೋದ್ದಾರ ಕವನದಲ್ಲಿ ಸಂಪ್ರದಾಯಪ್ರಿಯತೆ ಕಂಡುಬರುವದಿಲ್ಲ. ಎಂದು ಯಾರಾದರೂ ವಾದ ಮಾಡಬಹುದು. ಕಣವಿಯವರನ್ನು ವೈದಿಕ ಸಂಸ್ಕೃತಿಗೆ ಸೇರಿಸಹುದು ಎಂದು ಗೌಡರು ಹೇಳುತ್ತಾರೆ. ಹೀಗೆ ಕೆಲವೇ ಕವನಗಳ ಮೂಲಕ ಒಬ್ಬ ಕವಿಯ ಮೂಲ ಮನೋಧರ್ಮವನ್ನು ಅಳೆಯುವದು ಸಮರ್ಪಕವಾದೀತೆ? ಸಮಗ್ರವಾಗಿ ಅಧ್ಯಯನ ಮಾಡುವದು ಬಹಳ ಅವಶ್ಯಕತೆಯಿದೆ. ಯಾವುದೇ ಜನಾಂಗ ತನ್ನ ಪರಿಸರದಲ್ಲಿರುವ ಪರಂಪರೆಯ ಪ್ರಜ್ಞೆಯನ್ನು ಸಂಪೂರ್ಣವಾಗಿ ಕಳೆದುಕೊಂಡು ಮುಕ್ತ ಮನಸ್ಸಿನಿಂದ ಆಧುನಿಕತೆಯನ್ನು ಸ್ವಾಗತಿಸಲು ಸ್ವೀಕರಿಸಲು ಸಾಧ್ಯವಾದೀತೇ.? ಆ ಜನಾಂಗದ ಸಂವೇದನೆಯಲ್ಲಿ ಹೋಲಿಕೆಯ ರೂಪದಲ್ಲಾದರೂ ಸಮಾನಾಂತರವಾಗಿ ಹಳೆಯ ಸಂಸ್ಕೃತಿಯ ನೆನಪು ಇಣುಕುವದು ಸಹಜವೇ.? ನವೋದಯ ಕಾಲಘಟ್ಟದಲ್ಲಿ ಬೆಳೆದು ಬಂದರೂ ಕಣವಿಯವರಲ್ಲಿ ಜನತೆಯ ಮೌಲ್ಯಗಳ ಬಗ್ಗೆ ಅವರ ಮನಸ್ಸಿನ ತುಡಿತ ಕಡಿಮೆ ಎಂದೇ ಹೇಳಬೇಕು. ಹಾಗೇನಾದರೂ ಇದ್ದರೆ ಸ್ವಅನುಭವದ ಮೂಲಕವೆ ಅಭಿವ್ಯಕ್ತಿ ಪಡೆಯುತ್ತವೆ.

'ಕಣವಿಯವರು ಹಳೆಯ ಕಾಲದ ವೃಕ್ಷವಾಗಿ ಹಳೆಯ ನೀರು, ಗಾಳಿಗಳನ್ನು ಬಳಸಿಕೊಂಡು ಬೆಳೆದರು. ಆಧುನಿಕತೆಯ ಗೊಬ್ಬರದ ಆರೋಗ್ಯಕರ ಅಂಶಗಳ ನಿರಾಕರಿಸಲಾರು. ಯಾವುದಕ್ಕೂ ಕಣವಿಯವರಿಗೆ ವ್ಯಕ್ತಿತ್ವ ಮುಖ್ಯ. ಅದು ಮಾನವೀಯ ನೆಲೆಯ ಮೇಲೆ ಉನ್ನತಿ ಸಾಧಿಸುವ ಪರಿ ಮುಖ್ಯ. ಹೆಪ್ಪುಂಡ ಹಾಲು ತುಪ್ಪವಾಗುವದೊಂದು ಕ್ರಮ. ತುಪ್ಪ ಒಡೆದ ಹಾಲನ್ನು ಕಡೆದು ನೋಡುವ ಶ್ರಮ (ಹಂಸ-ಕ್ಷೀರ) ಆಧುನಿಕತೆಯನ್ನು ಈ ಮಾನವೀಯ ವ್ಯಕ್ತಿತ್ವಕ್ಕೆ ಸಾಣಿ ಹಿಡಿಯುವಂತೆ ಸಾಂಪ್ರದಾಯಕತೆಯನ್ನು ತಮ್ಮ ವ್ಯಕ್ತಿತ್ವಕ್ಕೆ ಬಳಸಿಕೊಳ್ಳುತ್ತಾರೆ'.[೧೨] ಕುರುಡುತನದಿಂದ ಯಾವುದನ್ನೂ ಸ್ವೀಕರಿಸಲಾಗದು. ವಿಜ್ಞಾನದ ಕುರುಡ ಬಳಕೆಯು ಹೇಗೆ. ಅಪಾಯಕಾರಿಯೋ ಹಾಗೆ ಧರ್ಮದ ಮೂಢ ನಂಬಿಕೆ ಆಚರಣೆ ಕೂಡ ಯಾವುದಕ್ಕೂ, ಮೇಲೆ ಒಂದು ಎಚ್ಚರ ಬುದ್ಧಿಯ ಘಂಟೆ ಮಿಡಿಯುತ್ತಿರಬೇಕು. ಮನುಷ್ಯನಿಗೆ ಬೇಕಾದ ಮೂಲಭೂತವಾದ ನಿಸರ್ಗ ಪ್ರಿಯತೆಯನ್ನು ಪ್ರತಿನಿಧಿಸುವ ಕಣವಿಯವರ ಪ್ರವೃತ್ತಿಯಲ್ಲಿ ಈ ಎಚ್ಚರ ಅಡಗಿಕೊಂಡಿರುವದರಿಂದಲೇ ಸಾಂಪ್ರದಾಯಿಕದ ಎಷ್ಟೋ ಒಳ್ಳೆಯ ಅಂಶಗಳನ್ನು ಇವರ ಕವನ ಒಳಗೊಳ್ಳುತ್ತವೆ. ಆಧುನಿಕ ಯಾಂತ್ರಿಕ ಅಹಿತಕರ ಅಶಾಂತಿಯ ಬದುಕಿನಲ್ಲಿ ಸಿಕ್ಕವರು ಪರಂಪರೆಯ ಹಿನ್ನಲೆಯಲ್ಲಿ ಸಮಾನಾಂತರ ನೆನಪಿನಲ್ಲಿ ಸುಳಿಯುವ ಗತವೈಭವದ ಪಾಳು ಬಿದ್ದ ಗುಡಿಗೆ ಜೀರ್ಣೋದ್ದಾರ ಗೈದು ಶಾಂತಿ ಪಡೆಯಬೇಕೆಂಬುದು ಒಂದು ರೀತಿಯಲ್ಲಿ ಅಧ್ಯಾತ್ಮಿಕತೆಯಲ್ಲಿ ತೊಡಗಿಕೊಳ್ಳುತ್ತಾರೆ. ಬದುಕಲು ಹಚ್ಚುವ ರಚನಾತ್ಮಕ ಗುಣಗಳು ಕಣವಿಯುವರಿಗೆ ಬಹು ಮುಖ್ಯ. ಸಾಂಪ್ರದಾಯಕತೆಯೇ ಇರಲಿ, ಆಧುನಿಕತೆಯೇ ಇರಲಿ ತಟಸ್ಥವಾಗಿದ್ದುಕೊಂಡೇ ಬೇರುಗಳು ಹರಡಿ ಬೆಳೆಯುವ ವೃಕ್ಷದಂತೆ ಜೀವಂತವಾಗಿರಬೇಕೆಂಬುದು ಕಣವಿಯವರ ಆಶಯ. ಯಾವುದೇ ವ್ಯಕ್ತಿಯನ್ನು ಆದರ್ಶವಾಗಿ ಇಟ್ಟುಕೊಳ್ಳುವದು ಅವರ ವಿಶೇಷತೆ 'ಬಸವಣ್ಣನಿರಲಿ'.

[illegible]

'ಬಸವನಾಳ' ಇರಲಿ 'ಬೇಂದ್ರೆ' ಲಾಲಬಹಾದ್ದೂರ ಶಾಸ್ತ್ರಿ ಇರಲಿ ವಿಭಿನ್ನ ರೀತಿಯ ವ್ಯಕ್ತಿಗಳು ಈ ಒಂದು ಪಾತಳಿಯ ಮೇಲೆ ಕಣವಿಯವರಿಗೆ ಮಹತ್ವದವರಾಗಿ ಕಾಣುತ್ತಾರೆ. ಅಂಥ ವ್ಯಕ್ತಿಗಳು ಕಣವಿಯವರ ಕಾವ್ಯದಲ್ಲಿ ಸ್ಥಾನ ಪಡೆಯುವದು ಮುಖ್ಯವಾಗಿ ಅವರ ಮಹಾತತ್ವಜ್ಞಾನಿಗಳು, ಮಹಾಮೇಧಾವಿಗಳು ಅಥವಾ ಸಮಾಜ ಸುಧಾರಕರು ಜಗತ್ತಿನ ದಿಕ್ಕನ್ನೇ ಬದಲಾಯಿಸಿದಂತವರು ಎಂಬ ಕಾರಣಕ್ಕಾಗಿ ಮಾತ್ರ ಸಮಾಜವಾದದ ಈ ಯುಗದಲ್ಲಿ ಇದಕ್ಕಿಂತ ಹೆಚ್ಚಿನ ಸಿದ್ಧಾಂತ ಏಕೆ ಬೇಕು.?'[೧೩] ಪ್ರತಿಯೊಬ್ಬ ವ್ಯಕ್ತಿಯು ಸಮಾಜದಲ್ಲಿ ಎಲ್ಲ ವಿಚಾರಗಳನ್ನು ಮಾಡುತ್ತಿರಬೇಕು. ಇದು ಪ್ರತಿಯೊಬ್ಬನ ಜವಾಬ್ದಾರಿಯಾಗಿದೆ. ಇಂಥ ಪ್ರಜ್ಞಾವಂತ ಯುಗದಲ್ಲಿ ಕಣವಿಯವರಂಥ ವಿಚಾರಿಸಬಲ್ಲ ವ್ಯಕ್ತಿಗಳ ಅಗತ್ಯ ಬಹಳಷ್ಟಿದೆ. ಆದ್ದರಿಂದ ಕಣವಿಯವರ 'ಕಾಮನ್ ಸೆನ್ಸ' ಕಾವ್ಯದುದ್ದಕ್ಕೂ ಇಂಥ ವಿಚಾರಗಳು ಕಂಡು ಬರುವದರಲ್ಲಿ ಎರಡು ಮಾತಿಲ್ಲ. ಹೀಗಾಗಿ ಅವರಲ್ಲಿ ಒಂದು ದೊಡ್ಡ ತತ್ವ ಅಡಗಿಕೊಂಡಿದೆ. ಜಾಗ್ರತನದಿಂದ ತಮ್ಮ ಸ್ವತಂತ್ರವಾದ ಇರುವಿಕೆಯನ್ನು ಉಳಿಸಿಕೊಂಡಿದ್ದಾರೆ ಎಂದು ಭೀಮನಗೌಡರ ಅವರು ಸ್ಪಷ್ಟವಾಗಿ ಹೇಳುತ್ತಾರೆ.

೪.೨ ಸಂಪಾದನಾ ಲೇಖನಗಳು

ಭೀಮನಗೌಡರ ಅವರು ಎರಡು ಕೃತಿಗಳಲ್ಲಿ ಸಂಪಾದಕರಾಗಿ ಕಾರ್ಯನಿರ್ವಹಿಸಿದ್ದಾರೆ. ಅವು ತುಂಬಾ ಗಮನಾರ್ಹ ಕೃತಿಗಳಾಗಿವೆ ಅವುಗಳನ್ನು ಈ ಕೆಳಗಿನಂತೆ ನೋಡಬಹುದು.

೧. 'ಮರೆಯದ ಮಜಲು' (ಕವನ ಸಂಕಲನ) ಇದರಲ್ಲಿ ೨೧ ಕವನ ಸಂಕಲನಗಳಿವೆ ಮೂರು ಜನ ಪ್ರಾಧ್ಯಾಪಕರು ಸೇರಿಕೊಂಡು ಆ ಕೃತಿಯನ್ನು ಸಂಪಾದನೆ ಮಾಡಿದ್ದಾರೆ. ಸಂಪಾದಕರ ಹೆಸರುಗಳು ಹೀಗಿವೆ.

೧. ಪ್ರೊ. ಎಚ್.ಎಸ್.ಭೀಮನಗೌಡರ
೨. ಪ್ರೊ. ಎಲ್.ವ್ಹಿ.ಪಾಟೀಲ
೩. ಪ್ರೊ. ಡಿ.ವ್ಹಿ.ಪುರಾಣಿಕ

ಈ ಕವನ ಸಂಕಲನದಲ್ಲಿ ಬರುವ ಕೆಲವು ಕವಿತೆಗಳನ್ನು ಕುರಿತು ಹೀಗೆ ಅವಲೋಕನ ಮಾಡಬಹುದು. ತಲೆಯಿಂದ ತಲೆಗೆ, ಬಿಡದೀ ಮಾಯೆ, ಗುಟ್ಟಾದ ಪದ, ತ್ರೀಮೂರ್ತಿ, ನೀರು, ಚೈತನ್ಯ, ಈ ಕವಿತೆಗಳಲ್ಲಿ ಸಮಾಜದ ಪ್ರತಿಬಿಂಬ ಮೈವೆತ್ತಿ ನಿಂತಿದೆ. ಜಾತಿ ಬೇಲಿ, ಕ್ಯಾನ್ಸರ, ವ್ಯತ್ಯಾಸ, ಹೊಲಸ ಅಂಗಿ ಕಳೆಯಿರಿ ಈ ಕವನಗಳಲ್ಲಿ ಸಮಾಜದ ಅನಿಷ್ಟ ಸಂಪ್ರದಾಯಗಳ ಹಾಗೂ ಅವುಗಳ ನಿವಾರಣೆಗೆ ಉಪಾಯ ಸ್ಪಷ್ಟವಾಗಿ ಕಾಣಿಸಿಕೊಳ್ಳುತ್ತವೆ.

ಹೀಗೆ ೨೧ ಕವನಗಳು ತಮ್ಮದೇ ಆದ ವೈಶಿಷ್ಟ್ಯ ರೂಪದಲ್ಲಿ ಮೂಡಿಬಂದಿವೆ. ಭೀಮನಗೌಡರ ಅವರ ಇನ್ನೊಂದು ಸಂಪಾದನಾ ಕೃತಿ ಎಂದರೆ 'ಸಾರ್ಥಕ' ಎಂಬ

ಒಂದು ಬೃಹತ್ ಗ್ರಂಥದ ಸಂಪಾದಕರಾಗಿ ಮೂರು ಜನ ಪ್ರಾಧ್ಯಾಪಕರು ಕೆಲಸ ನಿರ್ವಹಿಸಿದ್ದಾರೆ. ಆ ಗ್ರಂಥದ ಹೆಸರು ಹೀಗಿದೆ. ಲಿಂ.ಅಪ್ಪಣಗೌಡ ಪಾಟೀಲ ಮತ್ತು ಲಿಂ.ಎಂ.ಪಿ.ಪಾಟೀಲ ಜನ್ಮ ಶತಮಾನೋತ್ಸವ ಸಂಸ್ಮರನ ಗ್ರಂಥ. ಇದರ ಸಂಪಾದಕರಾಗಿ ಕಾರ್ಯನಿರ್ವಹಿಸಿದ ಪ್ರಾಧ್ಯಾಪ್ರಕರ ಹೆಸರುಗಳು ಹೀಗಿವೆ.

೧. ಪ್ರೊ.ಎಚ್.ಎಸ್.ಭೀಮನಗೌಡರ

೨. ಪ್ರೊ.ಎಲ್.ವ್ಹಿ. ಪಾಟೀಲ

೩. ಡಾ॥ ಗುರುಪಾದ ಮರಿಗುದ್ದಿ

ಹೀಗೆ ಭೀಮನಗೌಡರ ಅವರು ತಮ್ಮ ಸೇವಾ ಬದುಕಿನೊಂದಿಗೆ ಇಂಥ ಸಾಹಿತ್ಯೇತರ ಚಟುವಟಿಕೆಯನ್ನು ಮಾಡಿರುವ ಕೀರ್ತಿ ಅವರಿಗೆ ಸಲ್ಲುತ್ತದೆ.

೪.೩ ಮುನ್ನುಡಿಗಳು ಮತ್ತು ಬೆನ್ನುಡಿಗಳು

ಕವಿ ಭೀಮನಗೌಡರ ಅವರು ಕವಿಗಳು ಬರೆದಿರುವ ಕೃತಿಗಳಿಗೆ ಸ್ವಲ್ಪ ಮುನ್ನುಡಿಗಳು ಅಥವಾ ಬೆನ್ನುಡಿಗಳನ್ನು ಬರೆದುಕೊಡಿ ಎಂದಾಕ್ಷಣ ಯಾರಿಗೂ ಇಲ್ಲ ಎನ್ನುವ ಜಾಯಮಾನದವರಲ್ಲ. ತಕ್ಷಣ ಒಪ್ಪಿಕೊಳ್ಳುವ ಸ್ವಭಾವದವರು. ಹೀಗಾಗಿ ಐದಾರು ಪುಸ್ತಕಗಳಿಗೆ ಇವುಗಳನ್ನು ಬರೆದುಕೊಟ್ಟಿರುವ ಉಲ್ಲೇಖಗಳು ನಮಗೆ ಸಿಗುತ್ತವೆ. ಅವುಗಳನ್ನು ಈ ಕೆಳಗೆ ವಿವರಿಸಲಾಗಿದೆ.

ಪ್ರೊ.ಎಲ್.ವ್ಹಿ.ಪಾಟೀಲ ಅವರ ಕವನ ಸಂಕಲನ 'ಗುಬ್ಬಕ್ಕಾ ಬಾಗಿಲು ತೆಗೆಯೇ' ಈ ಕವನ ಸಂಕಲನಕ್ಕೆ ಭೀಮನಗೌಡರು ಹಿನ್ನುಡಿಯನ್ನು ಬರೆದಿದ್ದಾರೆ. ಅವರು ಕವನದ ಆಶಯ, ಧೋರಣೆಗಳನ್ನು ಗಮನದಲ್ಲಿಟ್ಟುಕೊಂಡು ತಮ್ಮದೇ ಆದ ನಿರೂಪಣೆಯಲ್ಲಿ ಹೀಗೆ ಹೇಳುತ್ತಾರೆ

'ಸಮಗ್ರ ಬದುಕಿನ ನೀರಿನಲ್ಲಿ ಕಣ್ಣು ತೆರೆಯುತ್ತಾರೆ, ನೋಡುತ್ತಾರೆ, ಮಾತನಾಡುತ್ತಾರೆ, ಮುಳುಗುತ್ತಾರೆ, ಮುಗುಳ್ನಗುತ್ತಾರೆ, ಸ್ನೇಹ ಮಾಡುತ್ತಾರೆ, ಮಜ ಎನ್ನುತ್ತಾರೆ. ಪೌರಾಣಿಕ ಹಾಗೂ ಆಧುನಿಕ ಪ್ರತಿಮೆಗಳನ್ನು ಉತ್ತರ ಕರ್ನಾಟಕದ ಲಯಬದ್ಧವಾದ ಹೆಕ್ಕಿ ಮನಸೆಳೆಯುತ್ತಾರೆ. ಕಾವ್ಯದಲ್ಲಿ ಹೇಗೋ ಹಾಗೆ ಬದುಕಿಗೊಂದು ಕಲೆಬೇಕಲ್ಲವೇ.? ವ್ಯಂಗ್ಯ ದಾಟಿಯ ಮೂಲಕ ಅದನ್ನು ಅಳವಡಿಸಿಕೊಳ್ಳುತ್ತಾರೆ.' ಹೀಗೆ ಹಿನ್ನುಡಿಯಲ್ಲಿ ಕವಿಯ ಆಶಾಮನೋಭಾವನೆಯನ್ನು ವ್ಯಕ್ತ ಪಡಿಸಿದ್ದಾರೆ.

ಡಾ॥ಗುರುಪಾದ ಮರಿಗುದ್ದಿಯವರ 'ಶ್ರೀಸಾಮಾನ್ಯರಿಗಾಗಿ ಶ್ರೀ ಕುವೆಂಪು' ಮತ್ತು 'ಶ್ರೀ ರಾಮಾಯಣ ದರ್ಶಣಂ' ಎಂಬ ಕೃತಿಗೆ ಮುನ್ನುಡಿಯನ್ನು ಬರೆದಿದ್ದಾರೆ. ಶ್ರೀ ಕುವೆಂಪು ಅವರ ಬಗ್ಗೆ ಅವರು ಬರೆದ ಶ್ರೀ ರಾಮಾಯಣ ದರ್ಶಣಂ ಬಗ್ಗೆ ಕೇಳದ ಕನ್ನಡಿಗನಿಲ್ಲ, ಎಂದು ಭೀಮನಗೌಡರು ಮೊದಲನೆಯ ಸಾಲಿನಲ್ಲಿ ಹೇಳುವದು ಅರ್ಥಪೂರ್ಣವಾಗಿದೆ.

'ಅವರು ನಂಬಿದ್ದ ಉದಾತ್ತ ಮಾನವೀಯ, ಪ್ರಜಾಸತ್ತಾತ್ಮಕ ಮೌಲ್ಯಗಳ ಬಗ್ಗೆ ಗಾಢವಾಗಿ ಆಸಕ್ತಿ ಮೂಡಿತು. ಬಹಳಷ್ಟು ಸಾರಿ ಅನುಕೂಲಕ್ಕಾಗಿ ಅಲ್ಲದೇ ಒಬ್ಬ ಲೇಖಕನ ಸೃಷ್ಟಿ ಮತ್ತು ಅವನ ಬದುಕು ಎರೆಡನ್ನೂ ಬೇರ್ಪಡಿಸಲಾಗದು. ನರ್ತನವನ್ನು ನರ್ತಕಿಯಿಂದ ಮತ್ತು ಸಂಗೀತವನ್ನು ಸಂಗೀತಕಾರನಿಂದ ಹೇಗೆ ಬೇರ್ಪಡಿಸಲಾಗದೊ ಹಾಗೆ ಪರಿಸರ, ವ್ಯಕ್ತಿತ್ವ, ಸಾಹಿತ್ಯ ಕೃತಿ ಇವುಗಳ ಮಧ್ಯ ನಿರಂತರ ನಡೆವ ಪ್ರತಿಕ್ರಿಯೆಯನ್ನು ಗುರುತಿಸುತ್ತ ಮಹಾನ್ ಸಾಧನೆಗೈದ ಕುವೆಂಪು ಅವರ ವಿಶಿಷ್ಟ ಲಕ್ಷಣಗಳನ್ನು ಎತ್ತಿ ತೋರಿಸುವ ಡಾ॥ಮರಿಗುದ್ದಿಯವರ ಪ್ರಸ್ತುತ ಕೃತಿ ಆಕರ್ಷಕವಾಗಿದೆ ಮತ್ತು ಮಾಹಿತಿಉಳ್ಳದ್ದೂ ಆಗಿದೆ' ಗುರುಪಾದ ಮರಿಗುದ್ದಿಯವರ ಈ ಕೃತಿಯನ್ನು ಕುರಿತು ಭೀಮನಗೌಡರ ಅವರು ಅವರ ಕ್ರೀಯಾಶೀಲ ವ್ಯಕ್ತಿತ್ವದ ಬಗ್ಗೆ ನಿರಂತರವಾದ ಅವರ ಸಾಧನೆಯನ್ನು ಅಧ್ಯಯನಶೀಲ ಮನಸ್ಸಿನ ತುಡಿತವನ್ನು ಈ ಮುನ್ನುಡಿಯಲ್ಲಿ ಅಭಿವ್ಯಕ್ತಿಗೊಳಿಸಿದ್ದಾರೆ.

ಬಿ.ಆರ್. ಪೋಲೀಸ್ ಪಾಟಿಲರ 'ಸತ್ಯದ ಗುಡಿಯ ಸುತ್ತ' ಕವನ ಸಂಕಲನಲಕ್ಕೆ ಆತ್ಮೀಯವಾಗಿ ಮುನ್ನುಡಿಯನ್ನು ಬರದಿರುವ ಭೀಮನಗೌಡರು ಇವರಿಗೆ ತುಂಬಾ ಚಿರಪರಿಚಿತ ವ್ಯಕ್ತಿಯಾಗಿದ್ದಾರೆ. ಸಾಹಿತ್ಯ ಕ್ಷೇತ್ರದಲ್ಲಿ ಪಾಟೀಲರು ಹೆಸರುಗಳಿಸಿಕೊಂಡವರು ನಾಟಕ, ಕಥೆ, ಕವಿತೆ, ಕಾದಂಬರಿ ವಿಮರ್ಶೆ ಇತ್ಯಾದಿ ಕೃತಿಗಳನ್ನು ರಚನೆಗಳನ್ನು ಮಾಡಿ ಪ್ರಕಟಿಸಿದ್ದಾರೆ. ಅನೇಕರ ಓದುಗರ ಮನ ಗೆದ್ದಿದ್ದಾರೆ, 'ಪ್ರಸ್ತುತವಾಗಿ ಅನುವಾದ ಕೃತಿಗಳನ್ನು ರಚಿಸುವಲ್ಲಿ ಅವರ ಪಾಂಡಿತ್ಯ ಹಿರಿಯದಾಗಿದೆ. ವಿದೇಶೀಯರ ಖ್ಯಾತ ಕವಿಗಳ ಕವನಗಳನ್ನು ಕನ್ನಡಕ್ಕೆ ತರುವಾಗ ದೇಶಿ ಪಡೆಯಚ್ಚಿನಲ್ಲಿ, ಮಣ್ಣಿನ ಭಾಷೆಯ ಲಯ ಗತ್ತುಗಳಲಿ, ಗದ್ಯಾತ್ಮಕವಾಗಿರುವ ಕವನಗಳನ್ನು ಪದ್ಯಾತ್ಮಕವಾಗಿ ಪರಿವರ್ತಿಸುವ ಪಾಟೀಲರ ಪ್ರತಿಭೆಯ ಚಮತ್ಕಾರವನ್ನು ಹೀಗೆ ಮರೆಯಲಾದೀತೆ'.? ತಮ್ಮ ಇಂಗ್ಲಿಷ್ ಅಧ್ಯಯನದ ಮೂಲಕ ಜಾನಪದ ಭಾಷೆಗೊಂದು ಸಂಸ್ಕಾರ ನೀಡಿ ಅದಕ್ಕೊಂದು ನೆಲೆಯನ್ನು ಒದಗಿಸಿ ಉದಾತ್ತವಾದ, ಮಟ್ಟದಲ್ಲಿ ಬೆಳೆಸುವ ತುಡಿತಗಳಿಗೆ ಈ ಸಂಕಲನ ಒಂದು ಮಹತ್ವದ ಸಾಕ್ಷಿಯಾಗಿದೆ ಎಂದು ಭೀಮನಗೌಡರು ಅಭಿಪ್ರಾಯ ಪಟ್ಟಿದ್ದಾರೆ.

ಇತ್ತೀಚಿನ ಯುವ ಕವಿಗಳಿಗೂ ಕೂಡ ಮುನ್ನುಡಿ, ಬೆನ್ನುಡಿಗಳನ್ನು ಬರೆಯುವದರ ಮೂಲಕ ಇವರು ಬೆನ್ನು ತಟ್ಟಿದ್ದಾರೆ. ಕವಿ ಭೀಮನಗೌಡರ ಅವರು ಸಂಕೇಶ್ವರ ಕಾಲೇಜಿನಲ್ಲಿ ಪ್ರಸ್ತುತ ಕನ್ನಡ ಪ್ರಾಧ್ಯಾಪಕರಾಗಿರುವ ಶ್ರೀಶೈಲ ಮಠಪತಿ ಅವರ 'ಬಿಂದು' ಕವನ ಸಂಕಲನಕ್ಕೆ ೨೦೦೬ ರಲ್ಲಿ ಬೆನ್ನುಡಿಯನ್ನು ಬರೆದಿರುವರು. ಉತ್ತರ ಕರ್ನಾಟಕದ ಜಾಯಮಾನದೊಂದಿಗೆ ಪ್ರಾದೇಶಿಕ ಹಾಗೂ ಜಾಗತಿಕ ಪ್ರಜ್ಞೆಯನ್ನು ಗಮನದಲ್ಲಿಟ್ಟುಕೊಂಡು ಲಯ-ತಾಳ ಗಳೊಂದಿಗೆ ಹೊಂದಾಣಿಕೆಯಾಗುವ ಕವನ ರಚಿಸಿರುವ ಕುರಿತು ಹೆಮ್ಮೆಯನ್ನು ವ್ಯಕ್ತಪಡಿಸಿದ್ದಾರೆ. ಆ ಕೃತಿಯಲ್ಲಿರುವ ಎಲ್ಲಾ ಕವನಗಳು ತುಂಬಾ ಆಕರ್ಷಕವಾಗಿವೆ. ಎಂದು ಓದುಗರ ಗಮನ ಸೆಳೆಯುವಲ್ಲಿ ಎರೆಡು ಮಾತಿಲ್ಲ ಮತ್ತು ಕವಿಯಲ್ಲಿ ಆದರ್ಶ ಗುಣ ಭಾವನೆಯು ಸ್ಪಷ್ಟವಾಗಿರುವದರಿಂದ ಅವರ ಮುಂದಿನ ಭವಿಷ್ಯದ

ಬಗ್ಗೆ ಆಶಾಭಾವನೆಯನ್ನು ವ್ಯಕ್ತಪಡಿಸಿದ್ದಾರೆ.

ಕವಿ ಭೀಮನಗೌಡರ ಇವರು ಈ ರೀತಿಯಾಗಿ ತಾವು ವೃತ್ತಿಯ ಜೊತೆಯಲ್ಲಿ ಅನೇಕ ಕವಿಗಳನ್ನು ಸಾಹಿತಿಗಳನ್ನು ಮುನ್ನುಡಿ, ಬೆನ್ನುಡಿಗಳನ್ನು ಬರೆಯುವದರ ಮೂಲಕ ಅವರಿಗೆ ಹೆಚ್ಚಿನ ಪ್ರೇರಣೆ ಮತ್ತು ಪ್ರೋತ್ಸಾಹ ನೀಡುವದರ ಮೂಲಕ ಬೆನ್ನು ಚಪ್ಪರಿಸುವ ಕೆಲಸವನ್ನು ಮಾಡಿದ್ದಾರೆ.

೪.೪ ಪ್ರವಾಸ ಸಾಹಿತ್ಯ

ಕೇರಳಕ್ಕೆ ಪ್ರವಾಸಕ್ಕೆ ಹೋಗಬೇಕೆಂದು ಹಲವಾರು ದಿನಗಳಿಂದ ಕನಸು ಕಾಣುತ್ತಿದ್ದ ಭೀಮನಗೌಡರ ಅವರು ಒಂದು ದಿನ ಹೋಗುವ ಕಲಾವಕಾಶ ಒದಗಿ ಬಂದಿತು. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅನುದಾನ ಯೋಜನೆಯ ಮೇರೆಗೆ ಕೇರಳ ರಾಜ್ಯದಲ್ಲಿ ಒಂದು ತಿಂಗಳ ಕಾಲ ಪ್ರವಾಸ ಮಾಡಿ ಅಲ್ಲಿಯ ಸಾಂಸ್ಕೃತಿಕ, ಸಾಹಿತಿಕ, ಶೈಕ್ಷಣಿಕ, ರಾಜಕೀಯ ಮುಂತಾದ ವಿಚಾರಗಳನ್ನು ಕರಗತ ಮಾಡಿಕೊಂಡು ಮರಳಿ ಊರಿಗೆ ಬಂದ ನಂತರ, ಪ್ರವಾಸದ ಅನುಭವಗಳನ್ನು ಕೃತಿ ರೂಪದಲ್ಲಿ ಪ್ರಕಟಿಸಿದ್ದಾರೆ. 'ಕಲಾಮಂಡಲದ ನಾಡಿನಲ್ಲಿ' ಎಂಬ ಶೀರ್ಷಿಕೆಯಲ್ಲಿ ಕನ್ನಡಮ್ಮ ದಿನ ಪತ್ರಿಕೆಯಲ್ಲಿ ಸುಮಾರು ಇಪ್ಪತ್ತೈದು ವಾರ ಧಾರಾವಾಹಿಯಾಗಿ ಪ್ರಕಟಗೊಂಡಿತು. ಪ್ರಸ್ತುತ ಲೇಖನವು ಅಪ್ರಕಟಿತ ಬಿಡಿ ಲೇಖನ ರೂಪದಲ್ಲಿ ಸಂಪಾದನೆಯಾಗಿದೆ.

ಈಗಾಗಲೇ ಕೇರಳದ ಬಗೆಗೆ ಗೌಡರು ಸಾಕಷ್ಟು ಜನರಿಂದ ಕೇಳಿ ತಿಳಿದುಕೊಂಡಿದ್ದಾರೆ. ಆದರೆ ಹೋಗಬೇಕೆಂಬ ಕುತೂಹಲ ಸದಾ ಹಾವಿನಂತೆ ಹೆಡೆಯೆತ್ತಿಯೇ ಇತ್ತು. ಅಗೋಚರವಾಗಿರುವ ಆ ನಾಡು ಇವರನ್ನು ತುಂಬಾ ಆಕರ್ಷಿಸಿತು. ಮನಮೋಹಕವಾದ ಆ ಪರಿಸರವನ್ನು ಆತ್ಮೀಯವಾಗಿಸಿಕೊಳ್ಳುವ ಉತ್ಸುಕತೆಗೆ ಒಂದು ಅವಕಾಶ ದೊರೆಯಿತು. ಅಂತೂ ಒಂದು ದಿನ ಬಸ್ಸಿನ ಪ್ರಯಾಣ ಆರಂಭಿಸುತ್ತಾರೆ. ಅವರು ಪ್ರವಾಸದ ಮೊದಲೇ ಒಂದು ಕಾರ್ಯಸೂಚಿಯನ್ನು ಸಿದ್ದಪಡಿಸಿರುತ್ತಾರೆ. ಅದರಂತೆ ಅವರ ಪ್ರವಾಸದ ಯೋಜನೆಗಳು ನಡೆಯುತ್ತವೆ. ಕಾರ್ಯಸೂಚಿಯಲ್ಲಿ ಮೊದಲನೆಯ ದಿನದ ರಾತ್ರಿಯನ್ನು ಉಡುಪಿಯಲ್ಲಿ ಕಳೆಯಲು ಯೋಚಿಸಿರುತ್ತಾರೆ. ಆದರೆ ಆ ದಿನದ ವಾಸ್ತವ್ಯಕ್ಕೆ ಲಾಜ್ ಹುಡುಕುವದರಲ್ಲಿ ಒಂದು ದೊಡ್ಡ ಸಂಶೋಧನೆಯಾಗಿದೆ. ಅದು ಸಿಕ್ಕರು ಕೂಡ ಇಡೀ ರಾತ್ರಿಯೆಲ್ಲ ಉಸಿರುಗಟ್ಟಿದ ವಾತಾರಾವರಣದಲ್ಲಿ ಒದ್ದಾಡಿ ರಾತ್ರಿ ಕಳೆದಿರುವದು, ಅದೊಂದು ಅವರಿಗೆ ದೊಡ್ಡ ಅನುಭವವಾಗಿದೆ.

ಉಡುಪಿಯಲ್ಲಿ ಸುಪ್ರಸಿದ್ಧ ಪೇಜಾವರ ಮಠ ಮತ್ತು ಶ್ರೀ ಕೃಷ್ಣದೇವಸ್ಥಾನ ಪವಿತ್ರವಾದ ಸ್ಥಳವನ್ನು ನೋಡಿ ಭೀಮನಗೌಡರು ಸಂತೋಷಪಡುತ್ತಾರೆ. ಮುಂದೆ ಕಾಸರಗೋಡನ್ನು ನೋಡುವ ಹಂಬಲ ಕಾಡುವ ಸಂದರ್ಭದಲ್ಲಿ ಅದನ್ನು ಸರಿಯಾಗಿ ನೋಡಬೇಕೆಂದು ಒಂದು ದಿನ ಅಲ್ಲಿ ಉಳಿಯುವದಾಗಿ ಯೋಚನೆ ಮಾಡಿಕೊಂಡು ಆ

ಊರನ್ನು ಸೇರಿಕೊಳ್ಳುತ್ತಾರೆ. ಅಲ್ಲಿ ಸ್ವಲ್ಪ ನಿರಾಶೆಯಾಗುತ್ತದೆ. ಈ ಹಿಂದೆ ಆ ಊರಿನ ಬಗ್ಗೆ ಕೇಳಿದಂಥ ಭವ್ಯತೆ ಕಣ್ಣೆದುರಿಗೆ ಕಾಣಿಸಲಿಲ್ಲ.

ಒಂದು ಸಂತೋಷವೆಂದರೆ, ಅಲ್ಲಿ ಕನ್ನಡ ಮಾತನಾಡುವ ಜನರು ಹೆಚ್ಚಾಗಿರುವದರಿಂದ ಗೌಡರಿಗೆ ಭಾಷೆಯ ತೊಂದರೆಯಾಗಲಿಲ್ಲ. ಕಾಸರಗೋಡಿನಲ್ಲಿ ಕನ್ನಡಿಗರು ಒಳ್ಳೆಯ ಹುಮ್ಮಸ್ಸುಳ್ಳವರು ಅನೇಕ ಸಂಘ, ಸಂಸ್ಥೆಗಳನ್ನು ಕಟ್ಟಿ ಕನ್ನಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವದನ್ನು ನೋಡಿದರೆ ತುಂಬಾ ಖುಷಿ ಎನಿಸುತ್ತದೆ. ಇಂದಿಗೂ ಕರ್ನಾಟದ ಸಂಘ, ಹವ್ಯಾಸಿ ನಾಟಕ ಸಂಸ್ಥೆ ಕಾರ್ಯ ನಿರ್ವಹಿಸುತ್ತಿರುವದು ಹೆಮ್ಮೆಯ ವಿಷಯವಾಗಿದೆ.

ಹೀಗಾಗಿ ವೇಣುಗೋಪಾಲ ಅವರನ್ನೊಳಗೊಂಡು ಇವರ ಸುತ್ತ ಸಾಕಷ್ಟು ಪ್ರಾಧ್ಯಾಪಕರು ಚರ್ಚಿಸಲು ಸಿಕ್ಕರು. ಸಾಮಾನ್ಯವಾಗಿ ಅಲ್ಲಿನ ವಿದ್ಯಾರ್ಥಿಗಳೊಂದಿಗೆ ಸಮಯ ಕಳೆದರು. ಅಲ್ಲಿನ ವಿದ್ಯಾರ್ಥಿಗಳು ಸಾಕಷ್ಟು ಪ್ರಮಾಣದಲ್ಲಿ ಕಾವ್ಯವನ್ನು ಓದುತ್ತಾರೆ. ಅರ್ಥಮಾಡಿಕೊಳ್ಳಲು ಪ್ರಯತ್ನಿಸುವದನ್ನು ನೋಡಿ ಗೌಡರಿಗೆ ತುಂಬಾ ಸಂತೋಷವೆನಿಸಿತು. ಮುಂದೆ ಕೇರಳ ನಾಡನ್ನು ನೋಡಿ ಆಶ್ಚರ್ಯವಾಗುತ್ತದೆ. ಅಲ್ಲಿನ ಊಟದ ಬಗ್ಗೆ ಅಸಹನೆಯಿದೆ. ನಿಜವಾಗಲೂ ಅಲ್ಲಿನ ಊಟದ ವ್ಯವಸ್ಥೆಯನ್ನು ನೋಡಿ ನಾನು ವಿದೇಶಕ್ಕೆ ಬಂದಿರುವೆನೋ ಎನಿಸಿತು. ಆದರೆ ಪ್ರವಾಸ ಸಂದರ್ಭದಲ್ಲಿ ಅನಿವಾರ್ಯವಾಗಿದೆ. ಅಪರಿಚಿತ ಕೇರಳದಲ್ಲಿ ಏಕಾಂಗಿಯಾಗಿ ಅಡ್ಡಾಡುವುದು ಒಂದು ಸಾಹಸವೇ ಎಂದು ಅವರ ಮನಸ್ಸು ಕಾಡುತ್ತಿತ್ತು.

ಟ್ರೇನು ಕ್ಯಾಲಿಕತೆಗೆ ಹೋಗುವಾಗ ಆಕಸ್ಮಿಕ ತೆಲಿಚೇರಿಯ ಸರಕಾರಿ ಕಾಲೇಜಿನ ಪ್ರಾಧ್ಯಾಪಕರು ಭೆಟ್ಟಿಯಾಗುತ್ತಾರೆ. ಅಂತು ಸಂಗಾತಿಯೊಬ್ಬರ ಸಿಕ್ಕ ತಕ್ಷಣ ಕೇರಳ ಕಾಲೇಜುಗಳ ಬಗೆಗೆ ಸಾಕಷ್ಟು ವಿಷಯವನ್ನು ಪ್ರಸ್ತಾಪ ಮಾಡುತ್ತಾರೆ. ಕೇರಳದಲ್ಲಿ ಮೂರು ಬಗೆಯ ಕಾಲೇಜುಗಳಿವೆ ಎಂದು ಭಿಮನಗೌಡರು ಅವರು ಹೇಳುತ್ತಾರೆ. ಸರಿಕಾರಿ, ಖಾಸಗಿ, ಸಮಾಂತರ ಈ ರೀತಿಯಾಗಿ ವಿಂಗಡನೆ ಮಾಡಿದ್ದು ಅಲ್ಲಿನ ವಿಶೇಷ. ಕಾಲೇಜುಗಳ ಪ್ರಾಧ್ಯಾಪಕರು ಕೇರಳದ ಸಾಂಸ್ಕೃತಿಕ ಜೀವನದಲ್ಲಿ ಬಹಳ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಾರೆ. ಕ್ಯಾಲಿಕತ್ ಜನದಟ್ಟಣೆಯಲ್ಲಿ ತುಂಬಿ ತುಳುಕುತ್ತಿರುವದನ್ನು ಕಂಡು ಆಶ್ಚರ್ಯವಾಗುತ್ತದೆ. ಆ ನಗರದಲ್ಲಿ ಗೌಡರಿಗೆ ಯಾರ ಪರಿಚಯವು ಇರಲಿಲ್ಲ. ಮಾತೃಭೂಮಿ ಪತ್ರಿಕೆ ಮತ್ತು ಸುಕುಮಾರ ಆಳಿಕೋಡ ಎಂಬ ಲೇಖಕರ ವಿಳಾಸವನ್ನು ಬಿಟ್ಟರೆ ಬೇರೆ ಹೆಸರುಗಳೇ ಇಲ್ಲ ಆದರೂ ವಿಳಾಸ ಹುಡುಕುವಾಗ ಬಹಳಷ್ಟು ಸಂಕೋಚ ಕಾಡುತ್ತಿತ್ತು.

'ಮಾತೃಭೂಮಿ' ಪತ್ರಿಕೆಯ ಪಬ್ಲಿಕ್ ರಿಲೇಶನ್ಸ ವಿಭಾಗದ ಮ್ಯಾನೇಜರ್, ಮಾಪಕ್ಕಲಾದ ಅವರನ್ನು ಕಾಣುತ್ತಾರೆ. ತೂಕ ಬದ್ದವಾದ ಮಾತಿನಿಂದ ಗೌಡರ ಎಲ್ಲಾ ಪ್ರಶ್ನೆಗಳಿಗೂ ಸಮರ್ಪಕ ಉತ್ತರವನ್ನು ಅವರು ನೀಡುತ್ತಾರೆ. ಪತ್ರಕರ್ತ ವಿಮರ್ಶಕರ ಜೊತೆ ಗಡಸು ಧ್ವನಿ, ಧಾಡಸಿದೇಹ, ಮಾತುಗಳ ಮಧ್ಯ ಮುಗುಳುನಗೆ. ಖುಷಿಯಾಗುವಂಥ

[illegible]

ಶಿಷ್ಟಾಚಾರದ ವ್ಯಕ್ತಿತ್ವ ಇವರು ಪ್ರೊ.ಅಚ್ಯುತನ್, ಮಾತೃಭೂಮಿ ಪ್ರಕಾಶನದ ಮ್ಯಾನೇಜರ. ಇವರು ಕೂಡಾ ಪ್ರಮುಖವಾಗಿ ಸಾಹಿತ್ಯ ಸಿದ್ಧಾಂತ ಹಾಗೂ ಸಾಹಿತ್ಯ ವಿಮರ್ಶೆಗಳಲ್ಲಿ ನಾಲ್ಕೈದು ಬೃಹತ್ ಗ್ರಂಥಗಳನ್ನು ರಚಿಸಿದ್ದಾರೆ. ಹಲವಾರು ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ. ಇವರ ಪಾಂಡ್ಯಿತ್ಯದ ಬಗ್ಗೆ ಭೀಮನಗೌಡರ ಅವರು ಸಂತೋಷ ವ್ಯಕ್ತಪಡಿಸಿದ್ದಾರೆ.

ಕೇರಳದ ಸಮಕಾಲೀನ ಕವಿಗಳು ಹೆಚ್ಚಾಗಿ ಬಂಡಾಯ ಮನೋಧರ್ಮದವರು. ಕಾವ್ಯದಲ್ಲಿ ಆಕ್ರೋಶ ಮನೋಭಾವ ಮತ್ತು ವ್ಯಂಗ್ಯ ದೃಷ್ಟಿಕೋನ ಸಾಂಕೇತಿಕವಾಗಿ ಅಭಿವ್ಯಕ್ತಗೊಂಡು ಓದುಗರಿಗೆ ಕ್ಲಿಷ್ಟ ಎನಿಸಿದರೂ ಆಧುನಿಕ ಪ್ರಜ್ಞೆಯ ಹೊಸ ವಿಚಾರ ಅದರಲ್ಲಿ ವ್ಯಕ್ತಗೊಳಿಸುತ್ತಿದ್ದರು. ಗೌಡರು ಕ್ಯಾಲಿಕತ್ ವಿಶ್ವವಿದ್ಯಾಲಯಕ್ಕೆ ಪ್ರೊ.ಬಶೀರ್ ಅವರನ್ನು ಭೆಟ್ಟಿಯಾಗಲು ಹೋಗುತ್ತಾರೆ. ಆದರೆ ಅವರು ದಿಲ್ಲಿಗೆ ಹೋದ ವಿಷಯ ತಿಳಿದಾಗ ನಿರಾಶೆಯಾಗುತ್ತಾರೆ. ಅಷ್ಟರಲ್ಲಿ ಮಲೆಯಾಳಂ ಪ್ರಸಿದ್ದ ಲೇಖಕಿ ಎಂ.ಲೀಲಾವತಿ ಅವರನ್ನು ಭೆಟ್ಟಿಯಾಗುತ್ತಾರೆ. ಅವರೊಂದಿಗೆ ಸೌಜನ್ಯದಿಂದ ಮಾತನಾಡುತ್ತಾರೆ.

'ಕೇರಳದಲ್ಲಿ ಲೇಖಕಿಯರ ಪ್ರಮಾಣವೇ ಕಡಿಮೆ. ವಿಮರ್ಶೆ ಕ್ಷೇತ್ರದಲ್ಲಂತೂ ಇಲ್ಲವೇ ಇಲ್ಲ. ಬಹುಶಃ ನಾನೊಬ್ಬಳೇ ಈ ನೌಕರಿ ಮಾಡುವದರಲ್ಲಿ ಡಾಕ್ಟರ್, ಇಂಜಿನೀಯರ್, ಪೋಲೀಸ್, ಕೂಡಾ ಆಗಿದ್ದಾರೆ. ಆದರೆ ಯಾಕೋ ಸಾಹಿತ್ಯ ಕ್ಷೇತ್ರ ಮಹಿಳೆಯರನ್ನು ಅಷ್ಟಾಗಿ ಆಕರ್ಷಿಸಿಲ್ಲ" ಹೀಗೆ ಸರಾಗವಾಗಿ ಮಾತಾಡುತ್ತಿದ್ದವರು ಪ್ರೊ॥ಎಂ. ಲೀಲಾವತಿ ಕೇರಳದಲ್ಲಿ ಮಹಿಳೆಯರಿಗೆ ಶಿಕ್ಷಣ ಕಲಿಯುವ ಅನುಕೂಲವಿದ್ದರೂ ಲೇಖಕಿಯರ ಸಂಖ್ಯೆ ಯಾಕೆ ತೃಪ್ತಿಕರವಾಗಿಲ್ಲ ಎಂದು ನನಗೆ ದೊಡ್ಡ ಗೊಂದಲವಾಯಿತು. ಎಂದು ಭೀಮನಗೌಡರ ಅವರ ವಿಚಾರಕ್ಕೆ ಪುಷ್ಟಿನೀಡುತ್ತದೆ.

ಪ್ರೊ॥ ಲೀಲಾವತಿಯವರನ್ನು ಬೀಳ್ಕೊಟ್ಟು ಮಲೆಯಾಳಂ ವಿಭಾಗಕ್ಕೆ ಬರುತ್ತಾರೆ. ಅಲ್ಲಿ ಅಳಿಕೋಡ ಅವರು ಕುರ್ಚಿಯ ಮೇಲೆ ಕುಳಿತ್ತಿದ್ದರು, ಜೊತೆಯಲ್ಲಿ ವಿದ್ಯಾರ್ಥಿಯೊಂದಿಗೆ ಗಂಭೀರವಾಗಿ ಅವರು ಚರ್ಚಿಸುತ್ತಿದ್ದರು. ನಾನು ಸಂಯಮವಿಲ್ಲದೆ ಸೀದಾ ಒಳಗೆ ನುಗ್ಗಿದೆ ಆದರೂ ಅವರು ನನ್ನನ್ನು ತಪ್ಪಾಗಿ ಅರ್ಥೈಸಿಕೊಳ್ಳಲಿಲ್ಲ. ಅವರ ಕಾರ್ಯಕ್ಕೆ ಅಡೆತಡೆಯಾದರೂ ಶಿಷ್ಟಾಚಾರಕ್ಕೆ ಇವರಿಗೆ ಕೂಡಲು ಹೇಳಿದರು. ಸಾಹಿತ್ಯದ ಬಗ್ಗೆ ಅಪಾರವಾದ ಕಾಳಜಿ ಹೊಂದಿದ ಅಳಿಕೋಡ ಅವರು ಕವಿಯಾಗಿ, ವಿಮರ್ಶಕರಾಗಿ ಖ್ಯಾತಿಯನ್ನು ಗಳಿಸಿದವರು. ನೋಡಲು ಮೂರ್ತಿ ಚಿಕ್ಕದು. ಸಾಹಿತ್ಯದ ಬಗ್ಗೆ ಸಂಸ್ಕೃತಿಯ ಬಗ್ಗೆ ನಿರಂತರ ಶ್ರೇದ್ದೆವುಳ್ಳವರು ಇಂಥವರು ಅಪರೂಪವೆಂದೇ ಹೇಳಬೇಕು.

ಕ್ಯಾಲಿಕತ್ ನಗರದಲ್ಲಿ ಕಾದಂಬರಿಯ ಸಾಹಿತ್ಯದಲ್ಲಿ ದೊಡ್ಡ ಹೆಸರು ಮಾಡಿದವರು ವಾಸುದೇವ ನಾಯರ್ ಅವರ ಕಾದಂಬರಿಗಳು ಮುಖ್ಯವಾಗಿ ಕೆಳ, ಮದ್ಯಮ ವರ್ಗದ ಬದುಕನ್ನು ಚಿತ್ರಿಸುತ್ತವೆ. ಅವರೇ ಹೇಳಿದಂತೆ ತಮ್ಮ ಕಾದಂಬರಿಗಳ ಪ್ರಮುಖ ವಸ್ತು ಮನುಷ್ಯನ ಸನ್ನಿವೇಶಗಳು, ಪಾತ್ರಗಳು ವಾಸ್ತವದ ನೆಲೆಯಿಂದ ರೂಪುಗೊಂಡರೂ

ಅವು ವಿಲಕ್ಷಣ ಹಾಗೂ ಅರ್ಥಪೂರ್ಣ ಮಾನಸಿಕ ನೆಲೆಯನ್ನು ಪ್ರತಿನಿಧಿಸುವಂಥವು. ಹೀಗೆ ಹಲವಾರು ಪ್ರಶ್ನೆಗಳನ್ನು ಕೇಳುವುದರ ಮೂಲಕ ಸಾಹಿತ್ಯದ ಬಗ್ಗೆ ಆಳವಾಗಿ ಗೌಡರು ಅವರೊಂದಿಗೆ ಚರ್ಚಿಸಿದರು.

ಇನ್ನು ಇವರ ಮುಂದಿನ ಪ್ರಯಾಣ ತ್ರಿಚೂರಿಗೆ. ಈ ನಗರ ಕ್ಯಾಲಿಕತ್ ನಿಂದ ಭಿನ್ನವಾಗಿದೆ. ತ್ರಿಚೂರ್ ನಗರ ಸಣ್ಣದೇನೂ ಅಲ್ಲ, ಸುಮಾರು ಒಂದು ಲಕ್ಷಮೀರಿ ಜನಸಂಖ್ಯೆ ಇದೆ. ನಿಜವಾಗಿಯೂ ಸೌಂದರ್ಯದಿಂದ ತುಂಬಿರುವ ನಗರವಿದು ಎಂದು ಹೇಳುತ್ತಾರೆ. ರಮೇಶನ್ ನಾಯರ್ ಅವರಂಥ ಕವಿಗಳೊಂದಿಗೆ ಸಾಹಿತ್ಯ, ಸಂಸ್ಕೃತಿ, ಕಲೆ ಮುಂತಾದವುಗಳ ಬಗ್ಗೆ ಆಳವಾಗಿ ಸಮಾಲೋಚನೆ ಮಾಡಿಕೊಂಡು ಹಿಂದುರುಗುತ್ತಾರೆ. ಮರುದಿವಸ ಗುರುವಾಯೂರಿಗೆ ಹೋಗುತ್ತಾರೆ. ಅದು ತ್ರಿಚೂರಿನಿಂದ ಸುಮಾರು ೧೫ ಮೈಲು ದೂರವಾಗಿದೆ. ಗುರುವಾಯೂರು ಪವಿತ್ರ ಸ್ಥಳವಾಗಿ, ಪ್ರವಾಸಿ ಕೇಂದ್ರವಾಗಿ, ಅಸಂಖ್ಯಾತ ಜನರ ಮನವನ್ನು ಸೆಳೆಯುವಂಥ ಪ್ರಸಿದ್ಧ ಸ್ಥಳಗಳನ್ನು ನೋಡುವ ಸುದೈವ ದಿನ ಸಿಕ್ಕಿತು. ಎಂದು ಭೀಮನಗೌಡರ ಅವರು ನೆಮ್ಮದಿಯಿಂದ ತಮ್ಮ ಅಭಿಮಾನವನ್ನು ವ್ಯಕ್ತಪಡಿಸುತ್ತಾರೆ.

ಸಾಹಿತ್ಯಪ್ರಿಯ ಮಾಜಿ ಮುಖ್ಯ ಮಂತ್ರಿ ಅಚ್ಚುತ್‌ಮೆನನ್ ಅವರ ಸಂದರ್ಶನಕ್ಕೆ ಹೋಗುತ್ತಾರೆ. ಇವರೊಬ್ಬ ಸರಳ ಜೀವಿ, ವಾಸವಾಗಿರುವ ಇವರ ಸಾಮಾನ್ಯ ಅಧ್ಯಾಪಕನ ಕೊಠಡಿಯಂಥ ಮನೆಯನ್ನು ಕಂಡು ಆಶ್ಚರ್ಯವಾಗುತ್ತಾರೆ. ಕೇರಳದ ಸಾಮಾಜಿಕ, ರಾಜಕೀಯ ಕ್ಷೇತ್ರಗಳಲ್ಲಿ ಅನೇಕ ಗಣನೀಯ ಸ್ಥಿತ್ಯಂತರಗಳನ್ನು ಮೆನನ್ ರವರು ಕಣ್ಣಾರೆ ಕಾಣುತ್ತ ಬಂದವರು. ಅಲ್ಲಿನ ರಾಜಕೀಯ, ವ್ಯವಸ್ಥೆಗಳನ್ನು ಕುರಿತು ಚರ್ಚೆ ಮಾಡುವದರ ಮೂಲಕ ಹೊಸ ಹೊಸ ರಾಜಕೀಯ ವಿಚಾರಗಳನ್ನು ತಿಳಿದುಕೊಂಡರು. ಅಂದೇ ಮಧ್ಯಾಹ್ನ ಕಲಾ ಮಂಡಲಕ್ಕೆ ಭೆಟ್ಟಿಯಾಗುತ್ತಾರೆ. ಅಲ್ಲಿನ ಸಂಸ್ಕೃತ ನಾಟಕಗಳ ಪ್ರದರ್ಶನ ಮತ್ತು ನೃತ್ಯಕಾರ್ಯಕ್ರಮ, ಅಲ್ಲಿನ ಪರಿಸರದಲ್ಲಿ ಕುತೂಹಲಕಾರಿಯಾಗಿತ್ತು. ಭಾವ್ಯಾಭಿವ್ಯಕ್ತಿ ಕಲೆಯನ್ನು ಕರಗತ ಮಾಡಿಕೊಂಡವರು ಆ ಚೆಲವು ವಾಚ್ಯವಲ್ಲ ಸೂಚ್ಯ ಎಂದು ಹೇಳುತ್ತಾರೆ ಏಕೆಂದರೆ ಇವರಿಗೊಂದು ಅದು ಹೊಸ ವಿಚಾರ ಧಾರೆಯನ್ನು ನೀಡುತ್ತದೆ.

ಕೇರಳ ಸಾಹಿತ್ಯ ಆಕಾಡೆಮಿಗೆ ಭೆಟ್ಟಿ ನೀಡುತ್ತಾರೆ. ಅಲ್ಲಿನ ಅಚ್ಚುಕಟ್ಟುತನ, ಸಭಾಗೃಹ ಅಲ್ಲಿನ ಪತ್ರಿಕೆಗಳನ್ನು ನೋಡಿ ಆಶ್ಚರ್ಯ ವ್ಯಕ್ತಪಡಿಸುತ್ತಾರೆ. ತ್ರಿಚೂರಿನಲ್ಲಿ ಭವ್ಯವಾದ ಒಂದು ನಾಟಕಶಾಲೆಯಿದೆ, ಅದನ್ನು ನೋಡಿ ಅಲ್ಲಿನ ವಿದ್ಯಾರ್ಥಿಗಳೊಂದಿಗೆ ಪಠ್ಯಕ್ರಮ ಮತ್ತು ಸೆಮಿಸ್ಟರ್ ಪದ್ದತಿ ಅಲ್ಲಿನ ವಾತಾವರಣ ಇವರಿಗೆ ತುಂಬಾ ಹಿಡಿಸಿದವು.

ಖ್ಯಾತ ಮಲೆಯಾಳಿ ನಾಟಕಕಾರ ಹಾಗೂ ನಾಟಕ ನಿರ್ದೇಶಕ, ಜಿ ಶಂಕರ ಪಿಳ್ಳೆ ಪ್ರಸ್ತುತ ನಾಟಕ ಶಾಲೆಯ ಕಾರ್ಯನಿರ್ವಾಹಕ. ಅವರೊಂದಿಗೆ ಮಾತನಾಡುತ್ತ, ಕೆಲ ಹೊತ್ತು ನಾಟಕ ಶಾಲೆಯಲ್ಲಿ ಕಳೆದರು. ಗೌಡರಿಗೆ ತ್ರಿಚೂರಿನ ಸಹವಾಸ ಸಾಕಾಯಿತು. ಸ್ನೇಹಮಯ ಇಲ್ಲಿನ ವಾತಾವರಣ ತುಂಬಾ ಚೆನ್ನಾಗಿತ್ತು ಆದರೆ ತ್ರಿಚೂರಿನಿಂದ ಹೊರಟು

ಅಚ್ಚರಿಯ ಎರ್ನಾಕುಲಂ ಗೆ ಬಂದಾಗ ಹೊಸ ಸಂತೊಷ ಹುಟ್ಟಿತು. ಏಕೆಂದರೆ ಎರ್ನಾಕುಲಂ ಕೇರಳದಲ್ಲಿಯೇ ಅತ್ಯಂತ ದೊಡ್ಡ ನಗರ. ಅದನ್ನು ನೋಡುವ ತೀವ್ರ ಆಸೆ ಕೋಚೀನ್ ಮಧ್ಯದ ಸುಂದರ ವಿಶಾಲ ನದಿಯನ್ನು ದಾಟಲು ಗೌಡರು ಫೆರ್ರಿ ಬೋಟ್‌ನ ಮೂಲಕ ಪ್ರಯಾಣ ಮಾಡುತ್ತಾರೆ. ನಡುಗಡ್ಡೆಗಳನ್ನು ನೋಡಿ ಮನಸ್ಸು ಉಲ್ಲಾಸಗೊಳ್ಳುತ್ತದೆ. ನಾಲ್ಕಾರು ಜನರ ಸ್ನೇಹ ಬೆಳೆಸಿಕೊಂಡು ಅಲ್ಲಿಯ ರಾಜಕೀಯ, ಸಾಂಸ್ಕೃತಿಕ ಚಟುವಟಿಕೆಗಳ ಬಗ್ಗೆ ಕೆಲವು ಮಾಹಿತಿ ಸಂಗ್ರಹಿಸಿಕೊಂಡರು.

ನಿರೀಕ್ಷಿತ ಕೊಟ್ಟಾಯಂ ಬಗ್ಗೆ ಹಲವಾರು ಸಲ ಕೇಳಿದ್ದರು. ಅಲ್ಲಿನ ನೈಸರ್ಗಿಕ ಸಂಪತ್ತು ಮಾಮೂಲಿಯಂತೆ ಮೋಹಕವಾಗಿದ್ದರೂ ನಗರದ ವಾತಾವರಣ ಅಷ್ಟೇನೂ ಇವರನ್ನು ಆಕರ್ಷಿಸಿಸಲಿಲ್ಲ. ಮುಂದೆ ರಾಜಧಾನಿಯಲ್ಲಿ ಇವರ ಅಲೆದಾಟ ಅದು ಸುಂದರವಾಗಿತ್ತು. ಗೌಡರ ಆಸಕ್ತಿಯ ಕೇಂದ್ರ ಸ್ಥಳವಾದ ತ್ರಿವೇಂದ್ರಂನ್ನು ನೋಡಿ ಮನಸ್ಸನ್ನು ತಟ್ಟನೆ ಸೆರೆ ಹಿಡಿದು ನಿಲ್ಲಿಸಿತು. ಸ್ವಲ್ಪ ನಿರಾಶೆಯು ಆಗಿದೆ ಈ ನಿರಾಶೆ ಬಹುಮಟ್ಟಿಗೆ ಭೌತಿಕ ಕಣ್ಣುಗಳಿಗೆ ಸಂಬಂಧಿಸಿದ್ದು ಆಂತರಿವಾಗಿ ನಿಜವಾಗಿಯೂ ನನಗೆ ಸಂತೋಷವಾಯಿತು ಎನ್ನುತ್ತಾರೆ. ಆ ನಗರದಲ್ಲಿ ವೈಭವಯುತವಾದ ಕಟ್ಟಡಗಳು ಎಲ್ಲಿಯೂ ಕಂಡು ಬರಲಿಲ್ಲ. ಎಲ್ಲವೂ ಅಲ್ಲಿ ಅಚ್ಚುಕಟ್ಟಾದ ಮನೆಗಳು ಕಾಣಿಸುತ್ತವೆ.

ಅಲ್ಲಿಯ ಮಹಿಳೆಯರು ಕೂಡಾ ಸಾದಾ ಸರಳ ಜೀವನ ನಡೆಸುತ್ತಾರೆ. ಅಲ್ಲಿನ ಸಂಸ್ಕೃತಿ ತುಂಬಾ ಒಳ್ಳೆಯದು ಜನರಿಗೆ ಸಹಾಯ ಮಾಡುವ ಶ್ರೀಮಂತ ಹೃದಯದವರು ಎನ್ನುತ್ತಾರೆ. ಮುಂದೆ ಸ್ಥಳೀಯ ವಿಶ್ವವಿದ್ಯಾಲಯಕ್ಕೆ ಭೆಟ್ಟಿ ನೀಡುತ್ತಾರೆ. ಅಲ್ಲಿನ ಪ್ರಸ್ತುತ ಇಂಗ್ಲಿಷ್ ಸಂಸ್ಥೆಯ ಮುಖ್ಯಸ್ಥ ಡಾ.ಅಯ್ಯಪ್ಪ ಪಣಿಕ್ಕರ ಇವರು ಪ್ರಸಿದ್ಧ ಸಾಹಿತಿಗಳು, ಅವರ ಸ್ವಾರಸ್ಯಮಯ ನುಡಿಗಳನ್ನು ನಿರರ್ಗಳವಾಗಿ ಕೇಳಿಕೊಂಡು ಯೋಚನಾಲಹರಿ ಹೆಜ್ಜೆ ಹೆಜ್ಜೆಗೆ ತಮ್ಮ ಉಕ್ತಿಯ ಬಗೆಗಿನ ಎಚ್ಚರ, ಉತ್ಸಾಹ ಇವು ಪಣಿಕ್ಕರ ಅವರ ವೈಶಿಷ್ಟ್ಯಗಳು. ಕವಿ, ಸಾಹಿತಿ, ಅಷ್ಟೇ ಅಲ್ಲ ಇವರು ವಿಮರ್ಶಾತ್ಮಕ ಲೇಖನಗಳನ್ನು ಬರೆದಿದ್ದಾರೆ. ಇವರೊಂದಿಗೆ ಭೀಮನಗೌಡರು ಮೂರು ತಾಸು ಚರ್ಚೆಯಲ್ಲಿ ಮುಳುಗಿಕೊಳ್ಳುತ್ತಾರೆ. ಹೀಗೆ ಎಲ್ಲ ಸಾಹಿತಿಗಳನ್ನು ವಿದ್ವಾಂಸರನ್ನು ಕಂಡು ಕವಿ ಭೀಮನಗೌಡರ ಅವರು ಅವರೊಂದಿಗೆ ಸಮಗ್ರವಾಗಿ ಚರ್ಚಿಸುತ್ತಾ ಇಂಥ ವಾತಾವರಣದಲ್ಲಿ ಹೊಸ ಹೊಸ ವಿಚಾರಗಳನ್ನು ಪಡೆದುಕೊಂಡರು. ಅವರು ಕೇರಳದಲ್ಲಿ ಇವರು ಉದ್ದೇಶಿಸಿದ ಬಹಳಷ್ಟು ಸ್ಥಳಗಳನ್ನು ನೋಡಿ ಸಂತೋಷ, ಉತ್ಸಾಹವನ್ನು ವ್ಯಕ್ತಪಡಿಸಿದರು.

ಅನೇಕ ಲೇಖಕರನ್ನು ಕವಿಗಳನ್ನು ಸಂದರ್ಶಿಸಿದಾಯಿತು. ಪ್ರವಾಸದ ಕೊನೆಯ ಹಂತ ತ್ರಿವೇಂದ್ರಂನಿಂದ ಕನ್ಯಾಕುಮಾರಿಗೆ ಪ್ರಯಾಣ ಬೆಳೆಸುತ್ತಾರೆ. ಅಲ್ಲಿರುವ ಅದ್ಭುತವಾದ ಸಾಗರವನ್ನು ನೋಡಿ ಆಶ್ಚರ್ಯಗೊಳ್ಳುತ್ತಾರೆ. ಸಮುದ್ರದ ಮಧ್ಯ ಇರುವ ವಿವೇಕಾನಂದರ ಶಿಲಾಸ್ಮಾರಕವನ್ನು ನೋಡುತ್ತಾರೆ. ಔಚಿತ್ಯಪೂರ್ಣವಾದ ಇಂಥ ಗಂಭೀರ ಪ್ರಶಾಂತ ದಿವ್ಯವಾದ ಸ್ಥಳದಲ್ಲಿಯ ದೇವಸ್ಥಾನಗಳನ್ನು ನೋಡಿಕೊಂಡು. ಅತ್ಯಂತ

ಸಂತೋಷದಿಂದ ಪ್ರವಾಸ ಸಂದರ್ಭವನ್ನು ಮೆಲಕು ಹಾಕಿಕೊಳ್ಳುತ್ತ ಭೀಮನಗೌಡರ ಅವರು ಮರಳಿ ತಮ್ಮ ಊರನ್ನು ನಿರಾಯಾಸವಾಗಿ ಸೇರಿಕೊಳ್ಳುತ್ತಾರೆ.

ಅಡಿ ಟಿಪ್ಪಣಿಗಳು.

೧. ಲಂಕೇಶ್ವರ 'ಸಿದ್ಧತೆ' ಎಚ್.ಎಸ್.ಭೀಮನಗೌಡರ. ಪು-೩೮. ಸಂಕ್ರಮನ, ೧೯೭೦
೨. ಲಂಕೇಶರ 'ಸಿದ್ಧತೆ' ಎಚ್.ಎಸ್.ಭೀಮನಗೌಡರ. ಪು-೨೦. ಸಂಕ್ರಮನ, ೧೯೭೦
೩. ಸುಮತೇಂದ್ರರ ಪ್ರೇಮ ಪದ್ಯಗಳು. ಎಚ್.ಎಸ್.ಭೀಮನಗೌಡರ. ಪು-೧೪೧. ಸಾಕ್ಷಿ. ೧೯೭೮
೪. ಸುಮತೇಂದ್ರರ ಪ್ರೇಮ ಪದ್ಯಗಳು. ಎಚ್.ಎಸ್.ಭೀಮನಗೌಡರ. ಪು-೧೪೧. ಸಾಕ್ಷಿ. ೧೯೭೮
೫. ಬೆರಳಸಂದಿಯ ಬದುಕು. ಎಚ್.ಎಸ್.ಭೀಮನಗೌಡರ. ಪು-೧೫೨. ಸಾಕ್ಷಿ. ೧೯೭೮
೬. ಕವಿ ಅರವಿಂದ ನಾಡಕರ್ಣಿ: ಕೆಲವು ಅನಿಸಿಕೆಗಳು. ಎಚ್.ಎಸ್.ಭೀಮನಗೌಡರ. ಪು-೧೦೫. ಬೇರು-ಬೆಳಲು. ೧೯೮೮
೭. ಕವಿ ಅರವಿಂದ ನಾಡಕರ್ಣಿ: ಕೆಲವು ಅನಿಸಿಕೆಗಳು. ಎಚ್.ಎಸ್.ಭೀಮನಗೌಡರ. ಪು-೧೦೬. ಬೇರು-ಬೆಳಲು. ೧೯೮೮
೮. ಅನುಭವದಿಂದ ಕೃತಿಯವರೆಗೆ. ಎಚ್.ಎಸ್.ಭೀಮನಗೌಡರ. ಪು-೨೬. ಶೂದ್ರ ಪತ್ರಿಕೆ. ೧೯೮೮
೯. ಅನುಭವದಿಂದ ಕೃತಿಯವರೆಗೆ. ಎಚ್.ಎಸ್.ಭೀಮನಗೌಡರ. ಪು-೨೬. ಶೂದ್ರ ಪತ್ರಿಕೆ. ೧೯೮೮
೧೦. ಕಣವಿಯವರ ಕಾಮನ್ ಸೆನ್ಸ ಕಾವ್ಯ. ಪು-೩೮. ಶೂದ್ರ. ೧೯೮೯.
೧೧. ಕಣವಿಯವರ ಕಾಮನ್ ಸೆನ್ಸ ಕಾವ್ಯ. ಪು-೩೮. ಶೂದ್ರ. ೧೯೮೯.
೧೨. ಕಣವಿಯವರ ಕಾಮನ್ ಸೆನ್ಸ ಕಾವ್ಯ. ಪು-೩೮. ಶೂದ್ರ. ೧೯೮೯.
೧೩. ಕಣವಿಯವರ ಕಾಮನ್ ಸೆನ್ಸ ಕಾವ್ಯ. ಪು-೩೮. ಶೂದ್ರ. ೧೯೮೯.
೧೪. ಕಣವಿಯವರ ಕಾಮನ್ ಸೆನ್ಸ ಕಾವ್ಯ. ಪು-೩೮. ಶೂದ್ರ. ೧೯೮೯.

ಅಧ್ಯಾಯ ೫

ಭಾಷೆ ಮತ್ತು ಶೈಲಿ

ಅಧ್ಯಾಯ ೫

ಭಾಷೆ ಮತ್ತು ಶೈಲಿ

ತನ್ನ ಅಂತರಂಗದ ಅಸ್ಪಷ್ಟವಾದ ಅನುಭವಗಳ ಒತ್ತಡಕ್ಕೆ ಒಂದು ಸ್ಪಷ್ಟವಾದ ರೂಪವನ್ನು ಕೊಟ್ಟು, ತನ್ನನ್ನು ತಾನು ಕಂಡುಕೊಳ್ಳುವದಕ್ಕೆ ಮತ್ತು ತನ್ನ ಅನುಭವವನ್ನು ಅನ್ಯರ ಅನುಭವವನ್ನಾಗಿ ಮಾಡುವುದಕ್ಕೆ ಕವಿಗಿರುವ ಒಂದೇ ಸಾಧನ ಭಾಷೆ. ಈ ಭಾಷೆ ಎಂಬುದು ಕವಿಯಿಂದ ಆಚೆಯದು ಶಿಲ್ಪಿಗೆ ಕಲ್ಲು ಹೇಗೋ ಹಾಗೆ, ಚಿತ್ರಕಾರನಿಗೆ ಬಣ್ಣ ಹೇಗೋ ಹಾಗೆ ಒಂದು ಭಾಷೆಯನ್ನು ಆಡುವ ಒಂದು ಸಾಮಾಜಿಕ ಪರಿಸರದಲ್ಲಿ ಬದುಕುವ ಕವಿ, ಆ ಸಾಮಾಜಿಕ ವ್ಯವಹಾರದ ಭಾಷೆಯನ್ನು ತನ್ನ ಕಾವ್ಯಾಭಿಕ್ತಿಯ ಮಾಧ್ಯಮವನ್ನಾಗಿ ಮಾಡಿಕೊಳ್ಳುವುದು ಸಹಜ.

ಆದ್ದರಿಂದ ಭೀಮನಗೌಡರ ಅವರ ಕವನಗಳನ್ನು ಓದುವಾಗ ನಮ್ಮ ಮನಸ್ಸನ್ನು ತಟ್ಟನೆ ಕೇಂದ್ರೀಕರಿಸಿಕೊಳ್ಳುವದೆಂದರೆ ಅವರ ವೈಶಿಷ್ಟ್ಯಪೂರ್ಣವಾದ ಭಾಷೆ. ಅದಕ್ಕಾಗಿ ಪ್ರತಿಯೊಬ್ಬ ಕವಿಯ ಹಿಂದೆ ಒಂದು ಕಾವ್ಯ ಭಾಷೆಯ ಪರಂಪರೆ ಇರುತ್ತದೆ. ತಾನು ಬದುಕುವ ಪರಿಸರದ ಭಾಷೆಯನ್ನು ಹೇಗೆ ತಮ್ಮ ಕಾವ್ಯಾಭಿವ್ಯಕ್ತಿಗೆ ಬಳಸಿಕೊಳ್ಳುತ್ತಿದ್ದಾರೆ ಎಂಬುದರ ಅರಿವೂ ಇರುತ್ತದೆ. ತನ್ನ ಕಾಲ ವ್ಯವಹಾರಿಕ ನೆಲೆಯಲ್ಲಿ ಯಾವ ಯಾವ ಪ್ರಾದೇಶಿಕ ಲಕ್ಷಣಗಳಿಂದ ಜನರ ಆಡು ಮಾತು ಬಳಕೆಯಲ್ಲಿದೆ ಎಂಬುದರ ಪ್ರಜ್ಞೆಯೂ ಕವಿಗೆ ಇರಬೇಕಾಗಿರುವದು ಸೂಕ್ತ. ಏಕೆಂದರೆ, ಭೀಮನಗೌಡರು ತಮ್ಮ ಕಾವ್ಯದ ಅರ್ಥವನ್ನು ಸಾಧಿಸಲು ಮಾತುಗಳನ್ನು ಹೆಚ್ಚಾಗಿ ಅವಲಭಿಸಿರುವುದು ವಿಶೇಷವಾಗಿದೆ. ಕಾವ್ಯದ ಶರೀರ ಇಲ್ಲಿ ಉತ್ತರ ಕರ್ನಾಟಕ ಆಡುಮಾತಿನ ಒಗರನ್ನೇ ತನ್ನ ಮೈಯಾಗಿ ಪಡೆಯುತ್ತದೆ. ರೂಪಕ, ಪ್ರತಿಮೆ ಮುಂತಾದ ಕಾವ್ಯ ಪರಿಕರಗಳು ಇಲ್ಲಿ ಭಾಷೆಯ ಮೆರಗನ್ನು ಎತ್ತಿ ತೋರಿಸುತ್ತವೆ. ಮಾತಿನ ಗತ್ತು, ಮಾತಿನ ಜಾಣತನ, ಮಾತಿನ ಕೊಂಕು ಇಲ್ಲಿ ಕಾವ್ಯದ ಧ್ವನಿಯನ್ನು ನಿಯಂತ್ರಿಸಲು ಭಾಷೆ, ಪ್ರಮುಖವಾಗಿ ತನ್ನದೆಯಾದ ಅಂಶದಲ್ಲಿ ಮೂಡಿ ಬರುತ್ತದೆ.

ಹೀಗೆ ಭೀಮನಗೌಡರ ಅವರು ಭಾಷೆಯೊಂದಿಗೆ ದೊಡ್ಡ ಹೋರಾಟವನ್ನು ಮಾಡಿ ಅದನ್ನು ಪಳಗಿಸಿ ತನ್ನ ಅನುಭವದ ಅಭಿವ್ಯಕ್ತಿಯ ಮಾಧ್ಯಮವನ್ನಾಗಿ ಮಾಡಿಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಎಲ್ಲ ಕಾಲದಲ್ಲೂ ಭಾಷೆಯನ್ನು ಮುರಿದು ಕಟ್ಟುವ, ಕಟ್ಟಿ ಮುರಿಯುವ ಪ್ರಯತ್ನಗಳೂ ನಡದೇ ಇವೆ. ಪ್ರತಿಯೊಬ್ಬ ನಿಜವಾದ ಕವಿಯೂ ತನ್ನ ಕಾಲದ ಅವಶ್ಯಕತೆಗೆ ಅನುಗುಣವಾಗಿ ಭಾಷೆಯನ್ನು ರೂಪಿಸಿಕೊಳ್ಳುತ್ತಾನೆ. ಅದಕ್ಕೆ ಭೀಮನಗೌಡರ ಕವನಗಳ ಮುಖ್ಯ ಗುಣ ಅವುಗಳ ಭಾಷೆ, ಜಾನಪದದ ಲಯ ಗತ್ತುಗಳಲ್ಲಿ ಕಳೆದು ಹೋಗದೆ,

ಸಂಯಮ ಕಳೆದು ಕೊಳ್ಳದೆ, ಜಡವಾಗದೆ ಬರೆಯುತ್ತಾರೆ ಇದಕ್ಕೆ ಕಾರಣ ಭಾಷೆಯು ಓದುಗರ ಮನಸ್ಸಿನಲ್ಲಿ ಮೂಡಿಸುವ ತಂತ್ರ ಪರಿಕರ ಎಂಬ ವಿಷಯವು ಗೌಡರಿಗೆ ಗೊತ್ತಿರುವದು.

ಶೈಲಿಯೂ ಕೂಡಾ ಕವಿಗಿರುವ ಮತ್ತೊಂದು ಮಹತ್ವ ಪೂರ್ಣವಾದ ಅಂಶವಾಗಿದೆ. ಭಾಷೆಯನ್ನು ತನ್ನ ಅಭಿವ್ಯಕ್ತಿಗೆ ತಕ್ಕಂತೆ ಮಣಿಸುವಲ್ಲಿ ಬರುವ ಸಂದರ್ಭ, ಅವುಗಳಿಗೆ ಬಳಸುವ ಪದಗಳು ತಂತ್ರಗಾರಿಕೆಯಿಂದ ಕೂಡಿರುತ್ತವೆ. ಅವುಗಳ ಹಿನ್ನಲೆಯಲ್ಲಿ ನಡೆಯುಂಥ ಸೂಕ್ಷ್ಮವಾದ ಪ್ರತಿಕ್ರಿಯೆಯೇ ಕಾವ್ಯದ ಶೈಲಿ ಎಂದು ಕರೆಯಬಹುದು. ಇದನ್ನೇ ಇಂಗ್ಲಿಷ್‌ನಲ್ಲಿ 'style is personal' ಎಂದು ಕರೆಯುತ್ತಾರೆ.

ಭೀಮನಗೌಡರು ಈಗಾಗಲೇ ನಾಲ್ಕು ಕವನ ಸಂಕಲನಗಳ ಮೂಲಕ ತಮ್ಮ ಕವನ ರಚನಾಶೈಲಿಯ ಸಾಮರ್ಥ್ಯವನ್ನು ಕಾವ್ಯದಲ್ಲಿ ಸ್ಥಾಪಿಸಿಕೊಂಡಿದ್ದಾರೆ. ಹಲವು ಕವನಗಳನ್ನು ಓದಿಕೊಂಡಾಗ ನನಗೆ ಸು.ರಂ.ಯಕ್ಕುಂಡಿಯವರ ಶೈಲಿಯನ್ನು ನೆನೆಪಿಗೆ ತರುತ್ತದೆ. ಹಲವು ಪದ್ಯಗಳು ಮಾತುಗಳಾಗುವದು, ಗಪದ್ಯಗಳಾಗಿ ತೆಳುವಾದ ಬಂಧವಾಗಿ ತೋರಿಬಂದರೂ ಕವಿ ತಮ್ಮ ಕವನದೊಳಗಡೆ ತುಂಬಿಕೊಡುವ ವಿಚಾರ ಮತ್ತು ನಾವಿನ್ಯತೆ ಆಕರ್ಷಕವಾದುದು.

ಲವಲವಿಕೆಯ ಮಾತುಗಾರಿಕೆಯ ಮೂಲಕ ಕಾವ್ಯ ಪ್ರೇಮಿಗಳ ಹೃದಯಕ್ಕೆ ಲಗ್ಗೆಯಿಕ್ಕಿದ್ದ ಭೀಮನಗೌಡರ ಸಂಕಲನದಲ್ಲಿ ನಿರೂಪಣೆ ಸರಸ-ವಿಡಂಬನಾತ್ಮಕ ಶೈಲಿ ಹಾಗೂ ಪ್ರಚಲಿತ ವಿದ್ಯಮಾನಗಳ ಹಿಂದಿನ ಸೂಕ್ಷ್ಮ ವಿವರಗಳನ್ನು ಸಮರ್ಥವಾಗಿ ತಮ್ಮ ಶೈಲಿಯಲ್ಲಿ ಪ್ರಕಟಿಸಿದ್ದಾರೆ.

೫.೧ ಆಡುನುಡಿ-ಜಾನಪದ-ಶಿಷ್ಟಭಾಷೆ

ಆಡು ನುಡಿಗಳು ಬದುಕಿನ ದಿನ ನಿತ್ಯ ವ್ಯವಹಾರದಲ್ಲಿ ಬಳಕೆಯಾಗುವ ಮಾತುಗಳು. ಅನಿಸಿಕೆ ಅಭಿಪ್ರಾಯಗಳನ್ನು ಮಾತಿನ ಮೂಲಕವೇ ವ್ಯಕ್ತಪಡಿಸಬೇಕಾದ ಸಂದರ್ಭದಲ್ಲಿ ನಾವು ಸರಳವಾಗಿ ಭಾಷೆಯನ್ನು ಬಳಸುತ್ತೇವೆ. ಅದಕ್ಕೊಂದು ಸೀಮಿತವಾದ ಚೌಕಟ್ಟು ಇರುವದಿಲ್ಲ. ಮತ್ತು ಈ ಆಡು ನುಡಿಯು ಜನಾಂಗದಿಂದ ಜನಾಂಗಕ್ಕೆ ಭಿನ್ನ ರೂಪದಲ್ಲಿ ಬಳಕೆಯಾಗುತ್ತ ಸಾಗುತ್ತದೆ. ಈ ಕಾರಣದಿಂದ ಭೀಮನಗೌಡರ ಕಾವ್ಯದ ಮುಖ್ಯ ಗುಣವೇ ಭಾಷೆ, ಜನಪದ, ಲಯ ಗತ್ತುಗಳಲ್ಲಿ ಕಳೆದು ಹೋಗದೆ .ಯಾಂತ್ರಿಕತೆಯಲ್ಲಿ ತೇಲಿ ಹೋಗದೇ ಭಾಷೆಯನ್ನು ಅತ್ಯಂತ ಲೀಲಾಜಾಲವಾಗಿ ಕವಿ ಭೀಮನಗೌಡರ ಅವರು ಬಳಸಿಕೊಳ್ಳುವಲ್ಲಿ ಅವರ ಪ್ರತಿಭೆ ಇದೆ.

ಶಿಷ್ಟಭಾಷೆಯು ಕಾವ್ಯಕ್ಕೆ ಬಹುಮುಖ್ಯವಾಗಿ ಬೇಕಾಗುತ್ತದೆ. ಅದೊಂದು ಪರಿಮಿತಿಯಲ್ಲಿ ನಿಯಮಗಳ ಒಂದು ಚೌಕಟ್ಟನ್ನು ಮಿರುವದಿಲ್ಲ. ಅದಕ್ಕೆ ಶಿಷ್ಟಭಾಷೆ

ಮಾತನಾಡಲು ಎಷ್ಟು ಸರಳವೋ ಬರೆಹ ರೂಪದಲ್ಲಿ ಭಾಷೆಯ ಕಲಾತ್ಮಕತೆಯಲ್ಲಿ ನಿರ್ಮಿಸುವಾಗ ಅದು ಸಂಕೀರ್ಣವಾಗಿರುತ್ತದೆ. ಅವರ ಕೆಲವು ಮುಖ್ಯ ಕವಿತೆಗಳಲ್ಲಿ ಶಿಷ್ಟಭಾಷೆಯ ಪ್ರಯೋಗ, ಭಿನ್ನರೂಪದಲ್ಲಿ ವ್ಯಕ್ತಗೊಳ್ಳುತ್ತದೆ.

ಶಬ್ದನಾದದ ವೈಚಿತ್ರ್ಯ, ಭಾಷೆಯನ್ನು ಕಲಾತ್ಮಕಗೊಳಿಸುವ ನಿಪುಣತೆ, ಮಂತ್ರಮುಗ್ಧವಾಗಿಸುವ ವಿಚಾರಗಳ ನಿಯಂತ್ರಣ ಶಕ್ತಿ ಧ್ವನಿ ಸಂಕೇತಗಳಿದ್ದರೂ ಸಹಜವಾಗಿ ಕೈ ಹಿಡಿದು ನಡೆಸುವ ದೇಶೀ ಶೈಲಿ ಓದುಗರನ್ನು ಕಟ್ಟಿ ಹಾಕುವ ಮುಖ್ಯ ಗುಣಗಳೆಂದು ಭೀಮನಗೌಡರ ಕಾವ್ಯವನ್ನು ಓದಿದ ಯಾವೊಬ್ಬ ಓದುಗನೂ ಗುರುತಿಸಬಹುದಾದ ಅಂಶಗಳು.

“ಕಪಿತ ಮಳಿಯೇ ಕಾರಮಳಿಯೆ
ಬೇಗನೆ ಬಾಸುರಿ ಮಳೆಯೆ ಸುರಿಮಳಿಯೆ’
ಎಂದು ಮುಂಗೈ ಬಿಗಿಯಗಿ ಹಿಡಿದು
ಕಳ್ಳಿ ಮಳೆಯಾಡಿಸಿ ನೀ ಕೈಬಿಟ್ಟಾಗ
ನಾ ಮಳ್ಳನಾದೆ.” (ಒಂದು ನೆನಪು)[೧]

ಈ ಕವನದ ಹಿಂದಿನ ಧಾಟಿಯನ್ನು ಗಮಣಿಸಿಕೊಂಡರೆ ಇಲ್ಲಿ ಜಾನಪದದ ಶೈಲಿಯಲ್ಲಿ ಮಳೆಯನ್ನು ಕರೆಯುವ ಭಾವವಿದೆ ಎನಿಸುತ್ತದೆ. ಆದರೆ ಬಹಿರ್ಮುಖಿಯಾಗಿ ಅದನ್ನು ತಿಳಿಗಣ್ಣಿನಿಂದ ನೋಡಿದರೆ ಇಲ್ಲಿ ಪ್ರಿಯ–ಪ್ರಿಯಸಿರ ಪ್ರೇಮದ ರಸಿಕತೆ ಇದೆ. ಅದೊಂದು ರೀತಿಯ ಅವ್ಯಕ್ತ ರೂಪದಲ್ಲಿ ಇದ್ದರೂ ಕವಿಯ ಆಸೆಯಲ್ಲಿ ಕೊನೆಗೆ ಆ ಪ್ರೇಮದಲ್ಲಿ ವೈಪಲ್ಯತೆಯಿದೆ ಎನ್ನುವದು ವಾಚ್ಯಾರ್ಥವನ್ನು ಸೂಚಿಸುತ್ತದೆ.

“ಇವಳೆಂದರೆ ನಮಗೆ
ಗಂಟೆಗೂ ನಾದಕ್ಕೂ ನೆಂಟು
ನಾವು ಗೆಜ್ಜೆ ನುಡಿಸಿದ ಹಾಗೆ ಹೆಜ್ಜೆ ಹಾಕುವಳು
ನಮ್ಮವಳೆ ಇವಳು.” (ಲಮಾಣಿ ಹುಡುಗಿ)[೨]

ಕವಿ ಈ ಕವನದಲ್ಲಿ ನಮ್ಮ ಮನಸ್ಸಿನ ಚಾಂಚಲ್ಯತೆಯನ್ನು ನಿಯಂತ್ರಿಸುವಲ್ಲಿ ಅದನ್ನು ಕಟ್ಟಿಹಾಕುವ ರೀತಿಯನ್ನು ಹೇಳುತ್ತಾರೆ. ನಮ್ಮ ಮನಸ್ಸು ಎಲ್ಲವನ್ನು ಬಯಸುತ್ತದೆ. ಆದರೆ ಕೊಡುವವರು ಯಾರು? ಆದ್ದರಿಂದ ನಾವು ಅದನ್ನು ಆಧೀನದಲ್ಲಿ ನಮ್ಮ ವಶದಲ್ಲಿಟ್ಟುಕೊಳ್ಳಬೇಕು. ಎಂಬ ಕವನ ತಾತ್ಪರ್ಯದಲ್ಲಿ ಜಾನಪದದ ಅಂಶವು ಮೂಡಿಬಂದಿದೆ.

ಪೆದ್ದ ಕವನದಲ್ಲಿ ಆಡುನುಡಿಯ ಶೈಲಿಯಲ್ಲಿ ಭೀಮನಗೌಡರು ಹೀಗೆ ಅದರ ತಿರುಳನ್ನು ವ್ಯಕ್ತಪಡಿಸುತ್ತಾರೆ.

“ಇದೇ ಕಾರಣ ನೋಡು ನಾ ಪೆದ್ದನಾಗುವದಕ್ಕೆ
ನಿನ್ಮುಂದೆ ನಿಂತಾಗ ಗದಗದ ನಡುಗಿದ್ದಕ್ಕೆ
ನಿನ್ನ ಕಂಡರೆ ಸಾಕು

ಕಪ್ರಗೆ ಬೆಳ್ಳಿಗೆ ಕೆಂಪಗೆ ಆಕಾರ
ಇದೇ ಕಾರಣ ನೋಡು
ಮುಟ್ಟಲು ಚಿಟ್ಟನೆ ಚೀರಿದ್ದಕ್ಕೆ
ನೀ ಮೈಕುಣಿಸಿ
ಲಂಗ ಬೀಸಾಡಿದರೂ
ನಾ ರೆಕ್ಕೆ ಬಿಚ್ಚಿದ್ದಕ್ಕೆ
ಇದೇ ರಕ್ತ ಸೋರಿದ್ದಕ್ಕೆ
ಮತ್ತೆ ಪಾರಾಗಿ ಮೂಲೆಯಲ್ಲಿ ಮುದುಡಿದ್ದಕ್ಕೆ
ನನ್ನ ಕತ್ತಲೆಗೂ ಇದೇ ಕಾರಣ
ನನ್ನ ಏಕಾಂತಕ್ಕೆ
ನನ್ನ ವನವಾಸಕ್ಕೆ" (ಪೆದ್ದ)[೩]

ಈ ಕವನದಲ್ಲಿ ಜೀವನದ ಹೋರಾಟದ ಚಿತ್ರಣವಿದೆ. ಏಕೆಂದರೆ ಬದುಕಿನಲ್ಲಿ ಸಂಘರ್ಷಗಳು, ಆತಂಕಗಳು, ಸಮಸ್ಯೆಗಳು ಮನುಷ್ಯನಿಗೆ ಬರುತ್ತವೆ ಮತ್ತೆ ದೂರಾಗುತ್ತವೆ. ಇಲ್ಲಿ ವ್ಯಕ್ತಿಯು ಜೀವನದಲ್ಲಿ ಜಿಗುಪ್ಸೆ ತಾಳಿದ್ದಾನೆ. ಈಗ ಜಗತ್ತನ್ನು ಕಂಡರೆ ಜನರನ್ನು ನೋಡಿದರೆ ಭಯ, ಭೀತಿ ಕಾಡುತ್ತಿರುವದು ಯಾವುದಕ್ಕೊ ಮನಸ್ಸು ಸಂಕುಚಿತವಾಗಿದೆ ಹೀಗಾಗಿ ಅನಾಥ ಪ್ರಜ್ಞೆಯು ಇಲ್ಲಿ ಆವರಿಸಿಕೊಂಡಿದೆ. ಕವಿ ಇಲ್ಲಿ ಆಡುನುಡಿ, ಶಿಷ್ಟಭಾಷಾ ಬಳಕೆಯ ಪ್ರಜ್ಞೆಯನ್ನು ಬಳಸಿರುವದು ಗಮನಾರ್ಹವಾಗಿದೆ.

"ಯಾಕೆ ಗೊತ್ತೇ
ನಾನಾದರೂ ಒಂದೇ ನಿನಾದರೂ ಒಂದೇ
ನಾ ಸ್ವರ್ಗದಲ್ಲಿದ್ದರೂ ನರಕ ತಪ್ಪುವದೇ
ನಾನು ಕತ ಕತ ಕುದಿದಾಗ
ಹೊತ್ತು ಹೋಗುವಾಗ
ನೀ ಕೈ ಕೊಡಬೇಕು" (ಬೇಡ ಈ ಸೋಗು)[೪]

ಬೇಡ ಈ ಸೋಗು ಎನ್ನುವ ಕವಿಯ ಈ ಕವನದ ಶಿರ್ಷಿಕೆಗೆ ಅರ್ಥವಿದೆ. ಪ್ರಿಯ ಪ್ರಿಯಸಿಗೆ ಹೇಳುವ ಮಾತಿನ ಸಂದರ್ಭದಲ್ಲಿ ಅವಿನಾಭಾವ ಸಂಬಂಧವಿದೆ. ಆದರೆ ಅವಳ ವೈಮನಸ್ಸಿನ ಒಡಕತನವಿದೆ ಕೊನೆಯ ಸಾಲಿನಲ್ಲಿ ಪ್ರೇಮದ ಅತಂತ್ರತೆ ಎದ್ದು ಕಾಣುತ್ತದೆ. ಹೀಗೆ ಕವಿ ಇವರಿಬ್ಬರ ವಾಸ್ತವಿಕ ಬದುಕಿನ ಚಿತ್ರಣ ಬಿಡಿಸುವಲ್ಲಿ ಕವಿಯು ಶಿಷ್ಟಭಾಷೆಗೆ ಹೆಚ್ಚು ಮಹತ್ವ ನೀಡಿದ್ದಾರೆ.

"ಮಲ್ಲಯ್ಯ ಕುಳಿತಿದ್ದ ಕಲಿನ್ಹಂಗ
ಅಲ್ಲಲ್ಲ,
ಕಾಲು ಹಿಡಿದು ಗಿರಿ ಗಿರಿ ತಿರುವಿ ತೋರಿ

ಹೂ ಹಾಸಿಗೆಯಲ್ಲಿ ಒಗೆಧಂಗ"   (ಆಲಮಟ್ಟಿ ಜಂಗಮರು)[೫]

ದೇವರ ಅಸ್ತಿತ್ವದ ಬಗ್ಗೆ ಸ್ಪಷ್ಟವಾದ ಕಲ್ಪನೆ ಮೂಡಿದರು ನಮ್ಮ ಬದುಕಿನ ಸ್ಥಿತಿಗತಿಯ ಬಗ್ಗೆ ಕವನ ಮಹತ್ವದಾಗಿದ್ದರೂ ಆಡುನುಡಿಯು ಧ್ವನಿಪೂರ್ಣವಾಗಿದೆ. ಒಳಾರ್ಥವನ್ನು ಗಮನಿಸಿಕೊಂಡರೆ ಜಾನಪದದ ಧಾಟಿಯು ಶೈಲಿಯ ಸತ್ವವು ಕಂಡು ಬರುತ್ತದೆ.

"ಆಮಂತ್ರಣ ಬಂದಾಗಿಲ್ಲ
ನನಗೆ ದೊಡ್ಡ ಉರುಲು
ಯಾಕೆಂದರೆ ನನಗೆ ತುಪ್ಪ
ಶಿವಶರಣರಿಗೆ ಮಾಂಸದ ಹಾಗೆ!"   (ತುಪ್ಪ ತಿನ್ನದವನು)[೬]

ವ್ಯಕ್ತಿಯನ್ನು ಪ್ರಧಾನವಾಗಿಟ್ಟುಕೊಂಡು ಕವಿ ಕವನ ರಚಿಸಿದ್ದಾರೆ. ಇಲ್ಲಿ ವ್ಯಕ್ತಿಗೆ ಮಾನಸಿಕವಾದ ಹಿಂಸೆಯಿದೆ, ನಮ್ಮದಿಯ ಜೀವನಕ್ಕೆ ಇದೊಂದು ದೌರ್ಬಲ್ಯದ ವಿಷಯವಾಗಿ ಪರಿಣಮಿಸಿದೆ. ಇಂಥ ಸತ್ವ ಪೂರ್ಣವಾದ ವಿಚಾರ ಅಭಿವ್ಯಕ್ತಿಗೊಳಿಸಿದ್ದಾರೆ. ಆದರೆ ಪ್ರತಿಯೊಬ್ಬ ಮನುಷ್ಯನಿಗೆ ಮಾನಸಿಕ ಸದೃಢತೆ ಇರಲಿ ಅಂದಾಗ ಆತನ ಬದುಕಿಗೊಂದು ಚೈತನ್ಯವಿದೆ, ಎಂದು ಶಿಷ್ಟಭಾಷೆಯ ಬಳಕೆಯಲ್ಲಿ ಕವನ ಚಿತ್ರಿತವಾಗಿದೆ.

"ಮುಗಿತೇನಪಾ ನಿನ್ನ ಶೌರ್ಯ? ಎಂದಿತು
ಮತ್ತೆ ಮುಂದುವರೆಸಿತು:
'ಮಳ್ಳಾ ಹಳೇಮಳ್ಳ,
ಹೀಗೇಕೆ ಹರಕೊಂತಿ ಕಳ್ಳ
ಒಂದಾನಂದ ಕಾಲದಾಗ ನಾನೂ ನಿನ್ನಂಗ
ಅಳಕ್ಕ ಇದ್ದಿನೇನಪಾ ಅತ್ತ ಒತ್ತಿದರ ಇತ್ತ
 ಇತ್ತ ಒತ್ತಿದರ ಅತ್ತ
ನಾ ಯಾರು ಅನ್ನುದ ತಿಳಿತಿರಲಿಲ್ಲ.
ಒಂದು ದಿನ ನೋಡಿ
ಹೊಟ್ಟಿ ಉರದು, ಪೃಥ್ವಿ ಹೊಟ್ಟಿ ಹರದು
ಹೊರಗೆ ಬಂದಬಿಟ್ಟೆ, ಹಿಂಗ ಬಿದ್ದ ಬಿಟ್ಟೆ" (ನಾನು)[೭]

ವಾಸ್ತವಿಕ ಬದುಕಿನ ಚಿತ್ರಣವಿದೆ. ಶೌರ್ಯ ಹೋರಾಟ ಇವೆಲ್ಲವೂ ಬದುಕಿನ ಮಾರ್ಗಗಳು. ಇಂದಿನ ಸಮಾಜ ಹೇಗಿದೆ ಸಾಮಾಜಿಕ ನೆಲೆಯಿಂದಲೇ ವ್ಯಕ್ತಿಯ ಅಂತರಂಗದ ಪದರುಗಳನ್ನು ಶೋಧಿಸುವುದು ವಿಶೇಷವಾಗಿದೆ. ಸಂಕೀರ್ಣಮಯವಾದ ಕಾಲದಲ್ಲಿ ಸಮಾಜ ವ್ಯಕ್ತಿಯನ್ನು ವಕ್ರದೃಷ್ಟಿಯಿಂದ ಕಾಣುವ ಸಂದರ್ಭ ಗಂಭೀರವಾಗಿದೆ. ಆಡುನುಡಿಯ ಸರಳತೆಯಲ್ಲಿ ಜಾನಪದ ಶೈಲಿಯು ಇಲ್ಲಿ ನಿರೂಪಿತವಾಗಿದೆ.

ಪ್ರವಾಸ ಸಂದರ್ಭದಲ್ಲಿ ನಡೆದ ಸನ್ನಿವೇಶವನ್ನು ಕುರಿತು ಹೇಳುವಾಗ ಕವಿ ಭೀಮನಗೌಡರ ಒಂದು ಕವನದಲ್ಲಿ ಭಾಷೆಯನ್ನ ಚೆನ್ನಾಗಿ ಸೆರೆ ಹಿಡಿದಿದ್ದಾರೆ.

“ಇದು ಫೇಮಸ್ ಹೋಟೆಲ್ ಇಲ್ಲಿ ಲಕ್ಷಾಂತರ ಜನರು
ತೀರ್ಥಯಾತ್ರೆಗೆ ಬಂದು ಪಾವನವಾಗುತ್ತಾರೆ ಇದು
ದುರ್ಗಾ ದೇವಿ ಗುಡಿ ಇದು ಝೂ ನೋಡಿರಿ
ಬೇಗನೆ ಇದು ಕಾಲೇಜ ಇಲ್ಲಿಯ ಪ್ರೊಫೆಸರ್‌ನಿಗೆ
ಮೊನ್ನೆ ಇದು ಹುಚ್ಚಾಸ್ಪತ್ರೆ ನೊಬೇಲ್ ಪಾರಿತೋಷಕ
ಸಿಕ್ಕಿತು ಇದು ಇಪ್ಪತ್ತೇಳು ಅಂತಸ್ತಿನ ಕಟ್ಟಡ
ಇಲ್ಲಿ ಇಲಿಪುಡಿ ಸಿಗುತ್ತದೆ ಇದು ಸಿನಿಮಾ ತರೆಯ
ಮನೆ ಇದು ಕಾಲೇಜ ಇದು ಕೋರ್ಟು ಇದು
ಚೋರಬಜಾರ ಸಾವಿರಾರು ವಕೀಲರು ಕೆಲಸ ಮಾಡುತ್ತಾರೆ”

(ಹುಡುಗಾಟದ ಹಾಡು)[೮]

ಪ್ರವಾಸ ಸಂದರ್ಭದಲ್ಲಿ ಕವಿ ಆಶ್ಚರ್ಯಕರವಾದ ಸೌಂದರ್ಯದ ವಸ್ತುಗಳನ್ನು ನೋಡುತ್ತ ಆನಂದ ಪಡುವಾಗ ಅಲ್ಲಿರುವ ವಿಚಿತ್ರ ಸನ್ನಿವೇಶ ನೋಡುವ ವಿಧಾನ ಆಡು ಮಾತಿನಲ್ಲಿ ನಡೆಯುವ ಸಂಭಾಷಣೆ, ಶಿಷ್ಟ ಭಾಷೆ ಕಡೆಗೆ ಕವಿ ಹೆಚ್ಚಿನ ಮಹತ್ವ ನೀಡುವಲ್ಲಿ ಗಮನಹರಿಸಿದ್ದಾರೆ.

ಈ ಕೆಳಗಿನ ಪದ್ಯದಲ್ಲಿ ಧ್ವನಿ ಪೂರ್ಣವಾದ ಮಾತನ್ನು ಹೇಳುತ್ತಾರೆ.

“ಮೇಲಿಂದ ಮೇಲೆ ಶಾಲೆ ತಪ್ಪಿಸಿ
ಮುಳ್ಳಗಳ್ಳಿ ಪಡದಲ್ಲಿ ಮರೆಯಾಗಿಬಿಡುವ ಕಿಟ್ಟನನ್ನು
ಹಾಗೆ ಸಿಡಿಲು ಬಿಟ್ಟರೆ ಹೇಗೆ? ಬುದ್ದಿ
ಕುಂಠಿತವಾಗಿ ಬುಟ್ಟಿಯಲ್ಲಿಯ ಕೊಳೆತ ಹಣ್ಣಿನಂತೆ
ವಾಳಿಯಾಗುವ
ಶಾಲೆಯನ್ನೇ ದಿವಾಳಿ ಮಾಡುವ ಅಪಾಯ
ತಪ್ಪಿಸಲು ಮಾಸ್ತರು ಉಪಾಯ ಹೂಡಿದರು”

(ನೆಲ ಹಿಡಿಯುವ ಮೊದಲು)[೯]

‘ನೆಲ ಹಿಡಿಯುವ ಮೊದಲು’ ಕವನ ಸಂಕಲನ ಗಮನಾರ್ಹವಾಗಿದೆ. ಏಕೆಂದರೆ ಈ ಕವನದಲ್ಲಿ ಆದರ್ಶ ವ್ಯಕ್ತಿತ್ವದ ಬದುಕಿನ ಚಿತ್ರಣವಿದೆ ‘ಕಿಟ್ಟು’ ಈ ಕವನದ ಕೇಂದ್ರ ಬಿಂದು ಶಿಕ್ಷಕರು ಸಮಾಜ ಸುಧಾರಕರು ಆದರೆ ಆ ಕಿಟ್ಟನು ಮಾನಸಿಕ ದೌರ್ಬಲ್ಯ ಆಗಾಧವಾದುದು. ನಾಗರಿಕ ವ್ಯಕ್ತಿತ್ವ ರೂಪಿಸಲು ಹೋದ ಶಿಕ್ಷಕರ ಆ ಕನಸಿಗೆ ಪೆಟ್ಟು ಬೀಳುವದು ವಿದ್ಯಾರ್ಥಿಯ ಆಸಕ್ತಿ ಬದಲಾಗದಿರುವದು ಅನಾಗರಿಕ ಜೀವನಕ್ಕೆ ಎಡೆ ಮಾಡಿ ಕೊಡುವ ಸನ್ನಿವೇಶ ಕವಿತೆಯ ನಿಲುವಿನಲ್ಲಿ ಗಂಭೀರವಾಗಿದೆ. ಆದರೆ ಭಾಷೆಯು ತಂತ್ರಗಾರಿಕೆಯಿಂದ ಹೆಣೆದುಕೊಂಡಿದೆ.

ಕವಿ ಭೀಮನಗೌಡರು ಭಾಷೆಯನ್ನು ಅಭಿವ್ಯಕ್ತಿಗೆ ತಕ್ಕಂತೆ ಮಣಿಸುವಲ್ಲಿ ಭಾವನೆಗಳನ್ನು ನಿಯಂತ್ರಿಸಿ ಹೇಳುವಲ್ಲಿ ಅತ್ಯಂತ ಪರಿಣಾಮವನ್ನು ಮೂಡಿಸುತ್ತಾರೆ. ಶಿಷ್ಟಭಾಷೆಯ ಬಳಕೆ, ದೇಶಿ ಅಂಶಗಳನ್ನು ಅಳವಡಿಸಿಕೊಂಡು ಪರಿಭಾವನೆಯನ್ನು ಸತ್ವಪೂರ್ಣವಾಗಿಸಿ ಓದುಗರನ್ನು ಗಮನ ಸೆಳೆಯುವ ಕಾವ್ಯವನ್ನು ಭೀಮನಗೌಡರು ರಚಿಸಿದ್ದಾರೆ.

೫.೨ ಸಹಜ ಧಾಟಿ–ನಾಟಕೀಯ ಶೈಲಿ

ಭೀಮನಗೌಡರು ತಮ್ಮ ಕಾವ್ಯದ ಉದ್ದಕ್ಕೂ ಸಹಜ ಧಾಟಿಯನ್ನು ಬಳಸಿದ್ದು ಕಂಡು ಬರುತ್ತದೆ. ನಮ್ಮ ದೈನಂದಿನ ಬದುಕಿನ ಚಟುವಟಿಕೆಯಲ್ಲಿ ನಡೆಯುವ ಮಾತುಗಳನ್ನು ಔಚಿತ್ಯಪೂರ್ಣವಾಗಿ ತಮ್ಮ ಕಾವ್ಯದಲ್ಲಿ ಜೋಡಣೆ ಮಾಡಿದ್ದಾರೆ. ಸಹಜವೆನ್ನುವದು ಒಂದರ್ಥದಲ್ಲಿ ನೈಸರ್ಗಿಕ ಭಾವನೆಗಳ ಅಭಿವ್ಯಕ್ತಿ ಎಂದು ಹೇಳಬಹುದು. ಸಂಕೀರ್ಣಮಯವಾದ ವಿಚಾರಗಳನ್ನು ಸಹಜ ರೀತಿಯಲ್ಲಿ ವ್ಯಕ್ತಪಡಿಸುವದು ಇವರ ಪ್ರತಿಭೆಯ ದ್ಯೋತಕ.

ಭಾಷೆಯ ವಕ್ರವಿನ್ಯಾಸ, ಅನಿಸಿಕೆಗಳನ್ನೆಲ್ಲ ಚಿತ್ರದಲ್ಲಿ ಹಿಡಿದು ಇಡುವದರಿಂದ ಒದಗುವ ದೃಶ್ಯಾತ್ಮಕತೆ, ಸಂಭಾಷಿಸುವ ರೀತಿಯ ಧಾಟಿಗಳಿಂದ ಒದಗುವದೆ ನಾಟಕೀಯ ಶೈಲಿ ಇದು ಒಂದು ಬಗೆಯ ಕಾವ್ಯಕ್ಕೆ ವೈಶಿಷ್ಟ್ಯತೆಯನ್ನು ನೀಡುತ್ತದೆ.

ಭೀಮನಗೌಡರು ತಮ್ಮ ಕವಿತೆಗಳಲ್ಲಿ ಈ ಆಯಾಮಗಳನ್ನು ಅರ್ಥಪೂರ್ಣವಾಗಿ ಹೇಳುವದರಲ್ಲಿ ಯಶಸ್ವಿಯಾಗಿದ್ದಾರೆ.

"ಏನವನ ಕುದುರೆ, ಅರಮನೆಯ ಕುದುರೆ
ಮುಟ್ಟಿದರೆ ಮಾಸಿ ದೃಷ್ಟಿಯಾದೀತು
ಸರಿಯತ್ತ ಮೆಟ್ಟಿ ಒಗೆದೀತು ಮೇಯಿಸಿ ಕಟ್ಟಿದ್ದು" (ದಿಗ್ವಿಜಯ)[೧೦]

ಕವಿ ಮೊದಲನೆಯ ಸಾಲಿನಲ್ಲಿ ಉದ್ಗಾರ ತೆಗೆಯುತ್ತಾನೆ. ಇಲ್ಲಿ ಕುದುರೆಯ ವರ್ಣನೆ ತುಂಬಾ ಸೊಗಸಾಗಿ ಚಿತ್ರಿತವಾಗಿದೆ. ಎಂಥ ಅಪರೂಪದ ಕುದುರೆ ಅದು ಮುಟ್ಟಿದರೆ ಅದರ ಶರೀರಕ್ಕೆ ಕುಂದು ಬಂದಿತು ಕೊನೆಯ ಸಾಲಿನಲ್ಲಿ ನಾಟಕೀಯ ಶೈಲಿದೆ. ವಾಸ್ತವಿಕತೆಯು ಇದೆ ಆದರೆ ಸಹಜ ಧಾಟಿಯಲ್ಲಿ ಕವನ ಮೈದಾಳಿದೆ.

"ನಕ್ಕದ್ದು ಚಕ್ ಎಂದು ಕೆಸರಾಗ
ಸಿಕ್ಕು ಮತ್ತೆ ನಗುತ್ತಿದೆ
ನಕ್ಕೀತು ಬಿಡು ಸಸಿಯಾಗಿ
ಹೂವಾಗಿ ಚಿಕ್ಕ್ಯಾಗಿ
ನಕ್ಕರೂ ನಕ್ಕೀತು ಬಿಡು
ಮಣ್ಣ ಮೇಲೆ, ಗಾಳಿ ಮೇಲೆ,

ನೀರ ಮೇಲೆ
ನನಗೇಕೆ ಕಿಚ್ಚು?"   (ಬರಿ ಅನಿಸಿಕೆ)[೧೧]

ವಾಸ್ತವಿಕ ಬದುಕಿನ ಹಿಂದೆ ವಿನೋದದ ಮಾತುಗಾರಿಕೆಯ ಕೌಶಲ್ಯತೆಯಿದೆ. ನಾವು ದೈನಂದಿನ ಜೀವನದಲ್ಲಿ ಇನ್ನೊಬ್ಬರ ಬದುಕಿನ ಬಗ್ಗೆ ಹಂಗಿಸಬಾರದು. ಅವರನ್ನು ಕೀಳು ಮನೋಭವನೆಯಿಂದ ನೋಡಬಾರದು. ಕವನದ ಒಳಾರ್ಥದಲ್ಲಿ ವ್ಯಂಗ್ಯ ಧೋರಣೆಯ ನಿಲುವು ಇದ್ದರೂ ಸಹಜವಾಗಿ ಭಾಷೆ ಆಡು ನುಡಿಯ ಶೈಲಿಯಲ್ಲಿ ತನ್ನ ಅಂಶವನ್ನು ಬಿಚ್ಚಿಕೊಳ್ಳುತ್ತದೆ.

ಭೀಮನಗೌಡರ ಅವರು ಪ್ರೀತಿಯನ್ನ ಕಳವು ಮಾಡುವ ಸಂದರ್ಭ ಹೇಗಿತ್ತು ಎಂದು ಚೆನ್ನಾಗಿ ನಿರೂಪಿಸಿದ್ದಾರೆ.

"ಅಲ್ಲs
ಏ ಜಾಣ ತುಡುಗಿ,
ಮನೆಯ ಸಂದಕದಲ್ಲಿ
ರಾಶಿ ರಾಶಿ ಬಿದ್ದು
ನಿನ್ನ ಕಣ್ಣು ಸೆಳೆದ
ಒಲವ ಸಂಪತ್ತೆಲ್ಲ ಕಳುವು ಮಾಡಿ
ಮೈತುಂಬ ಹಾಕಿಕೊಂಡು
ಥಕಥಕ ಕುಣಿಯಬೇಕೆನುವಿಯೇನ್s?"   (ತುಡುಗಿ)[೧೨]

ಈ ಕವನವು ತುಂಬಾ ವಿಶಿಷ್ಟ ಪೂರ್ಣವಾಗಿದೆ. ಸಂಸಾರ ಬದುಕಿನ ಚಿತ್ರಣದಲ್ಲಿ ಹುಳಿ ಹಿಂಡುವ ಕ್ರಿಯೆ ಇಲ್ಲಿ ಅಭಿವ್ಯಕ್ತಿಯಾಗುತ್ತದೆ. ಆದರೆ ಪ್ರೇಮದ ಒಂದು ಜಾಲದಲ್ಲಿ ಸಿಕ್ಕು ಹಾಕಿಕೊಳ್ಳುವ ವ್ಯಕ್ತಿಯ ಸ್ಥಿತಿಯು ಉಭಯ ಸಂಕಷ್ಟದಲ್ಲಿ ಸಿಕ್ಕು ಪಾರಾಗುವದನ್ನು ದ್ವಂದ್ವ ಪರಿಸ್ಥಿತಿಯನ್ನು ನಿರ್ವಹಿಸುವದ ಜೊತೆಯಲ್ಲಿ ನಾಟಕೀಯ ಸ್ವರೂಪದ ಕಲಾತ್ಮಕತೆಯಿದೆ, ಹೆಣ್ಣಿನ ವೈಯಕ್ತಿಕ ಬದುಕಿನ ತಳಮಳವಿದೆ.

"ಅಂತೇ ಖುಷಿ ನನಗೆ
ನಿನ್ನಾಕೆಯೆಂದರೆ ಮಂದಿಗಾಗುವಂತೆ
ಲೇ ಕಿಸಬಾಯಿ
ನಿನ್ನಾಕೆಯನ್ನು ನೀ ಬರಿ ನೋಡುತ್ತೀ
ನಗುತ್ತಿ
ಬೆಸೆಯುತ್ತಿಲ್ಲ
ಬಿಸಿಲಾಗಿ ನೀರು ಕಾಯಿಸುತ್ತಿಲ್ಲ!"   (ನಗ್ತಾನ ಮಗ)[೧೩]

ಕವನದ ಶಿರ್ಷಿಕೆಯನ್ನು ನೋಡಿದಾಗ ನಮ್ಮ ಮನಸ್ಸಿನಲ್ಲಿ ಒಂದು ಕೀಳರಿಮೆಯ ಭಾವನೆ ತಾನೆ ಸೃಷ್ಟಿಯಾಗುತ್ತದೆ. ಆದರೆ ಕವಿಯ ಉದ್ದೇಶ ಬೇರೆ ರೂಪದಲ್ಲಿದೆ.

ಹೋರಾಟ ಬದುಕಿನ ಒಂದು ವಿಚಾರ ಲಹರಿಯಲ್ಲಿ ಸ್ವಾತಂತ್ರ್ಯ, ಸ್ವಾವಲಂಬನೆಯ ಜೀವನಕ್ಕೆ ಹೋರಾಡುವ ವ್ಯಕ್ತಿಯ ವ್ಯಕ್ತಿತ್ವದ ಆದರ್ಶ ಕನಸಿನ ಒಂದು ನೋಟ ವೈಚಾರಿಕವಾಗಿದೆ. ಆದ್ದರಿಂದ ಸಹಜಭಾಷೆಯ ನುಡಿಯಲ್ಲಿ ಕವನ ಕೊನೆಗೊಳ್ಳುತ್ತದೆ.

"ಗೌಡರೇ, ನಿನ್ನೆ ಕಳ್ಳ ಕುಡಿದು
ನನ್ನ ಹೊಡೆದು ಬಡೆದು
ಹೊಲೆಯರ ಕಮಲೆಯ ಮನೆಗೆ ಹೋದವರು
ಈವರೆಗೂ ಬರದಿದ್ದರೆ ನಾನೇನು ಮಾಡಲಿ?
ಎಂದಾಗ ಗೌಡರ ಬಾಯಿ ರಂಗುರಂಗಾಗಿತ್ತು."

(ಹದ್ದು ಮತ್ತು ಮಾಂಸ)[೧೪]

ಕವಿ ಹಳ್ಳಿ ಬದುಕಿನ ಚಿತ್ರಣ ಎಷ್ಟೋಂದು ವಿಚಿತ್ರಮಯವಾಗಿರುತ್ತದೆ ಎಂದು ಚಿತ್ರಿಸುವಲ್ಲಿ ಜೀವನದ ವ್ಯಯಕ್ತಿಕ ಅನುಭವದ ವಿಷಯ ಇಲ್ಲಿ ಅಡಕವಾಗಿದೆ. ಸಹಜ ಧಾಟಿಯಲ್ಲಿ ಕವನ ಮೈದಾಳಿದೆ. ಆದರೆ ಕೊಂಚ ಮಾತಿನಲ್ಲಿ ಏರು-ಪೇರು ಕಂಡು ಬರುತ್ತಿರುವ ಸಂದರ್ಭದಲ್ಲಿ, ಕೊನೆಯ ಸಾಲಿನಲ್ಲಿ ನಾಟಕೀಯತೆ ಥಳಕು ಹಾಕಿಕೊಂಡಿದೆ.

ಗಿಳಿಗೆ ಧೈರ್ಯ ತುಂಬುವದರ ಮೂಲಕ ಕವಿಯು ಹೇಗೆ ಆಶಿಸುತ್ತಾನೆ.

"ಗಿಳಿರಾಮ
ಉಪವಾಸ ಬೀಳುವದೆಂದರೆ ಸತ್ತ ಹಾಗೇ
ಸಾಯ ಬೇಡ,
ದಿಗ್ಗನೆ ಹೆಗ್ಗಣವಾಗು
ಇದ್ದ ಚೀಲವೆಲ್ಲ ಹದ್ದು ಹೊಡೆ,
ಗಪ ಗಪ ಮುಕ್ಕು
ಎಚ್ಚರಿಕೆ ಅಲ್ಲಿಯೇ ಇದೆ ಒಂದು ಬೆಕ್ಕು"

(ಗಿಳಿರಾಮನಿಗೆ ಒಂದು ಮಾತು)[೧೫]

ಪ್ರಸ್ತುತ ಸಮಾಜದಲ್ಲಿ, ಮುಗ್ಧತೆ ಸರಳತೆಗೆ ಸೌಜನ್ಯತೆ ದೊರೆಯುವದಿಲ್ಲ. ನಾವು ದಿಟ್ಟತನ ಶೂರತನದಿಂದ ಗಂಭೀರವಾಗಿ ಬದುಕಬೇಕು. ಅಂದರೆ ಕವಿ ಇಲ್ಲಿ ವ್ಯಕ್ತಿಯ ವೈಯಕ್ತಿಕ ಬದುಕಿನ ಬಗ್ಗೆ ಕಾಳಜಿ ತೋರಿಸಿದ್ದು ವಿಶೇಷ ಮತ್ತು ಸಾಮಾಜಿಕ ಪ್ರಜ್ಞೆಯ ಅರಿವು ಕೂಡಾ ಇಲ್ಲಿದೆ. ಆದರೆ ವ್ಯಕ್ತಿಗೆ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಬಾಳುವ, ನೈತಿಕ ಪ್ರಜ್ಞೆಯ ಅರಿವು ವ್ಯಕ್ತವಾಗಿದೆ. ಸಹಜವಾಗಿ ಭಾಷೆಗೆ ಒಂದು ರೀತಿಯಾದ ಮೆರಗು ಬಂದಿದೆ. ಭೀಮನಗೌಡರು ಕೋಪ-ಸಿಟ್ಟಿನಲ್ಲಿ ನಡೆಯುವ ನಾಟಕೀಯ ಸ್ವಭಾವದ ವೈರುಧ್ಯಗಳನ್ನು ಹೇಗೆ ಅಭಿವ್ಯಕ್ತಿಗೊಳಿಸಿದ್ದಾರೆ.

"ಸಿಡಿಲು ಪುಟಿದು ನನಗೇ ಬಡಿಯಿತು
ಒಮ್ಮೆಲೆ ಎದ್ದೆ
ಯಾಕೋ ಹ್ಯಾಂಗ ಕಾಣತ್ತ?
ಹಲ್ಲ ಜೋಪಾನ ಮಾಡಿಕೊಂಡು
ಬಾಯಿ ಬಳಸು ಎಂದೆ.
ಅಷ್ಟ್ಯಾಕೆ ಸಿಟ್ಟಿಗೇಳತೀರಿ
ನಾಯೇನ ತಪ್ಪ ಅಂದೀನ್ಯಾ?
ಬೇಕಂದ್ರ ಒಂದ ಬಡಿದ ಬಿಡ್ರೆಲ್ಲ ಎಂದರು,
ಮೀಸೆಯ ಮೇಲೆ ಕೈಯೆಳೆದು
ಸರಸರ ಹೊರಗಡೆ ಹೋಗಿಬಿಟ್ಟೆ."   (ಬೆಟ್)[೧೬]

ಈ ಕವನದಲ್ಲಿ ಇಬ್ಬರು ಸ್ನೇಹಿತರ ಮಧ್ಯ ನಡೆಯುವ ಸಂಭಾಷಣೆಯು ಆಟದ ವಿಷಯದಲ್ಲಿ ಸೋಲು-ಗೆಲುವುಗಳ ಮೂಲಕ ಮನಸಿನ ಬಾವೋದ್ವೇಗವನ್ನು ವ್ಯಕ್ತಗೊಳಿಸುತ್ತದೆ. ನಮ್ಮ ಬದುಕಿನಲ್ಲಿಯ ಸೋಲು-ಗೆಲುವು ಇದ್ದದೇ ಅದನ್ನು ಸಮಾನವಾಗಿ ಕಾಣುವ ರೀತಿ ಗಮನಾರ್ಹವಾಗಿದೆ. ಈ ಆಟದಲ್ಲಿ ನಡೆಯುವ ಅತಿರೇಕತನವನ್ನು ಕವಿ ತುಂಬಾ ಸೊಗಸಾಗಿ ಪ್ರತಿಬಿಂಬಿಸಿದ್ದಾನೆ.

ಕವಿಯು ಕೇರಳ ಪ್ರವಾಸಕ್ಕೆ ಹೋದ ಸಂದರ್ಭದಲ್ಲಿ ತನಗೊಂದು ಹೊಸ ಅನುಭವ ದೊರೆಯಿತು. ಎಂದು ಈ ಕೆಳಗಿನ ಕವಿತೆಯಲ್ಲಿ ಹೀಗೆ ವ್ಯಕ್ತಪಡಿಸುತಾರೆ.

"ಈ ವ್ಯಕ್ತಿಗೆ ಜೀವವಿದೆಯೇ? ಎಲ್ಲಿ?
ಸಂಶಯ ಪಿಶಾಚಿಯಾಗಿ ನಾನು ಓಡುವೆ ಸಂಚಿನಲ್ಲಿ
ಕೊನೆಯ ಯತ್ನವಾಗಿ
'ನಾನೊಬ್ಬ ಕವಿ' ಎಂದು ಶಬ್ದದ ಗದ್ದಲ ಮಾಡಿದೆ
ಆಶ್ಚರ್ಯ ವೆಂದರೆ ಕೂಡಲೆ ಮುಖ ಅರಳಿತು
ಚಾಳೀಸಿನೊಳಗಿನ ಕಣ್ಣು ಪಿಳಗುಟ್ಟಿತು
ಆಕಾಶದಂತೆ ಹೊರ ಬೀಳುವ ಬಾನಾಡಿಯಂತೆ
ಪೆನ್ನು ಕೆಳಗಿಟ್ಟು ಬೀಡಿಹಚ್ಚಿ
ಪುಸು ಪುಸು ಹೊಗೆ ಬಿಡುತ್ತ ಗಾಡಿ ಹೊರಟಂತೆ
ಸಂಭಾಷಣೆ ಸುರುವಾಯಿತು." (ಕೇರಳದಲ್ಲಿ ವಾ.ನಾ.ಭೆಟ್ಟಿ)[೧೭]

ಕವಿ ಕೇರಳ ಪ್ರವಾಸದಲ್ಲಿ ವಾ.ನಾ.ಎಂಬ ಸಾಹಿತಿಯನ್ನು ಕಾಣುತ್ತಾರೆ. ಸಾಹಿತ್ಯದ ಹುಚ್ಚು ಕವಿಗೆ ಕಾಡುವ ಪ್ರಶ್ನೆ ಅದನ್ನು ಆಗಾಗ ಮೆಲಕು ಹಾಕುವ ಸ್ವಭಾವ ನಮ್ಮ ಕವಿಯದು. ಕೇರಳದ ಆ ಸಾಹಿತಿ ಅಪರಿಚಿತ ವ್ಯಕ್ತಿ. ಆ ಸಾಹಿತಿ ಮಾತನಾಡಿಸುವದು ಹೇಗೆ? ಎಂಬುದು ಯಕ್ಷಪ್ರಶ್ನೆ ಕಾಡುತ್ತದೆ. ಇಲ್ಲಿ 'ನಾನೊಬ್ಬ ಕವಿ' ಎಂದು ಹೇಳುವಲ್ಲಿ

ನೈಜತೆ ಅಡಗಿದೆ. ಸಾಹಿತಿಯೊಂದಿಗೆ ಜಾಣ್ಮೆಯಿಂದ ಸಂಭಾಷಣೆ ಮುಗಿಸಿಕೊಂಡು ನಾಟಕೀಯ ರೂಪದಲ್ಲಿ ನಡೆದ ಮಾತಿನಲಹರಿ ನೆನೆಪಿಸಿಕೊಳ್ಳುತ್ತ ದಾರಿ ಹಿಡಿದು ಮುಂದಿನ ಕೆಲಸಕ್ಕೆ ಸಿದ್ಧರಾಗುವ ವಿಚಾರ ಆಶ್ಚರ್ಯಕರವಾಗಿದೆ.

"ಮರುದಿನ
ಗುಪ್ತವಾಗಿ ಮೊದಲನೆಯವನಿಗೆ
ಅವಳು ನಿನ್ನನ್ನು ಕೇಳಿದಳು ಎಂದು
ಸಿಗರೇಟು ಹಚ್ಚಿದೆ
ತಬ್ಬಿಬ್ಬಾದ
ಪೋಲೀಸನನ್ನು ಕಂಡ ಕಳ್ಳನ ಹಾಗೆ
ನಿಮ್ಮ ಮುಖ ತೇಜವಾಗಿದೆಯಂತೆ
ಎಂದು ಹೊಗೆ ಬಿಟ್ಟೆ,
ಹಿಗ್ಗಿದ ಬಿಡುಗಡೆಯಾದ ಖೈದಿಯಂತೆ
ಸಾವಕಾಶ ಮೌಲ್ಯಮಾಪನದ ಗಂಟು ಕಟ್ಟಿಟ್ಟು
ಹುಮ್ಮಸಿನಿಂದ ಹೊರಗೆ ಹೋದ
ಸ್ವಯಂವರದ ಅರ್ಜುನನಂತೆ" (ಮೌಲ್ಯ ಮಾಪನ)[೧೮]

ಮೌಲ್ಯಮಾಪನಕ್ಕೆ ಹೋದ ಸಂದರ್ಭದಲ್ಲಿ ಕವಿಗೆ ಇದೊಂದು ಭವ್ಯ ಅನುಭವ. ಅಲ್ಲಿ ಒಬ್ಬಳು ಅಧ್ಯಾಪಕಿ ಫಿಟ್ ಪ್ಯಾಂಟ ಧರಿಸಿಕೊಂಡು ಬಂದಿರುವದನ್ನು ನೋಡಿ ಅಧ್ಯಾಪಕರ ಬಳಗವೆಲ್ಲ ಮನಸಿಗೆ ಸಾಕಾಗುವಷ್ಟು ನಕ್ಕು ನಲಿಯುತ್ತಾರೆ. ಅವಳ ಸಂಸ್ಕೃತಿಯನ್ನು ಕಂಡು ಗುಸು-ಗುಸು ತುಸು ಚರ್ಚೆಯು ನಡೆಯಿತು. ನಮ್ಮ ಕವಿಯ ಕುಂಟ ಚೇಷ್ಟೆ ಹೇಗಿದೆ ನೋಡಿ, ಒಬ್ಬ ಅಧ್ಯಾಪಕನ ಮನಸ್ಸಿನ ತುಡಿತವನ್ನು ಪರೀಕ್ಷೆ ಮಾಡಿದ್ದಾನೆ. ಅವಳ ಮೇಲೆಟ್ಟಿರುವ ಅನುರಾಗ ಎಂಥದು, ಕೆಲಸ ಅರ್ಧಕ್ಕೆ ನಿಲ್ಲಿಸುವದು, ಅವಳಿಗಾಗಿ ಹಂಬಲಿಸುವದು, ಕೊನೆಗೂ ನಿರಾಸೆ ನಾಟಕೀಯ ಸಂಭಾಷಣೆಯಲ್ಲಿ ಕೊನೆಗೂ ನಮ್ಮ ಕವಿ ಯಶಸ್ವಿಯಾಗಿದ್ದಾರೆ. ಇಲ್ಲಿ ಸಹಜ ಭಾಷೆಯ ಪ್ರಯೋಗವು ಇದೆ.

ಭೀಮನಗೌಡರ ಅವರು ತಮಗೆ ಆದ ವಾಸ್ತವಿಕ ಅನುಭವವನ್ನು ಹೀಗೆ ತಮ್ಮ ಮಳೆಯ ಪ್ರಸಂಗ ಕವನದ ಮೂಲಕ ವ್ಯಕ್ತಪಡಿಸುತ್ತಾರೆ.

"ಇನ್ನೂ ಅರ್ಧ ಉಳಿದಿದ್ದೆನಲ್ಲ
ಅದರಿಂದ ಆಕಸ್ಮಾತ ಹಾದಿಯಲ್ಲಿಯೇ
ಸಿಕ್ಕ ಗಿಡದ ಬುಡದಲ್ಲಿ ನಿಂತೆ
ಅಲ್ಲಿಗೇ ಬಂದ ಗುಂಪು ವಿದ್ಯಾರ್ಥಿಗಳು
ಇದ್ದ ಒಂದೆ ಕೊಡೆಯಲ್ಲಿ ನನ್ನನ್ನೂ ಕರೆದು
ಒಳ್ಳೆ ಬಡಿವಾರದಿಂದ ಇದೆಂಥ ಮಳೆ ಬಿಡಿರೋ

ನೀವು ನಡಿರೋ ಎಂದೆ
ತಮ್ಮ-ತಮ್ಮೊಳಗೆ ನಗುತ್ತ ಹೋಗಿ ಬಿಟ್ಟರು
ನನ್ನನ್ನು ಅವ್ಯವಹಾರಿಕನೆಂದರೋ ಏನೋ"
(ಮಳೆಯ ಪ್ರಸಂಗ)[೧೯]

ಮಳೆಯ ರಭಸಕ್ಕೆ ಸಿಕ್ಕು ಹಾಕಿಕೊಂಡು ಕವಿ ಕಾಲೇಜ್ ಸೇರದೆ ದಾರಿ ಮಧ್ಯ ಆಶ್ರಯ ಹುಡುಕಾಡುವ ಸ್ಥಿತಿ ವಿಚಿತ್ರಮಯವಾಗಿದೆ. ಕೊನೆಗೆ ದೊರೆತ ಆಶ್ರಯ ಮರದ ಕೆಳಗೆ, ಕಾಕತಾಳಿಯೆಂಬಂತೆ ಅವರ ಶಿಷ್ಯರು ಅಲ್ಲಿಗೆ ಬರಬೇಕೇ? ಇವರ ಸ್ಥಿತಿ ನೋಡಿ ಅಭಿಮಾನ, ಪ್ರೀತಿಯಿಂದ ನಮ್ಮ ಕೊಡೆಯ ಆಶ್ರಯದಲ್ಲಿ ನೀವು ನಮ್ಮ ಜೊತೆಗೆ ಬರಿ ಎಂದರು. ಆದರೆ ಕವಿಯು ಅಂಥ ಹಂಗಿನಲ್ಲಿ ಬೀಳುವ ಪ್ರವೃತ್ತಿ ಅವರ ಜಾಯಮಾನದಲ್ಲಿ ಇಲ್ಲ. ಹೀಗಾಗಿ ಅವರಲ್ಲಿರುವ ಶ್ರೆದ್ಧೆಯ ಮನೋಧರ್ಮದ ವ್ಯಕ್ತಿತ್ವದ ಗುಣ ಕವನದಲ್ಲಿ ಅಡಕವಾಗಿದೆ.

ಸಮಾಜ ಮತ್ತು ವ್ಯಕ್ತಿಯ ದ್ವಂದ್ವಗಳನ್ನು ಕಾವ್ಯವಾಗಿಸುವಲ್ಲಿ ಕವಿ ಸಫಲರಾಗಿದ್ದಾರೆ. ಭಾಷೆಯನ್ನು ತನ್ನ ಅಭಿವ್ಯಕ್ತಿಗೆ ತಕ್ಕಂತೆ ಬಳಸಿಕೊಳ್ಳುವ ಸಾಮರ್ಥ್ಯ ಈ ಕವಿಗಿದೆ, ಓದುಗರನ್ನು ಥಟ್ಟನೆ ಆಕರ್ಷಿಸುವ ಶಕ್ತಿ ಇಲ್ಲಿಯ ಕವನಗಳಲ್ಲಿದೆ. ಭಾಷೆಯಲ್ಲಿ ವ್ಯಂಗ್ಯವಾದ ನಾಟಕೀಯತೆಯಿದೆ. ಹೀಗೆ ಸಹಜಧಾಟಿ-ನಾಟಕೀಯ ಗುಣಗಳಿಂದ ಭೀಮನಗೌಡರ ಕವಿತೆಗಳಿಗೆ ಒಂದು ಆಕರ್ಷಕ ಗುಣಶಕ್ತಿ ಪ್ರಾಪ್ತವಾಗಿರುವದಂತೂ ಸರಿ.

೫.೩ ಪ್ರತಿಮೆ-ಸಂಕೇತ

ಪ್ರತಿಮೆ ಎಂದರೆ ಮೂರ್ತಿ, ಬೊಂಬೆ, ಹೋಲಿಕೆ ಎನ್ನುವ ಅರ್ಥಗಳಿವೆ. ಆದರೆ ಪ್ರತಿಮೆ ಎಂದಾಗ ಇಂದ್ರಿಯ ಗ್ರಾಹ್ಯವಾದ, ತಟಕ್ಕನೇ ನಮ್ಮ ಗಮನವನ್ನು ಸೆಳೆದು ನಮ್ಮ ಮನಸ್ಸು ಮತ್ತು ಬುದ್ಧಿಗಳಿಗೆ ರೆಕ್ಕೆ ಕೊಡುವ ಶಕ್ತಿಯನ್ನುಳ್ಳ ಕಾಲ ದೇಶಗಳನ್ನು ಮೀರುವ ಶಕ್ತಿಯನ್ನು ನಮಗೆ ಕೊಡುವ ಮತ್ತು ನಮ್ಮ ಆಂತರಿಕ ಶಕ್ತಿಗಳು ಹೆಚ್ಚಾದ ಹಾಗೆನ್ನಿಸುವಂತೆ ಮಾಡುವ 'ಶಬ್ದ ಚಿತ್ರ' ಎಂದು ಹೇಳಬಹುದು.

ಸಂಕೇತವು-ಕಾವ್ಯದಲ್ಲಿ ಮನವ ಜಗತ್ತಿನ ವ್ಯವಹಾರದಲ್ಲಿ ಬಳಕೆಯಾದ ಪರಿಯನ್ನು ಗಮನಿಸುತ್ತೇವೆ. ಕಾವ್ಯದಲ್ಲಿ ಬಳಕೆಯಾದ ಸಂಕೇತವು ಪರಿಣಾಮ ಮತ್ತು ಧ್ವನಿಯನ್ನು ನೀಡುವದರಲ್ಲಿ ತನ್ನ ಕ್ರಿಯಾಗುಣವನ್ನು ಮೆರೆದದ್ದು ಸ್ಪಷ್ಟವಿದೆ.

ಅದೇ ರೀತಿಯಾಗಿ ಭೀಮನಗೌಡರು ತಮ್ಮ ಕವನ ಸಂಕಲನದಲ್ಲಿ ಪ್ರತಿಮೆ, ಸಂಕೇತಗಳ ಪ್ರಯೋಗ, ವಿಶಿಷ್ಟ ಬಗೆಯ ರಚನೆಯಲ್ಲಿ ಮೈಚಾಚಿಕೊಂಡಿವೆ.

"ಪಾಪ ನಾಯಿ ಬಲು ಬೆರಿಕಿ ಖರೆ
ನೀ ನಿನ್ನ ಚೆಲುವ ಸೆರೆ ಕುಡಿಸಿ

ನಿಶೆಯೇರಿಸಿದ್ದರೆ:
ಗಪ್ಪಾಗಿ ಬೆಪ್ಪಾಗಿ ನಿಂತು
ನಿನ್ನನ್ನೇ ನೋಡುತ್ತ
ಜೊಲ್ಲು ಸುರಿಸುತ್ತಿದ್ದರೆ!" (ತುಡಗಿ)[೨೦]

ಭೀಮನಗೌಡರು ನಾಯಿ ಎಂಬ ಪ್ರಾಣಿಯನ್ನು ಪ್ರೇಮದ ಪ್ರತಿಮೆಯಾಗಿ ಬಳಸಿಕೊಂಡಿದ್ದಾರೆ. ಹೆಣ್ಣಿನ ಸೌಂದರ್ಯದ ಕಲಾತ್ಮಕ ಚಿತ್ರ ಬಿಡಿಸುವಲ್ಲಿ ಕವಿ ಜಾಣ್ಮೆ ತೋರಿದ್ದಾರೆ. ಲೈಂಗಿಕತೆಯ ವ್ಯಾಮೋಹದಲ್ಲಿ ನಡೆಯುತ್ತಿರುವ ದ್ವಂದ್ವ ಸಮಸ್ಯೆಗಳಿಗೆ ಕವಿ ಇಲ್ಲಿ ತಂತ್ರಗಾರಿಕೆಯನ್ನು ಹೆಣದಿದ್ದಾರೆ.

ಮುಂದಿನ ಕವನದಲ್ಲಿ ಕವಿ ತುಂಬಾ ಸೊಗಸಾಗಿ ನಯವಾಗಿ ವಿವರಿಸಿದ್ದಾರೆ.

"ನನಗೂ ಗೊತ್ತು ಪ್ರಿಯೆ
ಹಕ್ಕಿ ಹಾರಬೇಕು ಇಲ್ಲಾ ರೆಕ್ಕೆ ಮುರಿದು
ಬೀಳಬೇಕು
ಆದರೆ ಇಲ್ಲಿ ಬಯಲಿಲ್ಲ ಇಲ್ಲಿ ಮಾಮರ ವಿಲ್ಲ
ಇಲ್ಲಿ ಸರೋವರವಿಲ್ಲ ಇಲ್ಲಿ ಬೈಗುಬೆಳಗಿಲ್ಲ."

(ಹಕ್ಕಿ ಹಾರಬೇಕು) [೨೧]

ಭೀಮನಗೌಡರು ಈ ಕವನದಲ್ಲಿ ಬಹಳಷ್ಟು ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಏಕೆಂದರೆ ಹಕ್ಕಿ ಎಂಬ ಪಕ್ಷಿಯನ್ನು ಇಲ್ಲಿ ಮನುಷ್ಯನ ಬದುಕಿಗೆ ಪ್ರತಿಮೆಯಾಗಿ ಬಳಸಿದ್ದಾರೆ. ಬೇಂದ್ರೆಯವರ 'ಹಕ್ಕಿ ಹಾರುತಿದೆ ನೋಡಿದರಾ', ಕವನದಲ್ಲಿ ಹಕ್ಕಿಯನ್ನು ಕಾಲಕ್ಕೆ ಹೋಲಿಸಿದರೆ ಭೀಮನಗೌಡರು ತಮ್ಮ ಕಾವ್ಯದಲ್ಲಿ ಹೀಗೆ ವ್ಯಕ್ತಪಡಿಸಿದ್ದಾರೆ. ಮನುಷ್ಯನ ಬದುಕನ್ನು ಹಕ್ಕಿಯ ಪ್ರತಿಮೆಯನ್ನಾಗಿ ಬಳಸಿದ್ದಾರೆ. ಮನುಷ್ಯನಿಗೆ ಮತ್ತೊಂದು ಜಗತ್ತಿನ ಆಸೆ–ಕನಸು ಇಲ್ಲ, ಜಗತ್ತಿಗಾಗಿ ಹಾತೊರೆದು ಹುಚ್ಚನಾಗುವ ವೃತ್ತಿಯು ಇವನದಲ್ಲ. ಕವನದಲ್ಲಿ ಒಂದು ರೀತಿಯಾದ ಭೀತಿಇದೆ ಆದರೆ ಭಾವನೆಯ ಹೆದರಿಕೆಯಿಲ್ಲ. ಜೀವನವನ್ನು ಅನುಭವಿಸಿ ತೀರೋಣ ಬಂದದ್ದು ಬರಲಿ ಎಂದು ಬಂಡೆಕಲ್ಲಿನಂತ ಮನಸು ಇದೆ. ಜೀವನವನ್ನು ಸರಿಯಾಗಿ ಆಳವಾಗಿ ನೋಡುವ ಆಶಾಭಾವನೆ ಮೂಡಿ ಬಂದಿದೆ.

"ನೋಡಿ ನನ್ನ ಕಳ್ಳು ಕರಗಿ
'ದಯಬೇಕು ಸಕಲ ಪ್ರಾಣಿಗಳಲ್ಲಿ' ನೆನಪಾಗಿ
ಮರಮರನೆ ಮರುಗಿ
ಪಾಪ ಅದನ್ನು ಹೊರಹಾಕಿ
ಹಾದಿ ತೋರಿಸಬೇಕೆಂದು ಕಸಬರಿಗೆ ಹಿಡಿದೆ
ಹುಡುಗರನ್ನು ಬೆದರಿಸಿ
ಅವರ ಹಿಂದೆ ಕೈಯೆತ್ತಿ ಸುತ್ತಾಡಿದೆ

[illegible]

[illegible]

[illegible]

[illegible]

[illegible]

ಕಟ್ಟ ಕಡೆಗೆ ಪಾಪ ಅದು ಜೇಡನ ಬಲೆಯಲ್ಲಿ
ಒದ್ದಾಡುವಾಗ ಚಪ್ಪಾಳೆ ತಟ್ಟಿ
ಮತ್ತೂ ನಗಬೇಕು ಈ ನಮ್ಮ ಹುಡಗರು." (ನಮ್ಮ ಖುಷಿ)[೨೨]

ಪ್ರಸ್ತುತ ಬದುಕಿನ ಸ್ಪಷ್ಟ ಚಿತ್ರಣ ಈ ಕವನದಲ್ಲಿ ಸ್ವಾರಸ್ಯಕರ ರೀತಿಯಲ್ಲಿ ಬೆಳೆದು ಬಂದಿದೆ. ಪರಸ್ಪರರು ಇಂದಿನ ಯಾಂತ್ರಿಕ ಬದುಕಿನಲ್ಲಿ ಒಬ್ಬರಿಗೊಬ್ಬರು ಅರ್ಥ ಮಾಡಿಕೊಂಡು ನಡೆಯಬೇಕು. ಇನ್ನೊಬ್ಬ ವ್ಯಕ್ತಿಯು ಸಮಾಜದಲ್ಲಿ ಕೀಳರಿಮೆ ರೂಡಿಸಿಕೊಂಡು ಹಾಳಾಗುತಿದ್ದರೆ ಅವನನ್ನು ಒಂದು ರೀತಿಯ ಬದುಕಿನ ಒಳ್ಳೆಯ ಮಾರ್ಗ ತೋರಿಸುವಲ್ಲಿ ಕವಿ ಇಲ್ಲಿ ಪಾತರಗಿತ್ತಿಯನ್ನು ಮನುಷ್ಯ ಬದುಕಿನ ಹೋರಾಟ ಒಂದು ಸಂಘರ್ಷವಾಗಿದೆ ಎಂದು ಸಾಂಕೇತಿಕವಾದ ಅರ್ಥವನನ್ನು ನೀಡುತ್ತಾನೆ.

ಕವಿ ಬೆಕ್ಕು ಎಂಬ ಪದ್ಯದಲ್ಲಿ ವಿರಹದ ಚೆಲ್ಲಾಟ ಎಷ್ಟೊಂದು ಪರಿಣಾಮಕಾರಿ ಆಗಿರುತ್ತದೆ ಎಂಬುದನ್ನು ಸುಂದರವಾಗಿ ಹಿಡಿದು ಇಟ್ಟಿದ್ದಾರೆ.

"ಬೆಳಕಿಂಡಿ ಮೆಲ್ಲಗೆ ಒಳಗೆ ಇಳಿದು
ಹರೆಯವನ್ನು ಹುರುಪಿನಿಂದ ಮರೆಯುವಾಗ
ಹಿರಿ ಹಿರಿ ಹಿಗ್ಗಿ ಹವುರಗೆ ನಿನ್ನ ಸೀರೆ ಜಗ್ಗಿ
ಮೆತ್ತಗೆ ನಿನ್ನ ಮೈಯೊತ್ತಿ
ಸುತ್ತ ಗಮ್ಮತ್ತು ಮಾಡಿ
ತೊಡೆಯ ಸಂದಿಯಲ್ಲಿ ಬೆಚ್ಚಗೆ
ಗುರ್ರೆಂದು ಒರಗುವ ಬೆಕ್ಕು." (ಬೆಕ್ಕು)[೨೩]

ಪ್ರೇಮ ಎಂಬುದು ಮಳೆಯ ಬಿದ್ದಾಗ ಹರಿಯುವ ಹಳ್ಳದ ನೀರಲ್ಲ ಅದು ಒರತೆಯ ನೀರ ಇದ್ದಂತೆ, ಅದು ಸದಾ ಹರಿಯುತ್ತದೆ. ಅದು ನಮ್ಮ ಇಂದ್ರಿಯಗಳ ಮೂಲಕ ತನ್ನ ನಾಲಿಗೆಯ ಕಿಡಿಯನ್ನು ಚಾಚುತ್ತದೆ ಅದಕ್ಕೆ ಕವಿ ಇಲ್ಲಿ ಬೆಕ್ಕು ಎಂಬ ಪ್ರಾಣಿಗೆ ಪ್ರೇಮದ ಪ್ರತಿಮೆಯಾಗಿ ಬಳಸಿಕೊಳ್ಳುವ ಸಂದರ್ಭ ಸ್ವಾರಸ್ಯಕರವಾಗಿ ಚಿತ್ರಿತವಾಗಿದೆ.

ಕವಿ ಇಂಥ ಒಂದು ಸಂಗತಿಯನ್ನು ಗಮನದಲ್ಲಿಟ್ಟುಕೊಂಡು ಮತ್ತೊಂದು ಪದ್ಯದಲ್ಲಿ ಹೀಗೆ ಹೇಳುತ್ತಾರೆ

"ಅದೆ, ಮಾತು ಮಾತಿಗೆ ಮುತ್ತಿನ ಮಳೆ ಸುತ್ತವ ಹೊಳೆ
ಮತ್ತೆ ಮುಂಜಾನೆದ್ದು
ಈ ನಮ್ಮ ಎಮ್ಮೆ ಸೆರಗಾಡಿದ್ದೆ ಸೆರಗಾಡಿದ್ದು."
(ಆಲಮಟ್ಟಿ ಜಂಗಮರು)[೨೪]

ಈ ಕವನವು ನಿಸರ್ಗ ಪ್ರಜ್ಞೆಯ ಕಲ್ಪನೆ ಹಿನ್ನಲೆಯಲ್ಲಿ ಕವಿ ಆದರ್ಶ ಕನಸುಗಳ ವಾಸ್ತವದ ಅರಿವು ಮೂಡಿಸಲು ಇಲ್ಲಿ ಎಮ್ಮೆ ಎಂಬ ಶಬ್ದವನ್ನು ನಮ್ಮ ಮನಸ್ಸಿಗೆ ನಿದರ್ಶನವಾಗಿ ನೀಡುವ ಕವಿಯ ಆಶಯ ಸ್ಪಷ್ಟವಾಗಿದೆ. ಏಕೆಂದರೆ ಮನಸಿನ

ಹತೋಟಿ ಆಧೀನದಲ್ಲಿಟ್ಟುಕೊಳ್ಳುವದು ಕಷ್ಟವಾದ ಕೆಲಸ. ಇದು ನಾವು ಮಲಗಿಕೊಂಡಾಗ ಮಾತ್ರ ಸುಮ್ಮನಾಗಿ ಇರುತ್ತದೆ. ಅದಕ್ಕೆ ಅದರ ಚಟುವಟಿಕೆಯನ್ನು ಅದರ ಉದ್ದೇಶವನ್ನು ಇಲ್ಲಿ ಸ್ಪಷ್ಟಪಡಿಸಿದ್ದಾರೆ.

"ಹಕ್ಕೀ
ಸರಿ, ಈ ನಾರಿಯ ಮೊರೆ ಹೊಕ್ಕಿ
ಆದರೆ ನೀನು ದಿಗ್ಭ್ರಮೆಗೆ ಸಿಕ್ಕಿ
ನಿನ್ನ ಬಗ್ಗೇ ದಿನಾಲೂ ಕನಸು ಕಾಣುವಳೇನೋ ನಿಜ
ನಿನ್ನ ಪ್ರತಿಮೆಗಳು ಅವಳ ಮನೆಯಲ್ಲಿ ತೆಕ್ಕಿ ತೆಕ್ಕಿ
ಅವಕ್ಕೆ ಮೇಲೆ ಬಣ್ಣ ಬಣ್ಣದ ಗಾಜಿನ ಚೌಕಟ್ಟು
ಧೂಳ ಹತ್ತದ ಹಾಗೆ ಮಾಸಿ ಹೋಗದ ಹಾಗೆ
ನೋಡಿಕೊಳ್ಳುತ್ತಾಳೆ."   (ನಗರದಲ್ಲಿ ಹಕ್ಕಿ)[೨೫]

ಕವಿಯು ಈ ಕವನದಲ್ಲಿ ವಾಸ್ತವಿಕತೆಯ ಅಂಶವನ್ನು ತುಂಬಾ ಸೊಗಸಾಗಿ ಸೆರೆ ಹಿಡಿದಿದ್ದಾನೆ. ಹಕ್ಕಿ ಎಂಬುದು ಮನುಷ್ಯನ ಬದುಕಿನ ಸಾಂಕೇತಿಕವಾದ ಅರ್ಥದಲ್ಲಿ ಕವಿ ಇಲ್ಲಿ ಪರಕೀಯರ ಅಂದರೆ ಬ್ರಿಟಿಷರ ಆಡಳಿತದಲ್ಲಿ ನಮ್ಮನ್ನು ಹೇಗೆ ಶೋಷಣೆಗೆ ಗುರಿಪಡಿಸುತ್ತಿದ್ದರು. ಅವರು ದೇಶವನ್ನು ಆಳುವ ಸಾಮಾಜಿಕ, ರಾಜಕೀಯ ಸ್ಥಿತಿಗಳು ಹೇಗೆ ಆ ಕಾಲದಲ್ಲಿ ನಮ್ಮ ಮೇಲೆ ಪರಿಣಾಮವನ್ನುಂಟು ಮಾಡಿದವು ಎಂಬುದನ್ನು ಕವಿ ಇಲ್ಲಿ ಅರ್ಥಪೂರ್ಣವಾಗಿ ನಿರೂಪಿಸಿದ್ದಾನೆ.

"ಯಾರು ನಿಜವಾಗಿ   ಗಲ್ಲಿಗೇರಿದವರು?
ರುಂಡ-ಮುಂಡ ತುಂಡು ತುಂಡಾದವರು
ಹರಿಯುವ ನೀರು ಹೆಪ್ಪುಗಟ್ಟಿದಂತೆ
ಸಿಕ್ಕ ಸಿಕ್ಕ ಸಿದ್ಧಾಂತಗಳ
ಹಾಳು ಹಗೆಯಲ್ಲಿ ಸಿಕ್ಕು ಉಸಿರುಗಟ್ಟಿದವರು
ಭೂತ-ಭವಿಷ್ಯಗಳ ಉತ್ಸವಕ್ಕೆ
ವರ್ತಮಾನ ಬಲಿಕೊಟ್ಟವರು
ನಂಬಿಗೆಯ ಗೋರಿಯಲ್ಲಿ ಆತ್ಮ ಹುಗಿದು
ಹೊಯ್ಕೊಂಡೂ ಮೇಲೆ ಗಗನ ಚುಂಬಿ
ದೈಹಿಕ ಸ್ಮಾರಕ ಕಟ್ಟಿದವರು
ನೆಲವಿದ್ದೂ ಮಳೆಬಿದ್ದು
ಬೆಳೆಯದೆ ಮುರುಟಿದ ಪೈರುಗಳು
ಬಾಯಿ ಯಾವುದೋ ಬಾಲಯಾವುದೋ

ಮುದುರಿ ಬಿದ್ದಿರುವ ಮಣ್ಣಮುಕ್ಕ ಹಾವುಗಳು
ಸೂರ್ಯ-ಚಂದ್ರರಿಗಾಗಿ ಬೆನ್ನು ಹತ್ತಿದಾಗ
ಹಿಡಿದ ಗ್ರಹಣದ ಕತ್ತಲಲ್ಲಿ ದಿಕ್ಕು ತಪ್ಪಿದವರು
ತೋಳಕ್ಕೆ ಬುದ್ಧಿಕಲಿಸುವ ಹೊಂಚಿನಲ್ಲಿ
ಉಪವಾಸ ಸತ್ಯಾಗ್ರಹ ಕೈಕೊಂಡ ಕುರಿಗಳು
ಯಾರು
ನಿಜವಾಗಿ ಗಲ್ಲಿಗೇರಿದವರು?" (ಗಲ್ಲಿಗೇರಿದವರು)[೨೬]

(ಹಿನ್ನಲೆ:ಬೆಂಜಾಮಿನ್‌ಮೊಲಾಯಿಸ್.೧೯೮೫)

ಈ ಬೆಂಜಾಮಿನ್ ಮೊಲಾಯಿಸ್ ಯಾರು? ಎಂಬ ಪ್ರಶ್ನೆ ತಕ್ಷಣ ಉದ್ಭವಿಸುತ್ತದೆ. ಕವಿ ಈ ಕವಿತೆಯಲ್ಲಿ ಮೂರು ಭಾಗಗಳನ್ನು ಮಾಡಿ ಕೊಂಡಿದ್ದಾರೆ. ಪ್ರಥಮ ಭಾಗದಲ್ಲಿ ಹಾವಿನ ಅಸ್ತಿತ್ವದ ಬಗ್ಗೆ ವಿವರಣೆ ನೀಡುತ್ತಾರೆ. ಮಹಾರಾಷ್ಟ್ರದ ಬತ್ತೀಸಿರಾಳದಲ್ಲಿ ನಾಗ ಪಂಚಮಿಯ ದಿನ ಹಾವನ್ನು ಪ್ರತಿಯೊಬ್ಬರು ಧಾರಾಳವಾಗಿ ಮುಟ್ಟಬಹುದು. ಅವು ಕಚ್ಚುವದಿಲ್ಲ, ಸಾದು ಪ್ರಾಣಿಗಳಾಗಿರುತ್ತವೆ. ಹಾಗೆ ಹಾವಿನಂತೆ ಸಾತ್ವಿಕ ಸ್ವಭಾವದ ರಷ್ಯಾದ ಬೆಂಜಾಮಿನ್ ಆ ದೇಶದಲ್ಲಿ ಒಬ್ಬ ದೊಡ್ಡ ಕವಿಯಾಗಿರುವನು. ಈ ಕವಿಯು ಅಲ್ಲಿರುವ ಸರಕಾರದ ವಿರುದ್ಧ ಬಂಡಾಯ, ಪ್ರತಿಭಟನೆಯನ್ನು ಮಾಡುತ್ತಾನೆ. ಅನ್ಯಾಯ ಶೋಷಣೆಯ ವಿರುದ್ಧ ಬಂಡಾಯವೆಳುತ್ತಾನೆ. ಆಗ ಅಧಿಕಾರಿಗಳು ಅವನನ್ನು ಹಿಡಿದು ಗಲ್ಲಿಗೇರಿಸುತ್ತಾರೆ. ಅಂದರೆ ಕವಿ ಇಲ್ಲಿ ಒಬ್ಬ ನಿಷ್ಠಾವಂತ ವ್ಯಕ್ತಿಯ ಬದುಕಿನ ವಾಸ್ತವಿಕ ಚಿತ್ರಣದ ಮೂಲಕ ಈ ಕವನದಲ್ಲಿ ನಮ್ಮ ಮನಸ್ಸನ್ನು ಸೆರೆ ಹಿಡಿದಿದ್ದಾರೆ. ಸ್ವತಂತ್ರ, ಸಹಜ, ಜೀವಂತಿಕೆಯ ವ್ಯಕ್ತಿ ಕಾಲಕ್ರಮೇಣ ಶೋಷಣೆಗೆ ಒಳಗಾಗಿ ನಿಸ್ತೇಜವಾಗಿ, ನಿರ್ಜಿವಿಯಾಗುತ್ತಾನೆ. ಇದು ನಾಕರಿಕತೆಯ ಕ್ರೂರ ಶಿಸ್ತುಗಳ ಪರಿಣಾಮ, ಈ ಒಂದು ಹಾವಿನ ಪ್ರತಿಮೆಯ ಮೂಲಕ ಕವಿಯು ಆಧುನಿಕ ಮನುಷ್ಯ ಬದುಕಿನ ಚಿತ್ರಣವನ್ನು ಹೆಣೆಯುವದರಲ್ಲಿ ಕವಿ ತುಂಬಾ ಜಾಣ್ಮೆಯನ್ನು ತೋರಿದ್ದಾರೆ.

ಭೀಮನಗೌಡರು ಪ್ರತಿಮೆ ಮೂಲಕ ಸಮಾಜದಲ್ಲಿ ನಡೆದ ದಾರುಣ ಘಟನೆಯನ್ನು ತಮ್ಮ ಮತ್ತೊಂದು ಕವಿತೆಯಲ್ಲಿ ಬಹಳ ಸೊಗಸಾಗಿ ವಿವರಿಸಿದ್ದಾರೆ.

"ಶತಮಾನಗಳ ಕಲ್ಲುಬಂಡೆಯಂತೂ ಮೇಲೆ ಉರುಳಿಯಾಗಿದೆ
ಬುಡದಲ್ಲಿಯೇ ಮೆತ್ತಗೆ ಬೇರಿಳಿದು
ನೆಲದ ಕತ್ತಲಲ್ಲೇ ಕರ್ಮಣ್ಣುವ ಕರಿಕೆಗಳಿಲ್ಲವೆ?
ಯಾವ ಇತಿಹಾಸ-ಪ್ರಜ್ಞೆಯೂ ಇಲ್ಲದೆ ಸಹಜ
ಬಂಡೆ ಒಡೆದು ಮೇಲೆ ಮೆರೆಯುವ ಅಲಗಳು ಇಲ್ಲವೇ?"

(ಪ್ರತಿಕ್ರಿಯೆ)[೨೭]

(ಹಿನ್ನಲೆ:ಡಾ.ಅಂಬೇಡ್ಕರ)

ಪ್ರಸ್ತುತ 'ಪ್ರತಿಕ್ರಿಯೆ' ಕವನವನ್ನು ಕವಿ ಇಲ್ಲಿ ವಾಸ್ತವಿಕ ಬದುಕಿನ ವಿಚಾರ ಧಾರೆಯನ್ನು ಪ್ರತಿಬಿಂಬಿಸಿದ್ದಾರೆ. ಡಾ.ಅಂಬೇಡ್ಕರ್ ಅವರ ವಿಚಾರಗಳ ಹಿನ್ನಲೆಯಲ್ಲಿ ಮೂಡಿ ಬಂದಿದೆ. ಶತಮಾನ ಕಾಲದ ಭಾರತೀಯ ಸಂಪ್ರದಾಯ ಬದುಕಿಗೆ ಡಾ॥ಅಂಬೇಡ್ಕರರು ನೀಡಿದ ಹೊಸ ಸ್ಪರ್ಶವನ್ನು ಕವಿ ಅಪೂರ್ವವಾಗಿ ಗ್ರಹಿಸಿದ್ದಾನೆ. ಅವಿದ್ಯೆ-ಅಜ್ಞಾನಗಳನ್ನು ಘೋಷಿಸುವ ಸಾಂಪ್ರದಾಯಿಕ ವಿಚಾರಗಳನ್ನು "ಬಹುದೊಡ್ಡ ಬ್ರಹ್ಮಪಿಶಾಚಿ" ಎಂದು ಗುರುತಿಸಲಾಗಿದೆ. ಭಾರತೀಯ ಬದುಕನ್ನು ರೂಪಿಸುವ ಬಹುದೊಡ್ಡ ಬೋಧಿವೃಕ್ಷವಾಗಿ ಕವಿತೆಯ ಕೊನೆಯಲ್ಲಿ ಡಾ. ಅಂಬೇಡ್ಕರ್ ಅವರನ್ನು ಪ್ರತಿಮೆಯ ಹಿನ್ನಲೆಯಲ್ಲಿ ಗುರ್ತಿಸಿರುವದು ಕವಿಯ ವಿಚಾರ ರಹಸ್ಯಮಯಗಿದೆ.

ಅಡಿಟಿಪ್ಪಣಿಗಳು

೧. ತುಡಗಿ. ಎಚ್.ಎಸ್.ಭೀಮನಗೌಡರ. ಪು-೨೮ ಅಕ್ಷರ ಪ್ರಕಾಶನ ಸಾಗರ ೧೯೭೩
೨. ತುಡಗಿ. ಎಚ್.ಎಸ್.ಭೀಮನಗೌಡರ. ಪು-೪೪ ಅಕ್ಷರ ಪ್ರಕಾಶನ ಸಾಗರ ೧೯೭೩
೩. ತುಡಗಿ. ಎಚ್.ಎಸ್.ಭೀಮನಗೌಡರ. ಪು-೫೫ ಅಕ್ಷರ ಪ್ರಕಾಶನ ಸಾಗರ ೧೯೭೩
೪. ತುಡಗಿ. ಎಚ್.ಎಸ್.ಭೀಮನಗೌಡರ. ಪು-೬೩ ಅಕ್ಷರ ಪ್ರಕಾಶನ ಸಾಗರ ೧೯೭೩
೫. ಹುಡುಗಾಟದ ಹಾಡು. ಎಚ್.ಎಸ್.ಭೀಮನಗೌಡರ. ಪು-೧೯ ಲೋಕವಿದ್ಯಾ ಪ್ರಕಾಶನ. ಸಂಕೇಶ್ವರ. ೧೯೭೭
೬. ಹುಡುಗಾಟದ ಹಾಡು. ಎಚ್.ಎಸ್.ಭೀಮನಗೌಡರ. ಪು-೧೧ ಲೋಕವಿದ್ಯಾ ಪ್ರಕಾಶನ. ಸಂಕೇಶ್ವರ. ೧೯೭೭
೭. ಹುಡುಗಾಟದ ಹಾಡು. ಎಚ್.ಎಸ್.ಭೀಮನಗೌಡರ. ಪು-೨೩ ಲೋಕವಿದ್ಯಾ ಪ್ರಕಾಶನ. ಸಂಕೇಶ್ವರ. ೧೯೭೭
೮. ಹುಡುಗಾಟದ ಹಾಡು. ಎಚ್.ಎಸ್.ಭೀಮನಗೌಡರ. ಪು-೪೨ ಲೋಕವಿದ್ಯಾ ಪ್ರಕಾಶನ. ಸಂಕೇಶ್ವರ. ೧೯೭೭
೯. ನೆಲ ಹಿಡಿಯುವ ಮೊದಲು. ಎಚ್.ಎಸ್.ಭೀಮನಗೌಡರ. ಪು-೪೦ ಸ್ನೇಹ ಪ್ರಕಾಶನ ಬೆಳಗಾವಿ. ೧೯೮೪

೧೦.ತುಡಗಿ. ಎಚ್.ಎಸ್.ಭೀಮನಗೌಡರ. ಪು-೨೬ ಅಕ್ಷರ ಪ್ರಕಾಶನ ಸಾಗರ ೧೯೭೩

೧೧. ತುಡಗಿ. ಎಚ್.ಎಸ್.ಭೀಮನಗೌಡರ. ಪು-೪೧ಅಕ್ಷರ ಪ್ರಕಾಶನ ಸಾಗರ ೧೯೭೩

೧೨. ತುಡಗಿ. ಎಚ್.ಎಸ್.ಭೀಮನಗೌಡರ. ಪು-೫೦ ಅಕ್ಷರ ಪ್ರಕಾಶನ ಸಾಗರ ೧೯೭೩

೧೩.ತುಡಗಿ. ಎಚ್.ಎಸ್.ಭೀಮನಗೌಡರ. ಪು-೬೦ ಅಕ್ಷರ ಪ್ರಕಾಶನ ಸಾಗರ ೧೯೭೩

೧೪.ಹುಡುಗಾಟದ ಹಾಡು. ಎಚ್.ಎಸ್.ಭೀಮನಗೌಡರ. ಪು-೦೬ ಲೋಕವಿದ್ಯಾ ಪ್ರಕಾಶನ ಸಂಕೇಶ್ವರ. ೧೯೭೭

೧೫.ಹುಡುಗಾಟದ ಹಾಡು. ಎಚ್.ಎಸ್.ಭೀಮನಗೌಡರ. ಪು-೧೮ ಲೋಕವಿದ್ಯಾ ಸಂಕೇಶ್ವರ. ಪ್ರಕಾಶನ ೧೯೭೭

೧೬.ಹುಡುಗಾಟದ ಹಾಡು. ಎಚ್.ಎಸ್.ಭೀಮನಗೌಡರ. ಪು-೪೬ ಲೋಕವಿದ್ಯಾ ಪ್ರಕಾಶನ ಸಂಕೇಶ್ವರ. ೧೯೭೭

೧೭.ನೆಲ ಹಿಡಿಯುವ ಮೊದಲು. ಎಚ್.ಎಸ್.ಭೀಮನಗೌಡರ. ಪು-೦೭. ಸ್ನೇಹ ಪ್ರಕಾಶನ ಬೆಳಗಾವಿ. ೧೯೮೪

೧೮.ನೆಲ ಹಿಡಿಯುವ ಮೊದಲು. ಎಚ್.ಎಸ್.ಭೀಮನಗೌಡರ. ಪು-೧೨. ಸ್ನೇಹ ಪ್ರಕಾಶನ ಬೆಳಗಾವಿ. ೧೯೮೪

೧೯. ನೆಲ ಹಿಡಿಯುವ ಮೊದಲು. ಎಚ್.ಎಸ್.ಭೀಮನಗೌಡರ. ಪು-೩೦. ಸ್ನೇಹ ಪ್ರಕಾಶನ ಬೆಳಗಾವಿ. ೧೯೮೪

೨೦.ತುಡಗಿ. ಭೀಮನಗೌಡರ. ಪು-೫೦ ಅಕ್ಷರ ಪ್ರಕಾಶನ ಸಾಗರ ೧೯೭೩

೨೧.ತುಡಗಿ. ಭೀಮನಗೌಡರ. ಪು-೦೧ ಅಕ್ಷರ ಪ್ರಕಾಶನ ಸಾಗರ ೧೯೭೩

೨೨.ಹುಡುಗಾಟದ ಹಾಡು. ಭೀಮನಗೌಡರ. ಪು-೦೭ ಲೋಕ ವಿದ್ಯಾ ಪ್ರಕಾಶನ ಸಂಕೇಶ್ವರ ೧೯೭೭

೨೩.ಹುಡುಗಾಟದ ಹಾಡು. ಭೀಮನಗೌಡರ. ಪು-೧೫ ಲೋಕ ವಿದ್ಯಾ ಪ್ರಕಾಶನ ಸಂಕೇಶ್ವರ ೧೯೭೭

೨೪.ಹುಡುಗಾಟದ ಹಾಡು. ಭೀಮನಗೌಡರ. ಪು-೧೦ ಲೋಕ ವಿದ್ಯಾ ಪ್ರಕಾಶನ ಸಂಕೇಶ್ವರ ೧೯೭೭

೨೫.ಹುಡುಗಾಟದ ಹಾಡು. ಭೀಮನಗೌಡರ. ಪು-೪೮ ಲೋಕ ವಿದ್ಯಾ ಪ್ರಕಾಶನ ಸಂಕೇಶ್ವರ ೧೯೭೭

೨೬.ಹೋಮಾ ಎಂಬ ಪಕ್ಷಿ. ಭೀಮನಗೌಡರ. ಪು-೧೩ ಮಾಲಗತ್ತಿ ಆಫ್‌ಸೆಟ್ ಬೆಳಗಾವಿ ೧೯೯೩
೨೭..ಹೋಮಾ ಎಂಬ ಪಕ್ಷಿ. ಭೀಮನಗೌಡರ. ಪು-೨೯ ಮಾಲಗತ್ತಿ ಆಫ್‌ಸೆಟ್ ಬೆಳಗಾವಿ ೧೯೯೩

ಅಧ್ಯಾಯ ೬

ಸಮಾರೋಪ

ಉಲ್ಲೇಖಿಸಬೇಕಾಗುತ್ತದೆ.

ಭೀಮನಗೌಡರ ಅವರು ತಾವು ಓದಿದ ಕಾಲೇಜಿನ ಪರಿಸರದಿಂದ ಕವನವನ್ನು ರಚಿಸುವ ಕಲಾತ್ಮಕತೆಯನ್ನು ಕಂಡುಕೊಂಡರು. ಶಾಂತಿನಾಥ ದೇಸಾಯಿ, ಚೆನ್ನವೀರ ಕಣವಿ, ಗಿರಡ್ಡಿ ಗೋವಿಂದರಾಜ, ಚಂದ್ರಶೇಖರ ಪಾಟೀಲ ಮೊದಲಾದ ಕವಿ ವಿಮರ್ಶಕರ ಪ್ರೇರಣೆಯಿಂದ ಬರೆಯಲು ಪ್ರಾರಂಭಿಸಿದವರು. ಅವರು ನವ್ಯದ ಜಾಡಿನಲ್ಲಿ ಕಾವ್ಯ ಬರೆಯಲು ಆರಂಭಿಸಿ, ನವ್ಯೋತ್ತರದಲ್ಲಿ ವಿಶೇಷ ಕೃಷಿ ಮಾಡಿದರೆನ್ನಬೇಕು. ಅವರ ಕಾವ್ಯದ ಹಲವು ಮಹತ್ವ ಪೂರ್ಣವಾದ ಆಶೆಗಳನ್ನು ಹೀಗೆ ಸೂತ್ರಿಕರಿಸಬಹುದು:

೧. ನಿಸರ್ಗ: ನಗರ–ಗ್ರಾಮೀಣ–ನಾಗರಿಕ, ಪ್ರಜ್ಞೆಯ ಹಿನ್ನಲೆ ಇದೆ.
೨. ಸಾಮಾಜಿಕ, ರಾಜಕೀಯ ಮನೋಭಾವದ ಅಭಿವ್ಯಕ್ತಿಯ ಚಿಂತನೆ.
೩. ಕಾಮ–ಪ್ರೇಮ–ಲೈಂಗಿಕತೆ ನೈಸರ್ಗಿಕವಾಗಿ ಕಂಡುಬರುತ್ತದೆ.
೪. ಕನಸುಗಾರಿಕೆ–ವಾಸ್ತವ ಪ್ರಜ್ಞೆಯ ಪ್ರಯೋಗಶೀಲತೆ ಇದೆ.
೫. ಇವು ಬಾವುಕತೆಯ ಅಥವಾ ಭಾವನಾತ್ಮಕ ಕವನಗಳಲ್ಲ ವಿಚಾರವನ್ನು ಪ್ರಚೋದಿಸುವ ಕವನಗಳು.
೬. ನಾಟಕೀಯತೆ–ಸಂಭಾಷಣೆ, ಗೀತಾತ್ಮಕತೆ, ಗದ್ಯಮಯತೆ, ಜಾನಪದ ಇತ್ಯಾದಿ ದಾಟಿಯನ್ನೂ ಬಳಸಿ ವಿಚಾರ–ಅನಿಸಿಕೆಗಳ ಅಭಿವ್ಯಕ್ತಿ ಕಾಣಿಸುವ ರಚನೆಗಳು.
೭. ಆಡು ಮಾತಿನ ಲಯಗಳಲ್ಲಿ, ದೈನಂದಿನ ಜೀವನಕ್ಕೆ ಹೊಂದಿಕೊಂಡ ಪ್ರತಿಮೆಗಳಲ್ಲಿ ಒಂದು ರೀತಿಯ ಸ್ವಯಂ ಸ್ಫೂರ್ತಿಯಾದ ಜಾಣ್ಮೆ ಕಂಡು ಬರುತ್ತದೆ.
೮. ಧ್ವನಿ, ಲಯಗಳ ಮೇಲೆ ಕೋಮಲ–ಕಠಿಣವಾದ ಹಿಡಿತವಿದೆ.
೯. ನಾಗರಿಕ ಸಂಸ್ಕೃತಿಯ, ಆಧುನಿಕ ಸಂಸ್ಕೃತಿಯ ನಡುವಿನ ವ್ಯತ್ಯಾಸವಿದೆ.
೧೦. ಭಾಷೆಯ ಮೇಲಿನ ವಿಶಿಷ್ಟ ಹಿಡಿತದಿಂದಾಗಿ ಅವರು ಹೊಸ ಕವಿಗಳಲ್ಲಿಯೇ ಹೆಚ್ಚು ಭರವಸೆಯ ಹುಟ್ಟಿಸುವವರಾಗಿ ಕಾಣುತ್ತಾರೆ.
೧೧. ಸಮಾಜ ಮತ್ತು ವ್ಯಕ್ತಿಯ ದ್ವಂದ್ವಗಳನ್ನು ಕಾವ್ಯವಾಗಿಸುವಲ್ಲಿ ಕವಿ ಸಫಲರಾಗಿದ್ದಾರೆ.
೧೨. ಭಾಷೆ ಮತ್ತು ಜಾನಪದ ಲಯ, ಗತ್ತುಗಳಲ್ಲಿ ಕಳೆದು ಹೋಗದೆ ಅದನ್ನು ಯಾಂತ್ರಿಕತೆಯಲ್ಲಿ ಸೆರೆಹಿಡಿಯುವ ಪ್ರಯತ್ನವಿದೆ.

ಉತ್ತರ ಕರ್ನಾಟಕದಲ್ಲಿ ನವ್ಯ ಸಾಹಿತ್ಯವನ್ನು ಬಹಳಷ್ಟು ಸಮರ್ಥವಾಗಿ ದುಡಿಸಿಕೊಂಡ ಕವಿಯೆಂದರೆ, ಭೀಮನಗೌಡರ ಅವರು. ಅಡಿಗರ ಪ್ರಭಾವದಿಂದ ಉತ್ತೇಜಿತರಾಗಿ, ಮತ್ತು ಕೆಲವು ಇಂಗ್ಲಿಷ್ ಕವಿಗಳ ಪ್ರಭಾವವು ಇವರ ರಚನಾ ಪ್ರೇರಣೆಗೆ ಕಾರಣವಾಗಿದೆ. ಅವರ ಕವನಗಳನ್ನು ಅಲ್ಲಲ್ಲಿ ಓದಿ, ಅವುಗಳಲ್ಲಿಯ ಒಂದು ವಿಶಿಷ್ಟ ರೀತಿಯ ಸಂವೇದನೆ, ಶಬ್ದ–ಲಯಗಳ ಹಿಡಿತ, ಪ್ರತಿಮೆಗಳ ಮಿಂಚು ಮುಂತಾದವುಗಳನ್ನು ಗುರುತಿಸಿ, ಅವರಲ್ಲಿ ಬೆಳೆಯುವ ಲವಲವಿಕೆಯಿದೆ, ಸಾಮರ್ಥ್ಯವಿದೆ ಎಂದು ಆಗಲೇ

ತೋರಿಸಿಕೊಟ್ಟಿದ್ದಾರೆ. ಕೆಲವು ಕವಿಗಳು ಅವರನ್ನು ಹುರುದುಂಬಿಸುತ್ತಿದ್ದ ಸಂದರ್ಭದಲ್ಲಿ 'ತುಡುಗಿ' ಎಂಬ ಕವನ ಸಂಕಲನ ಪ್ರಕಟಿಸುವದರ ಮೂಲಕ ಈಗ ರಸಿಕರ ಮುಂದೆ 'ತಾಟಿನಲ್ಲಿ ಬಡಿಸಿ' ಊಟ ರುಚಿಯಿದೆಯೇ? ಎಂದು ಕೇಳುವ ಕವಿಯ, 'ಊಟ' ಎಂಬ ಅವರ ತುಡುಗಿಯ ಕವನ ಸಂಕಲನದಲ್ಲಿ ಕೊನೆಯ ಕವಿತೆ ನೋಡಿದರೆ ಸಹೃದಯರ ಮನದಂಗಳದಲ್ಲಿ ಹೊಸ ಬೆಳಕನ್ನು ನೀಡುತ್ತದೆ.

'ನಾನು ಕಣ್ಣು ತೆರದಂದಿನಿಂದ
ಹಾರಾಡಿ
ನೆಲ ಗೆಬರಿ
ತೆನೆ ಹರಿದು
ಕಾಳು ಆಯ್ದು
ಚುಂಚಿಲ್ಲಿ ಹಿಡಿದು
ಗಡಿಗೆಯಲ್ಲಿ ಸುರುವಿ
ಇದ್ದಷ್ಟು ನೀರು ಬಸಿದು
ಉರುವಲಕ್ಕೆ ಉರಿ ಹಚ್ಚಿ
ನಾನೇ ಉಪ್ಪುಖಾರ ಬೆಲ್ಲ
ಮಸಾಲೆ ಬೆರಸಿ
ಕತ ಕತ ಕುದಿಸಿ
ಗರ ಗರ ತಿರುವಿ
ಬೇಯುವ ತನಕ
ಹೆಣ ಕಾಯ್ದಂತೆ ಕಾಯ್ದು
ಕಸರತ್ತೂ ಮಾಡಿದಂತೆ
ಮೈಯಲ್ಲಿ ಬೆವತು
ಅಂತೂ ಅಡಿಗೆ ಮಾಡಿ
ನಿಮ್ಮ ನಿಮ್ಮ ತಾಟಿನಲ್ಲಿ
ಬಡಿಸಿ
ಉಂಡವರ ಕೇಳುತ್ತೇನೆ
ಊಟ ರುಚಿಯಿದೆಯೇ?"   (ಊಟ)[೩]

ಕವಿಯಲ್ಲಿ ಹುಟ್ಟುವ ಸೃಜನಶೀಲತೆಯು ಎಷ್ಟೊಂದು ಅರ್ಥಪೂರ್ಣವಾಗಿದೆ, ಪ್ರತಿಯೊಬ್ಬ ಕವಿಗೆ ಇದು ಕಾಡುವ ಪ್ರಶ್ನೆಯಾಗಿದೆ. ಕವಿತೆ ಹುಟ್ಟಬೇಕಾದರೆ ಕವಿಯ ಹೃದಯದ ಕಣ್ಣು ತೆರೆಯಬೇಕಾಗುತ್ತದೆ. ಆಗ ಜಗತ್ತಿನ ಹೃದಯದ ಕಣ್ಣು ತೆರೆಯುತ್ತದೆ. ಇದರ ಹಿಂದೆ ಪ್ರಯತ್ನ, ಪರಿಶ್ರಮವು, ನಿರಂತರವಾಗಿ ಕೆಲಸ ಮಾಡುತ್ತದೆ. ಆಗ ಒಂದು

ಸ್ಫೂರ್ತಿ, ಚೈತನ್ಯ, ಹೊಸದನ್ನು ಕಟ್ಟುವ ಕೆಲಸಕ್ಕೆ ಕವಿಯ ಮನಸು ಹಾತೊರೆಯುತ್ತದೆ, ಆಗ ಅದಕ್ಕೊಂದು ಸಂಸ್ಕಾರವು ದೊರೆಯುತ್ತದೆ. ಎಂದು ಕವಿ ಭೀಮನಗೌಡರ ಅವರು ತಮ್ಮ ಅನುಭವವನ್ನು ಸಹೃದಯರ ಮುಂದೆ ಪ್ರಾಮಾಣಿಕವಾಗಿ ವ್ಯಕ್ತಪಡಿಸಿದ್ದಾರೆ.

"ಸೃಜನಶೀಲತೆ ಗೌಡರಿಗೆ ಬಿಡಲಾಗದ ಹವ್ಯಾಸ, ನಾಟಕಗಳಲ್ಲೂ ಒಳ್ಳೆಯ ಅಭಿನಯ ಗೌಡರದ್ದು ಧಾರವಾಡದಲ್ಲಿ ಓದುತ್ತಿದ್ದಾಗಲೇ ಚನ್ನವೀರ ಕಣವಿ, ಶಾಂತಿನಾಥ ದೇಸಾಯಿ ಅವರ ಸಾಮಿಪ್ಯ ಬೆಳೆಯಿತು. ಚಂಪಾ ಅವರ "ಗೋಕಾರ್ಣದ ಗೌಡಶಾನಿ" "ಕುಂಟಾ ಕುಂಟಾ ಕುರುವತ್ತಿ" ಕುಸನೂರರ "ಆನಿ ಬಂತಾನಿ"-ಇವೇ ಮೊದಲಾದ ನಾಟಕಗಳಲ್ಲಿ ಸಮರ್ಥ ಅಭಿನಯ ನೀಡಿದ್ದಾರೆ. ಗೋಕರ್ಣದ 'ಗೌಡಶಾನಿ' ನಾಟಕದಲ್ಲಿಯ ಗೌಡರ ರಾವಣನ ಪಾತ್ರವಂತೂ ಜನಮನ ಸೂರೆಗೊಂಡಿತು ಭೀಮನಗೌಡರ ತಂದೆ ಹವ್ಯಾಸಿ ರಂಗಭೂಮಿಯಲ್ಲಿ ಪ್ರಸಿದ್ಧ ಪಾತ್ರಧಾರಿಯಾಗಿದ್ದರು. ಕೃಷ್ಣ ಮತ್ತು ಅರ್ಜುನನ ಪಾತ್ರಗಳಲ್ಲಿ ಖ್ಯಾತಿ ಪಡೆದವರಾಗಿದ್ದರು. ಒಂದು ರೀತಿಯಲ್ಲಿ ಗೌಡರಲ್ಲಿ ಹವ್ಯಾಸವಾಗಿ ಬೆಳೆದು ಬಂದಿರುವ ನಾಟಕಕ್ಕೆ ಅವರ ತಂದೆಯೇ ಮುಖ್ಯ ಪ್ರೇರಣೆ"[೪]

ಭೀಮನಗೌಡರ ಸೃಜನಶೀಲ ವ್ಯಕ್ತಿತ್ವ ಗಮನಾರ್ಹವಾಗಿದೆ. ಅವರ ನಾಲ್ಕು ಕವನ ಸಂಕಲನದಲ್ಲಿ ಹಲವಾರು ಆಯಾಮಗಳನ್ನು ಭಿನ್ನ ಭಿನ್ನ ರೂಪದಲ್ಲಿ ವ್ಯಕ್ತಪಡಿಸಿದ್ದಾರೆ. ವ್ಯಕ್ತಿ ಹಾಗೂ ಸಮಾಜದಲ್ಲಿಯ ದ್ವಂದ್ವಗಳು ಕವನದಲ್ಲಿ ಒಡಮೂಡಿವೆ. ಕೆಲವೊಮ್ಮೆ ಕವಿಯ ಕವನವನ್ನು ಓದುತ್ತಾ ಹೋದಂತೆ ನಮ್ಮ ಮನಸು ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ಇವರ ಕವನದ ಗುಣ ಅವುಗಳ ಭಾಷೆ ಜಾನಪದದ ಲಯ, ಗತ್ತುಗಳಲ್ಲಿ ಅಡಗಿಕೊಳ್ಳದೆ ಅದು ಸ್ಪಷ್ಟತೆಯ ಬೆಳಕಿನಲ್ಲಿ ಮೂಡಿ ಬಂದಿದೆ. ಹೇಳಬೇಕಾದದ್ದನ್ನು ಕವಿ ಕೆಲವೇ ಪದಗಳನ್ನು ಮಿತವಾಗಿ ಬಳಸುತ್ತಾರೆ ಆದರೆ ಅದರ ಒಳಗಿರುವ ಸಪ್ತವಾಗಿರುವ ವಿಷಯವು ತಟ್ಟನೆ ನಮ್ಮ ಮನಸ್ಸನ್ನು ಆಕ್ರಮಿಸುವದಿಲ್ಲ. ಒಮ್ಮೊಮ್ಮೆ ನಮಗೆ ಅಸ್ಪಷ್ಟತೆಯಂತೆ ಕಾಣುತ್ತದೆ ಮತ್ತೊಮ್ಮೆ ಅದರ ಆಳಕ್ಕೆ ಇಳಿದಾಗ ಅದು ಸ್ಪಷ್ಟತೆಯನ್ನು ನೀಡುತ್ತದೆ. ಅವರ ಭಾಷಾ ಸಾಮರ್ಥಕ್ಕೆ ಮರುಳಾದ ಓದುಗರಿದ್ದಾರೆ.

ಭೀಮನಗೌಡರ ಕವಿತೆಗಳು ಬೇರೆ ಕವಿಗಳಿಗಿಂತಲೂ ಭಿನ್ನ ರೂಪವೆನ್ನಿಸುವ ಒಂದು ವಿಶಿಷ್ಟ ಗುಣವನ್ನು ಪಡೆದಿವೆ. ಅವರ 'ತುಡುಗಿ' ಕವನದಲ್ಲಿ ಕಾಮ-ಪ್ರೇಮದ ಧೋರಣೆಗಳು ಹಾಸುಹೊಕ್ಕಾಗಿ ಬೆಳೆದಿವೆ. 'ಹುಡುಗಾಟದ ಹಾಡು' ಕವನ ಸಂಕಲನದಲ್ಲಿ ಕಾವ್ಯದ ಶರೀರ ಇಲ್ಲಿ ಉತ್ತರ ಕರ್ನಾಟದ ಆಡುಮಾತಿನ ಶೈಲಿಯ ಧಾಟಿಯಲ್ಲಿ ರೂಪಕ, ಪ್ರತಿಮೆ, ಮುಂತಾದ ಕಾವ್ಯ ಪರಿಕರಗಳು ಇಲ್ಲಿ ಗೌಣವಾಗುತ್ತವೆ. ಮಾತಿನ ಜಾಣತನ ಮಾತಿನ ಕೊಂಕು ಇಲ್ಲಿ ಕಾವ್ಯದ ಧ್ವನಿಯನ್ನು ನಿಯಂತ್ರಿಸುವ ಪ್ರಮುಖ ಅಂಶಗಳು. 'ನೆಲ ಹಿಡಿಯುವ ಮೊದಲು' ಕವನ ಸಂಕಲನ ನಿಜವಾಗಿಯೂ ಓದುಗರ ಗಮನವನ್ನು ಸೆಳೆಯುವಂಥದು. ನಾಲ್ಕನೆಯ ಕವನ ಸಂಕಲನ 'ಹೋಮಾ ಎಂಬ ಪಕ್ಷಿ' ಭಾಷೆ, ಶೈಲಿಯಿಂದ, ರಾಜಕೀಯ, ಸಾಮಾಜಿಕತೆಯ ಸ್ಥಿತಿಗಳನ್ನು ಪ್ರತಿಬಿಂಬಿಸುವ ಸಂಗ್ರಹವಾಗಿದೆ.

ಇವರ ಹಲವಾರು ವಿಮರ್ಶೆ ಕೃತಿಗಳು ಕೂಡಾ ಚರ್ಚಸತಕ್ಕ ವಸ್ತುಗಳನ್ನು ಹೊಂದಿವೆ.

ಅಲ್ಲದೆ, ಇನ್ನು ಜೀವಂತಿಕೆಯಿಂದ ಬರೆಯುವ ಉತ್ಸಾಹವನ್ನು ಹೊಂದಿದ್ದಾರೆ. ಭೀಮನಗೌಡರ ಅವರು ಕಾವ್ಯ-ಸೃಷ್ಟಿಯನ್ನು ಉತ್ತುಂಗವಾದ ಶಿಖರ ಶ್ರೇಣಿಯಲ್ಲಿ ಬೆಳೆಸುವ ಆಶಾಭಾವನೆಯನ್ನು ಹೊಂದಿದ್ದಾರೆ. ಅಂತಿಮವಾಗಿ ಅವರ ಕಾವ್ಯ ಕುತೂಹಲ ಆಶೆಯಗಳನ್ನು ಕುರಿತು ಎಲ್ಲವನ್ನು ಈ ನಿಟ್ಟಿನಲ್ಲಿ ನಿರ್ಣಯಿಸಲಿಕ್ಕೆ ಆಗುವದಿಲ್ಲ. ಅದನ್ನು ನಾವು-ನೀವುಗಳೆಲ್ಲ ಕಾದು ನೋಡಬೇಕಾದ ಅನಿವಾರ್ಯತೆ ಇದ್ದೇ ಇದೆ.

ಟಿಪ್ಪಣಿಗಳು

೧. ಕನ್ನಡ ಕಾವ್ಯ ತತ್ವ ಚಿಂತನೆ.-ಡಾ॥ಜಿ.ಎಸ್.ಶಿವರುದ್ರಪ್ಪ-ಪು-೧೭೫, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ-೨೦೦೭.

೨. ಉಧೃತ ಕಣವಿ ಮತ್ತು ಆಧುನಿಕ ಕಾವ್ಯ ಪರಂಪರೆ. ಡಾ॥ಗುಂಡಣ್ಣ ಕಲಬುರ್ಗಿ ಪು-೩೧೮, ಸೌಜನ್ಯ ಪ್ರಕಾಶನ ಮಾಡಲಗಿ-೨೦೦೦.

೩. ತುಡುಗಿ, ಎಚ್.ಎಸ್.ಭೀಮನಗೌಡರ. ಪು-೬೭, ಅಕ್ಷರ ಪ್ರಕಾಶನ ಸಾಗರ-೧೯೭೩.

೪. ಆರಾಧಕರು-ಬಾಳೇಶ ಲಕ್ಷೆಟ್ಟಿ, ಪು-೨೭-ಲೋಕವಿದ್ಯಾ ಪ್ರಕಾಶನ, ಸಂಕೇಶ್ವರ-೧೯೯೪.

ಅನುಬಂಧಗಳು

ಅನುಬಂಧ ೧

ಭೀಮನಗೌಡರ ಅವರ ಕೃತಿ ಸೂಚಿ

ಕವನ ಸಂಕಲನಗಳು:

೧. ತುಡಗಿ-೧೯೭೩, ಅಕ್ಷರ ಪ್ರಕಾಶನ, ಸಾಗರ
೨. ಹುಡುಗಾಟದ ಹಾಡು-೧೯೭೭, ಲೋಕವಿಧ್ಯಾ ಪ್ರಕಾಶನ, ಸಂಕೇಶ್ವರ.
೩. ನೆಲ ಹಿಡಿಯುವ ಮೊದಲು-೧೯೮೪, ಸ್ನೇಹಾ ಪ್ರಕಾಶನ, ಬೆಳಗಾವಿ (ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತ ಕೃತಿ)
೪. ಹೋಮಾ ಎಂಬ ಪಕ್ಷಿ-೧೯೯೩, ಮಾಲಗತ್ತಿ ಆಫ್‌ಸೆಟ್ ಪ್ರಿಂಟರ್ಸ ಮತ್ತು ಪಬ್ಲಿಷರ್ಸ ಬೆಳಗಾವಿ.

ಪ್ರವಾಸ ಸಾಹಿತ್ಯ:

ಕಲಾಮಂಡಲದ ನಾಡಿನಲ್ಲಿ-೧೯೮೬-೮೭. 'ಕನ್ನಡಮ್ಮ' ದಿನಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಿತ.

ವಿಮರ್ಶಾ ಲೇಖನಗಳು:

೧. ಪಿ. ಲಂಕೇಶರ ಸಿದ್ಧತೆ: ಸಂಕ್ರಮಣ, ೧೯೭೦
೨. ಸುಮತೀಂದ್ರರ ಪ್ರೇಮ ಪದ್ಯಗಳು:ಸಾಕ್ಷಿ, ೧೯೭೮
೩. ಭಾಗ್ಯಲಕ್ಷ್ಮಿ ಅವರ ಬೆರಳು ಸಂದಿಯ ಬದುಕು, ಸಾಕ್ಷಿ, ೧೯೭೮
೪. ಸಿದ್ದಲಿಂಗ ಪಟ್ಟಣಶೆಟ್ಟಿ ಯವರ ಪರದೇಶಿ ಹಾಡುಗಳು: ಕನಾಟಕ ಭಾರತಿ, ೧೯೮೨
೫. ಶಾಂತಿನಾಥ ದೇಸಾಯಿ ಯವರ 'ಬೀಜ': ಶೂದ್ರ,೧೯೮೭
೬. ಕವಿ ಅರವಿಂದ ನಾಡಕರ್ಣಿ: 'ಕೆಲವು ಅನಿಸಿಕೆಗಳು'-ಬೇರು ಬಿಳಲು, ೧೯೮೮
೭. ಅನುಭವದಿಂದ ಕೃತಿಯ ವರೆಗೆ, ಶೂದ್ರ-೧೯೮೮
೮. ಚನ್ನವೀರ ಕಣವಿಯವರ ಕಾಮನಸೆನ್ಸ ಕಾವ್ಯ:ಸಾಹಿತ್ಯ ವಿಮರ್ಶೆ, ೧೯೮೯ ಕರ್ನಾಟಕ ಸಾಹಿತ್ಯ ಅಕಾಡಮಿ
೯. ೧೯೯೧ ನೇ ಸಾಲಿನ ಕಾವ್ಯ: ಕರ್ನಾಟಕ ಸಾಹಿತ್ಯ ಅಕಾಡಮಿ, ೧೯೯೨
೧೦. ಬೆಳಗಾವಿ ಜಿಲ್ಲೆಯ ಕನ್ನಡ ಕಾವ್ಯ (ಜಿಲ್ಲಾ ಸಾಹಿತ್ಯದಲ್ಲಿ ಮಂಡಿತ) 'ರಜತ', ೧೯೯೨
೧೧. ಬಾಳೇಶ ಲಕ್ಷೆಟ್ಟಿ ಅವರ ಕಾವ್ಯ 'ವೀಣೆ'. ೧೯೯೩
೧೨. ಚಂದ್ರಶೇಖರ ಪಾಟೀಲ ಅವರ 'ಅರ್ಧಸತ್ಯದ ಹುಡುಗಿ'.೧೯೯೫
೧೩. ದೇಶ ಕುಲಕರ್ಣಿ ಅವರ 'ಕೂಡಿಕೊಂಡ ಸಾಲು' ಬಹುಮಾನಿತ ಕೃತಿಗಳು. ಕರ್ನಾಟಕ ಸಾಹಿತ್ಯ ಅಕಾಡಮಿ. ೧೯೯೯
೧೪. 'ಬರೆದ ಕಪಿಯ ಅನುಭವ' ಮೂಡಲಗಿಯಲ್ಲಿ ಮಂಡಿಸಿದ ಲೇಖನ. ೧೯೯೯
೧೫. ಚನ್ನವೀರ ಕಣವಿಯವರ ಅನುವಾದಿತ ಕವನಗಳು 'ಬೆಳ್ಳಿ ತೇರಿನ ದಾರಿ'. ೨೦೦೩

ಮುನ್ನುಡಿ, ಬೆನ್ನುಡಿಗಳು:

ಮುನ್ನುಡಿಗಳು

೧. 'ಅಂತೆಕಂತೆಯ ಕವನಗಳು' (ಗುರುಪಾದ ಮರಿಗುದ್ದಿ)೧೯೪೦

೨. 'ಶ್ರೀ ಸಾಮಾನ್ಯರಿಗಾಗಿ ಶ್ರೀ ಕುವೆಂಪು ಮತ್ತು ಶ್ರೀ ರಾಮಾಯಣ ದರ್ಶನಂ' (ಗುರುಪಾದ ಮರಿಗುದ್ದಿ)೧೯೯೩

೩. 'ಸತ್ಯದ ಗುಡಿಯ ಸುತ್ತ' (ಬಿ.ಆರ್.ಪೊಲೀಸ್ ಪಾಟೀಲ)೧೯೯೭

ಬೆನ್ನುಡಿಗಳು

೧. 'ಗುಬ್ಬಕ್ಕ ಬಾಗಿಲು ತೆಗೆಯೆ' (ಎಲ್.ವಿ.ಪಾಟೀಲ)–೧೯೭೭

೨. 'ಬಿಂದು' (ಶ್ರೀಶೈಲ ಮಠಪತಿ) ೨೦೦೬

ಅನುಬಂಧ–೨
ಗ್ರಂಥಋಣ

೧. ಅನಂತಮೂರ್ತಿ ಯು.ಆರ್. **ನವ್ಯಾಲೋಕ.** ಅಕ್ಷರ ಪ್ರಕಾಶನ, ಹೆಗ್ಗೊಡು (ಸಾಗರ) ಕರ್ನಾಟಕ. ೧೯೯೨

೨. ಅನಂತನಾರಾಯಣ ಎಸ್. **ಕನ್ನಡ ಕಾವ್ಯದ ಮೇಲೆ ಇಂಗ್ಲೀಷ ಗೀತೆಗಳ ಪ್ರಭಾವ** ರಾಜಲಕ್ಷ್ಮಿ ಪ್ರಕಾಶನ. ಬೆಂಗಳೂರು. ೧೯೭೬

೩. ಆಕ್ಕಿ, **ಸಾಹಿತ್ಯ ಪ್ರಕ್ರಿಯೆ,** ನವಕರ್ನಾಟಕ ಪ್ರಕಾಶನ ಬೆಂಗಳೂರು. ೧೯೯೫

೪. ಕಲಬುರ್ಗಿ ಗುಂಡಣ್ಣ, **ಕಣವಿ ಮತ್ತು ಆಧುನಿಕ ಕಾವ್ಯ ಪರಂಪರೆ,** ಸೌಜನ್ಯ ಪ್ರಕಾಶನ, ಮೂಡಲಗಿ. ೨೦೦೦

೫. ಕೀರ್ತಿನಾಥ ಕುರ್ತಕೋಟಿ, **ನವ್ಯ ಕಾವ್ಯ ಪ್ರಯೋಗ,** ಮನೋಹರ ಗ್ರಂಥಮಾಲಾ ಧಾರವಾಡ. ೧೯೭೫

೬. ಕುಲಕರ್ಣಿ ಹೇಮಂತ, **ಕಾವ್ಯದಲ್ಲಿ ನವ್ಯತೆ** ನಿರ್ದೇಶಕರು ಪ್ರಸಾರಾಂಗ ಮೈಸೂರು. ೧೯೮೬

೭. ಗಿರಡ್ಡಿ ಗೋವಿಂದರಾಜ, **ನವ್ಯ ವಿಮರ್ಶೆ** ಅಕ್ಷರ ಪ್ರಕಾಶನ ಸಾಗರ. ೧೯೭೫

೮. ಗೋಕಾಕ ವಿ.ಕೃ. ಗೋಕಾಕ **ನವ್ಯತೆ,** ಸುರಸ್ವತೀಪುರಂ ಮೈಸೂರು. ೧೯೭೫

೯. ನಾಗಭೂಷಣ ಸ್ವಾಮಿ ಓ.ಎಲ್.:**ಸಾಹಿತ್ಯ ವಿಮರ್ಶೆ** ಕರ್ನಾಟಕ ಸಾಹಿತ್ಯ ಅಕಾಡಮಿ ಬೆಂಗಳೂರು. ೧೯೮೯

೧೦. ಸಾಗರಾಜ ಡಿ.ಆರ್. **ಶಕ್ತಿ ಶಾರದೆಯ ಮೇಳ,** ಅಕ್ಷರ ಪ್ರಕಾಶನ ಹೆಗ್ಗೋಡು. ೨೦೦೨

೧೧. ನಾಯಕ್ ಕೆ.ಪಿ.: ಪ್ರೊ.ಪಾಟೀಲ ಎಲ್.ವಿ. **ಕಾವ್ಯ ಸಂಚಯ–೧** ಕ.ವಿ.ವಿ.ಧಾರವಾಡ. ೨೦೦೦

೧೨. ಬಾಲಸುಬ್ರಹ್ಮಣ್ಯ ನರಹಳ್ಳಿ: **ನವ್ಯತೆ,** ಕರ್ನಾಟಕ ಸಾಹಿತ್ಯ ಅಕಾಡಮಿ ಬೆಂಗಳೂರು. ೧೯೯೯

೧೩. ವೃಷಭೇಂದ್ರಸ್ವಾಮಿ ಎಸ್.ಎಂ.**ಸಹೃದಯ ವಿಮರ್ಶೆ**, ಪ್ರಸಾದ ಪ್ರಕಾಶನ ಧಾರವಾಡ. ೧೯೯೪

೧೪. ಶರ್ಮ ರಾಮಚಂದ್ರ, **ಸಮಗ್ರ ಕಾವ್ಯ** ಪತ್ರಿಕೆ ಪ್ರಕಾಶನ ಬೆಂಗಳೂರು. ೧೯೮೭

೧೫. ಶಿವರುದ್ರಪ್ಪ ಜಿ.ಎಸ್. **ಸೌಂದರ್ಯ ಸಮೀಕ್ಷೆ**, ಶಾರದಾ ಪ್ರಕಾಶನ ಬೆಂಗಳೂರು ೧೯೮೭

೧೬. ಶಿವರುದ್ರಪ್ಪ ಜಿ.ಎಸ್. **ಕನ್ನಡ ಸಾಹಿತ್ಯ ಸಂದರ್ಭ**, ಕನ್ನಡ ಸಾಹಿತ್ಯ ಅಕಾಡಮಿ ಬೆಂಗಳೂರು. ೧೯೯೦

೧೭. ಶಿವರುದ್ರಪ್ಪ ಜಿ.ಎಸ್. **ಕನ್ನಡ ಕಾವ್ಯ ತತ್ವ ಚಿಂತನೆ**, ಕನ್ನಡ ವಿಶ್ವವಿದ್ಯಾಲಯ ಹಂಪಿ. ೨೦೦೭

೧೮. ಶೇಷಗಿರಿರಾವ್ ಎಲ್.ಎಸ್. **ಸಾಹಿತ್ಯ ಬದುಕು**, ಐ.ಬಿ.ಎಚ್. ಪ್ರಕಾಶನ ಬೆಂಗಳೂರು. ೧೯೮೮

೧೯. ಶೇಷಗಿರಿರಾವ್. ಎಲ್.ಎಸ್.**ಹೊಸಗನ್ನಡ ಸಾಹಿತ್ಯ ಚರಿತ್ರೆ**, ಅಂಕಿತ ಪುಸ್ತಕ ಬೆಂಗಳೂರು. ೨೦೦೨

೨೦. ಸಾದರ ಬಸವರಾಜ, **ಕನ್ನಡ ಸಾಹಿತ್ಯ ಘಟ್ಟಗಳು** ಕರ್ನಾಟಕ ವಿದ್ಯಾವರ್ಧಕ ಸಂಘ ಧಾರವಾಡ. ೨೦೦೨

೨೧. ಸುಮತೇಂದ್ರ ನಾಡಿಗ **ವಿಮರ್ಶೆಯ ದಾರಿಯಲ್ಲಿ**, ಕರ್ನಾಟಕ ಬುಕ್ ಎಜೆನ್ಸಿ ಬೆಂಗಳೂರು. ೧೯೯೪

AKSHARA GRANTHALAYA
ACC.NO. 130070